an audience to be given in this House, to say what he wants to by way of a point of order.

Mr. SPEAKER.—I know the courtesy myself. I need not be told about that. I only stated that the member could not raise a point of order in a vacuum. To draw inferences would be uncharitable.

Sri G. VENKATAI GOWDA (Palaiyam).-Suppose something happens fifteen minutes after I spoke; am I not entitled to raise a point of order ?

Mr. SPEAKER.—I am not here to discuss an hypothetical question.

Sri H. M. CHANNABASAPPA (Minister for Public Works and Electricity).—What is meant by 'vacuum'?

Mr. SPEAKER.—There was no subject before the House. Sri Bomme Gowda had only stood up and not put the question.

ಶ್ರೀ ಎ. ಮುನಿಯಪ್ಪ (ಚಿಕ್ಕಬಳ್ಳಾಪುರ).—ತಮ್ಮ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಮಾಡಿ ಈ ಸಭೆಯ ನಡವಳಿಕೆಗಳು ಹೀಗೀಗೇ ನಡೆಯಬೇಕೆಂದು ಗೊತ್ತಾದ ನಂತರ ಈ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅದರಂತೆ ತೀರ್ಮಾನ ಕೊಟ್ಟಿದ್ದೀರಿ. ಅದರ ಪ್ರಕಾರ ಯಾರಾದರೂ ಕ್ರಿಯಾಲೋಪ ಎತ್ತಿದರೆ ಅದಕ್ಕೆ ತಾವು ಮನ್ನಣೆ ಕೊಟ್ಟು ಸರ್ಕಾರದಿಂದ ಉತ್ತರ ಕೊಡಿಸುವುದು ತಮ್ಮ ಕರ್ತವ್ಯ. ಅದರಮೇಲೆ ನಾನು ಕ್ರಿಯಾಲೋಪ ಎತ್ತಿದ ತಕ್ಷಣ ಅದರ ರೂಪ ತಮಗೆ ಗೊತ್ತಿಲ್ಲದೆ ಅದರಮೇಲೆ 'No point of order' ಎಂದು ಹೇಳುವಾಗ ನೀವು ಮಾಡಿದ ಆರ್ಡರಿಗೆ ನೀವೇ ಬೆಲೆಕೊಡದೇ ಇದ್ದರೆ ಏನು ಮಾಡುವುದು ?

ಅಧ್ಯಕ್ಷರು.—ಕ್ರಿಯಾಲೋಪ ಆ ರೀತಿ ಬರುವುದಿಲ್ಲ. ನಾನು ಹೇಳುವುದಿಷ್ಟೆ. ಹಿಂದಿನ ಪ್ರಶ್ನೆ ಮುಗಿದಿತ್ತು. ಮುಂದಿನ ಪ್ರಶ್ನೆಯನ್ನು ಕರೆದಿದ್ದೆ. ಶ್ರೀ ಬೊಮ್ಮೇಗೌಡರು ಪ್ರಶ್ನೆ ಹಾಕುತ್ತಿದ್ದರು. ಆದ್ದರಿಂದ ಆ ಪ್ರಶ್ನೆಗೆ ಸಂಬಂಧಿಸಿದಂತೆ ಕ್ರಿಯಾಲೋಪ ಉಂಟಾಗುವುದಿಲ್ಲ.

BUDGET ESTIMATES FOR 1959-60—DEMANDS FOR GRANTS

Demand No. 20—Education.

37. *Education.*

(Discussion Continued).

ಶ್ರೀ ವೈ. ವೀರಪ್ಪ (ಹೊಳೇನರಸೀಪುರ).—ಮಾನ್ಯ ಅಧ್ಯಕ್ಷರೇ, ವಿದ್ಯಾಭ್ಯಾಸದ ಬಾಬಿಗಾಗಿ 11 ಕೋಟಿ ಚಿಲ್ಲರೆ ಹಣವನ್ನು ಕೊಡಬೇಕೆಂಬ ಬಗ್ಗೆ ನಾವು ಈಗ ಇಲ್ಲಿ ಚರ್ಚೆ ಮಾಡಬೇಕಾಗಿದೆ, ನಿನ್ನೆ ದಿವಸ ಈ ಬಾಬಿನ ಬಗ್ಗೆ ಮಾತನಾಡಿದ ನನ್ನ ಅನೇಕ ಸ್ನೇಹಿತರು ತಮ್ಮ ತಮ್ಮ ಅಭಿಪ್ರಾಯಗಳನ್ನು ಪ್ರತಿಬಿಂಬಿಸಿದ್ದಾರೆ. ಎಲ್ಲಾ ಇಲಾಖೆಗಳನ್ನು ತೆಗೆದು ಕೊಂಡರೆ, ಸಮಾಜ, ದಲ್ಲಿ ದೇಶಾಭಿವೃದ್ಧಿಯಾಗುವ ಒಂದು ಗುರಿಯನ್ನು ನಾವು ನೋಡಿದರೆ ಹೆಚ್ಚಿನ ಮಹತ್ವ ಮತ್ತು ಕಿಮ್ಮತ್ತನ್ನು ವಿದ್ಯಾಭ್ಯಾಸದ ಇಲಾಖೆಗೆ ಕೊಡಬೇಕೆಂಬುದು ಪ್ರಾಚೀನ ಕಾಲದಿಂದ ಬಂದುದಾಗಿದೆ. ಈಗ ನಮ್ಮಲ್ಲಿ ಸ್ವಾತಂತ್ರ್ಯವನ್ನು ಗಳಿಸಿದಲಾಗಾಯಿತು ಈ ಬಾಬಿಗೆ ಎಷ್ಟೋ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಎರಡನೆಯ ಪಂಚವಾರ್ಷಿಕ ಯೋಜನೆಯ ಅವಧಿಯನ್ನು ಮುಗಿಸುತ್ತಿದ್ದೇವೆ. ಈ ಬಾಬಿಗೆ ಕೋಟ್ಯಾಂತರ ರೂಪಾಯಿಗಳನ್ನು ಈಗಾಗಲೇ ಖರ್ಚುಮಾಡಿದ್ದೇವೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒಟ್ಟು 4,800 ಕೋಟಿ ರೂಪಾಯಿಗಳನ್ನು ಖರ್ಚುಮಾಡುವ ಪೈಕಿ 325 ಕೋಟಿ ರೂಪಾಯಿಗಳನ್ನು ವಿದ್ಯಾಭ್ಯಾಸಕ್ಕಾಗಿ ಮಾತ್ರ ಉಪಯೋಗಿಸಬೇಕೆಂದು ಲೋಕಸಭೆಯವರು ವಿಚಾರ ದೃಷ್ಟಿಯಿಂದ ಈ ಯೋಜನೆಯಲ್ಲಿ ಅಳವಡಿಸಿದ್ದಾರೆ. ಆದರೆ ಈ ಬಗ್ಗೆ ಕಾರ್ಯಸಾಧನೆಗಳು ಎಷ್ಟರಮಟ್ಟಿಗೆ ನಡೆದಿವೆ ಎಂಬುದನ್ನು ನೋಡಿದರೆ ನಿಜವಾಗಿ ನಿರಾಶಾದಾಯಕವಾಗಿ ಕಾರ್ಯಗಳಾಗಿವೆ ಎಂದು ಹೇಳಿದರೆ ಏನೂ ತಪ್ಪಾಗಲಾರದು. ಉದಾಹರಣೆಗೆ ಸಮಾಜ ಮುಂದೆ ಉದ್ಧಾರವಾಗಬೇಕಾದರೆ, ಸುಭದ್ರವಾಗಿ ಬೆಳೆಯಬೇಕಾದರೆ ವಿದ್ಯಾಭ್ಯಾಸದ ಇಲಾಖೆಗೆ ಸರ್ಕಾರ ಕೊಡುತ್ತಿರುವ ಗಮನ, ಆಡಳಿತ ನಡೆಸುತ್ತಿರುವ ರೀತಿ ನೀತಿಗಳು ಎಷ್ಟರ ಮಟ್ಟಿಗೆ ಫಲಕಾರಿಯಾಗುತ್ತಿವೆ ಎನ್ನುವುದನ್ನು ಪರಿಶೀಲಿಸಿನೋಡಿದರೆ, ನಾವು ನಿರೀಕ್ಷಿಸಿದಷ್ಟು ಪ್ರತಿಫಲ ದೊರಕಲಿಲ್ಲವೆಂದು ನನಗೆ ಕಾಣುತ್ತದೆ. ಮುಂದೆ ಒಂದು ದೊಡ್ಡ ಸಮಾಜವನ್ನು ಕಟ್ಟಬೇಕು, ನಮ್ಮ ದೇಶವನ್ನು ಒಂದು ಬಲಿಷ್ಠವಾದ ರಾಷ್ಟ್ರವನ್ನಾಗಿ ಮಾಡಬೇಕೆಂಬುದು ನಮ್ಮೆಲ್ಲರ ತೀವ್ರ ಆಶೆಯಾಗಿದೆ. ಇನ್ನು ನರ್ಸರಿ ಸ್ಕೂಲ್ ಮತ್ತು ಪ್ರೈಮರಿ ಸ್ಕೂಲ್‌ಗಳ ಬಗ್ಗೆ ಮಹತ್ತರ ಕಿಮ್ಮತ್ತು ಕೊಡಬೇಕು. ಅದನ್ನು ಪರಿಶೀಲನೆ ಮಾಡಿದರೆ ಈಗ ನಮ್ಮಲ್ಲಿರತಕ್ಕ ಪ್ರಿ-ಪ್ರೈಮರಿ ಅಥವ ನರ್ಸರಿ ಸ್ಕೂಲುಗಳ ಚಟುವಟಿಕೆಗಳು ಅಷ್ಟು ಆಶಾದಾಯಕವಾಗಿಲ್ಲ, ಅಮೇರಿಕಾ ದೇಶದಲ್ಲಿ 3 ವರ್ಷಗಳಿಂದ 5 ವರ್ಷಗಳವರೆಗೆ ಒಂದು ಕಡಾಯವಾದ ಶಿಕ್ಷಣವನ್ನು ರಾಷ್ಟ್ರದ ಮುಂದಿನ ಜನಾಂಗವನ್ನು ರೂಪಿಸಬೇಕೆಂಬ ದೃಷ್ಟಿಯಿಂದ ಮುಂದಿನ ಗುರಿ ಏನಿದೆ ಎಂಬುದನ್ನು ತಿಳಿಯಲು ಮತ್ತು ಅದು ಯಾವರೀತಿ ಅಭಿವೃದ್ಧಿಯಾಗಬೇಕು ಎಂಬ ಮುಖ್ಯಾಂಶವನ್ನು ಗಮನದಲ್ಲಿಟ್ಟು ಕೊಂಡು ಪ್ರಥಮ ರೀತಿಯಲ್ಲಿ ಕೊಡುತ್ತಾರೆ. ಈಗ್ಗೆ ಹತ್ತಾರು ವರ್ಷಗಳು ಉರುಳಿದ್ದರೂ ಈ ಕಾಲದಲ್ಲ ಅಲ್ಲಿ ನೂರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದರೂ ನಿರೀಕ್ಷಿಸಿದಷ್ಟು ಪ್ರತಿಫಲ ದೊರಕಲಿಲ್ಲ. ಅಂದಮೇಲೆ ನಾವು ಎಷ್ಟು ಹೆಚ್ಚಿನ ಮಟ್ಟದಲ್ಲಿ ಈ ಬಾಬಿಗೆ ಖರ್ಚುಮಾಡಿದರೆ ನಮಗೆ ಅದರಿಂದೇನು ಫಲ ದೊರಕುತ್ತದೆ ಎಂಬುದನ್ನು ಪರಿಶೀಲಿಸಬೇಕು. ನಾವು ಕೇವಲ ಆಸ್ತಿಕವಾಗಿ ಮುಂದಿನ ವರುಷ ಸರಿಮಾಡುತ್ತೇವೆ ಎಂಬ ದೃಷ್ಟಿಯಿಂದ ಈ ಮಾಮೂಲಾದ ಡಿಮ್ಯಾಂಡನ್ನು ಈಗಲೂ ಚರ್ಚೆಮಾಡುತ್ತಿದ್ದೇವೆ. ಮುಖ್ಯವಾಗಿ ಸರ್ಕಾರದವರಿಗೆ ಈಗಿನ ಬಾಲಕ ಬಾಲಕಿಯರಲ್ಲಿ ವಿದ್ಯಾಭ್ಯಾಸ ಒಂದು ಹೆಚ್ಚಿನ ಮಟ್ಟದಲ್ಲಿ ಬೆಳೆಯಲಿ ಎಂಬ ಇಚ್ಛೆ ಇರಬೇಕು.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಮಾನ್ಯ ಸದಸ್ಯರು ವಿದ್ಯಾಭ್ಯಾಸದ ಡಿಮ್ಯಾಂಡ್ ಮೇಲೆ ಮಾತನಾಡುವಾಗ ವಿದ್ಯಾಮಂತ್ರಿಗಳು ಯಾವುದೋ ಫೈಲನ್ನು ನೋಡಬಹುದೇ ?

ಅಧ್ಯಕ್ಷರು.—ಮಂತ್ರಿಗಳು ಸದಸ್ಯರ ಸಲಹೆಗಳನ್ನು ಬರೆದುಕೊಳ್ಳುತ್ತಿದ್ದಾರೆ. ಫೈಲುಗಳನ್ನೇನೂ ನೋಡುತ್ತಿಲ್ಲ.

ಶ್ರೀ ವೈ. ವೀರಪ್ಪ.—ಈ ದೃಷ್ಟಿಯಿಂದ ನೋಡಿದರೆ ಪ್ರೈಮರಿ ವಿದ್ಯಾಭ್ಯಾಸದ ಕಡೆಗೆ ಸರ್ಕಾರದವರು ಹೆಚ್ಚಿಗೆ ನಿಗಾ ಕೊಡುತ್ತಿಲ್ಲ. ವಿಶ್ವವಿದ್ಯಾನಿಲಯ ವಿದ್ಯಾಭ್ಯಾಸ, ಮಾಧ್ಯಮಿಕ ವಿದ್ಯಾಭ್ಯಾಸ, ಹೈಸ್ಕೂಲ್ ವಿದ್ಯಾಭ್ಯಾಸ ಇವುಗಳಿಗೆ ಹೆಚ್ಚಿನ ಮಟ್ಟದಲ್ಲಿ ಸರ್ಕಾರದವರು ಗಮನ ಕೊಡುವುದಕ್ಕಿಂತ ಎಚ್ಚರಿಕೆಯಿಂದ ನಮ್ಮ ಪ್ರಾಥಮಿಕ ವಿದ್ಯಾಭ್ಯಾಸದ ಮಕ್ಕಳನ್ನು ಸಾಕಬೇಕಾಗಿದೆ. ಕಡ್ಡಾಯವಾಗಿ ಮುಂದೆ ಬರುವ 10 ವರ್ಷಗಳಲ್ಲಿ ಆರು ವರ್ಷಗಳಿಂದ 14 ವರ್ಷಗಳ ವಯಸ್ಸಿನವರೆಗೆ ಇರುವ ಬಾಲಕ ಬಾಲಕಿಯರನ್ನು ನಾವು ತರಪೇತು ಮಾಡಬೇಕೆಂದು ಕಾನ್ಸ್ಟಿಟ್ಯೂಷನ್ನಿನಲ್ಲಿ ವಿಧಾಯಕವಾಗಿದ್ದರೂ ಅಷ್ಟು ಜಯಪ್ರದವಾಗಿ ಕಾರ್ಯಗತ ಮಾಡಿಲ್ಲ. ಇದನ್ನು ಮಾಡದೆ ಹೋದವರ್ಷ 10 ಕೋಟಿ, 1959-60 ರಲ್ಲಿ 12 ಕೋಟಿ 1960 61ರಲ್ಲಿ 13 ಕೋಟಿ ರೂಪಾಯಿಗಳಲ್ಲಿ ಖರ್ಚನ್ನು ಮಾಡಿದ್ದರೂ, ದೊರಕಬೇಕಾದ ಪ್ರತಿಫಲ ದೊರಕದಿದ್ದರೆ, ರಾಷ್ಟ್ರದಲ್ಲಿ ಮುಂದಿನ ಜನಾಂಗವನ್ನು ಹೇಗೆ ನಿರೂಪಿಸಬೇಕಾಗಿದೆ ಯೆಂಬುದನ್ನು ಮೂಲಭೂತವಾಗಿ ಪರಿಶೀಲಿಸಬೇಕಾಗಿದೆ. ಈಗಿರುವ ಮುಖ್ಯ ಜಟಿಲ ಪ್ರಶ್ನೆ ಏನೆಂದರೆ ಕ್ರಿಯಾತ್ಮಕವಾದ ವಿದ್ಯಾಭ್ಯಾಸ ಮಾಡುತ್ತಿದ್ದಾರೆಯೆ ಮತ್ತು ಮೂಲಭೂತವಾದ ತತ್ವಗಳನ್ನು ನಮ್ಮ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದಾರೆಯೇ ಎಂದರೆ ಕೇವಲ ಅದು ಯಾವುದೋ ಒಂದು ಕನಸಿನ ಮಾತಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇದರಲ್ಲಿ ಎಷ್ಟೋ ಅಡ್ಡಿ ಆತಂಕಗಳಿವೆ, ಅವಕ್ಕೆ ಸರ್ಕಾರವೇ ಮುಖ್ಯ ಕಾರಣ. ಇಲಾಖೆಗಳ ಮೇಲೆ ಈ ಬಗ್ಗೆ ದೂರು ಹೊರಿಸುವುದಕ್ಕಿಂತ ಬದಲು ಮುಖ್ಯವಾಗಿ ಸರ್ಕಾರದವರ ಮೇಲೆ ದೂರನ್ನು ಸಲ್ಲಿಸತಕ್ಕದ್ದನ್ನು ಒಪ್ಪತಕ್ಕದ್ದು ಎಂದು ನನಗೆ ತೋಚಿದೆ. ಕಾರಣವೇನೆಂದರೆ ಒಂದೊಂದು ರಾಜ್ಯದಲ್ಲಿ, ಒಂದೊಂದು ರಾಷ್ಟ್ರದಲ್ಲಿ, ಒಂದೊಂದು ಸಮಾಜದಲ್ಲಿ, ಒಂದೊಂದು ಇಲಾಖೆಯಲ್ಲಿ ನಾವು ಉಪಾಧ್ಯಾಯರ ಸ್ಥಿತಿಗತಿಗಳನ್ನು ನೋಡಿದರೆ ನಾನಾ ರೀತಿಯ ಹಂತದಲ್ಲಿ ಇವತ್ತಿನದಿವಸ ಅವರನ್ನು ಇಟ್ಟಿದ್ದಾರೆ. ಅವರ ಸಂಬಳ ಸಾರಿಗೆಗಳ ವಿಚಾರದಲ್ಲಿ ಅಜಗಜಾಂತರ ವ್ಯತ್ಯಾಸವಿದೆ; ಸರ್ಕಾರದವರು ಒಂದು ಸಾರಿ ಒಂದು ಆರ್ಡರ್, ಹುಕುಂ ಕಳುಹಿಸಿದರೆ ಅದನ್ನು ಅವರೇ ಪದೇ ಪದೇ ವ್ಯತ್ಯಾಸ ಮಾಡುತ್ತಿದ್ದಾರೆ. ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. 1957ರಲ್ಲಿ ಇಡೀ ರಾಜ್ಯದಲ್ಲಿ ಸರ್ಕಾರೀ ಇಲಾಖೆಯಲ್ಲಿರುವ ಉಪಾಧ್ಯಾಯರುಗಳ ಸಂಬಳದ ಮಟ್ಟಕ್ಕೆ ಸ್ಥಳೀಯ ಸಂಸ್ಥೆಗಳ ಉಪಾಧ್ಯಾಯರ ಸಂಬಳ ವಿರಬೇಕು ಎಂದು ಆಯಾ ಸ್ಥಳೀಯ ಸಂಸ್ಥೆಗಳ ಮ್ಯಾನೇಜ್‌ಮೆಂಟಿನವರಿಗೆ ವಹಿಸಿದರು.

ಮಾನ್ಯ ಅರ್ಥಿಕ ಮಂತ್ರಿಗಳು ತಮ್ಮ ರಿಪೋರ್ಟಿನಲ್ಲಿ ಹೇಳಿ ರುವ ಪ್ರಕಾರ ಸ್ಥಳೀಯ ಸಂಸ್ಥೆಗಳು ಸರ್ಕಾರಕ್ಕೆ ಕೊಡಬೇಕಾದ ಅನೇಕ ಮೊಬಲಗುಗಳನ್ನು ಕೊಟ್ಟಿಲ್ಲ. ಅವುಗಳಿಗೆ ಚೈತನ್ಯವಿಲ್ಲವೆಂದು ತೋರಿಸಿದ್ದಾರೆ. ಅವುಗಳ ಹಣಕಾಸಿನ ದುಸ್ಥಿತಿ ಹೀಗಿರಬೇಕಾದರೆ ಯಾವುದೋ ರೀತಿಯಲ್ಲಿ, ಕಣ್ಣನ್ನು ಒರೆಸುವ ರೀತಿಯಲ್ಲಿ ಹೀಗೆ ಮಾಡಿದರೆ, ಉಪಾಧ್ಯಾಯ ವರ್ಗಕ್ಕೆ ಅತೃಪ್ತಿ, ಅಶಾಂತಿ ಉಂಟಾಗಿ, ವಿದ್ಯಾರ್ಥಿಗಳಿಗೆ ಯಾವ ಮಟ್ಟದಲ್ಲಿ, ಯಾವ ಮನಸ್ಸಿನಿಂದ ವಿದ್ಯೆಯನ್ನು ಹೇಳಬೇಕೋ, ಅದು ಕುಂಠಿತವಾಗಿ ಹೋಗುತ್ತದೆ. ನಮ್ಮ ದೇಶದಲ್ಲಿ ಕೇವಲ ಕೆಲವು ಕಡೆಗಳಲ್ಲಿ, ಕ್ರಿಯಾತ್ಮಕ ವಿದ್ಯಾಭ್ಯಾಸವನ್ನು, ಬೇಸಿಕ್ ಎಜುಕೇಷನ್ ಸ್ಕೂಲುಗಳಲ್ಲಿ ಮಾಡಿಸುತ್ತಿದ್ದಾರೆ. ಇದನ್ನು ಸರಿಯಾದ ರೀತಿಯಲ್ಲಿ ಇವತ್ತಿನ ದಿವಸ ನಡೆಸುತ್ತಾ ಇಲ್ಲ. ಅದಕ್ಕೆ ಸರಿಯಾದ ಉಪಕರಣಗಳಿಲ್ಲ. ಅನುಭವಶಾಲಿಗಳಾದ ಉಪಾಧ್ಯಾಯರುಗಳಿಲ್ಲ. ಇಂಥ ವಾತಾವರಣವನ್ನು ನಿರ್ಮಿಸಿದ ಮೇಲೆ ಅದರ ಮೇಲೆ ಯಥೇಚ್ಛವಾಗಿ ದುಡ್ಡನ್ನು ಖರ್ಚುಮಾಡುವುದು ಸೂಕ್ತವಲ್ಲವೇ ಎನ್ನುವುದನ್ನು ಪರಿಶೀಲಿಸಬೇಕಾಗಿದೆ. ನಾನೂ ಹೇಳಿದ್ದೇನೆ, ಅನೇಕ ಮಾನ್ಯ ಸದಸ್ಯರೂ ಹೇಳಿದ್ದಾರೆ. ಒಂದೇ ಒಂದು ರಾಜ್ಯಾಂಗದಲ್ಲಿ, ಒಂದೇ ಒಂದು ಇಲಾಖೆಯಲ್ಲಿ ವ್ಯತ್ಯಾಸವನ್ನು ಮಾಡಿ ಬಿಟ್ಟರೆ, ಮಲತಾಯಿರೀತಿ ಮಾತ್ಸರ್ಯವನ್ನು ಮಾಡಿ ಬಿಟ್ಟರೆ, ಉಪಾಧ್ಯಾಯ ವರ್ಗದವರಲ್ಲಿ ತೃಪ್ತಿ ಇರುವುದು ಹೇಗೆ ಸಾಧ್ಯ ಎಂಬುದರ ವಿಷಯದಲ್ಲಿ ಸಾರ್ವಜನಿಕರಿಂದ ಆಗಾಗ್ಗೆ ಅಹವಾಲುಗಳು ಬಂದಾಗ್ಯೂ ಕೂಡ ಸರ್ಕಾರದವರು ಗಮನ ಕೊಟ್ಟಿಲ್ಲ ಬೆನಾರಿಸ್ ಯೂನಿವರ್ಸಿಟಿಯಲ್ಲಿ ಆಗಿರುವ ಪ್ರಕರಣಕ್ಕೆ ದೇಶದಲ್ಲಿರುವ ಒಂದು ಅಶಿಸ್ತೇ ಕಾರಣ. ಈ ಜಟಿಲವಾದ ಸಮಸ್ಯೆಗೆ, ಬಹುಶಃ ಮುಖ್ಯವಾಗಿ ಸರ್ಕಾರದವರೆ ಕಾರಣ ಎಂದು ಹೇಳಬೇಕಾಗಿದೆ. ನೀವು ಎಲ್ಲಿಯವರೆಗೆ ಉಪಾಧ್ಯಾಯರುಗಳಿಗೆ ಒಂದು ಸರಿಯಾದ ಮಟ್ಟದ ಜೀವನವನ್ನು ನಡೆಸುವುದಕ್ಕೆ ಅನುಕೂಲ ಮಾಡಿಕೊಡುವುದಿಲ್ಲವೋ ಅಲ್ಲಿಯತನಕ ನಿಮ್ಮ ವಿದ್ಯಾಭ್ಯಾಸದ ಕ್ರಮದಲ್ಲಿ ಸುಧಾರಿಸುವುದಿಲ್ಲ, ಶಿಕ್ಷಣ ಪದ್ಧತಿಯನ್ನು ಸುಧಾರಿಸಲು ರಾಧಾಕೃಷ್ಣನ್ ರಿಪೋರ್ಟ್, ಸಿ. ಆರ್. ರೆಡ್ಡಿಯವರ ರಿಪೋರ್ಟ್, ಮತ್ತು ಕೇಂದ್ರ ಶಿಕ್ಷಣ ಸಮಿತಿಯವರು ಕೊಟ್ಟಿರತಕ್ಕಂಥ ಶಿಫಾರಸುಗಳಿವೆ, ಪ್ಲಾನಿಂಗ್ ಕಮಿಷನ್ನಿನವರು ಕೊಟ್ಟಂಥ ಆದೇಶಗಳೂ ಇವೆ. ಈ ಆದೇಶಗಳನ್ನು ನಿಜವಾಗಿ ಕಾರ್ಯಗತ ಮಾಡಿದ್ದೀರ ಎಂದು ಕೇಳಿದರೆ, ಖಂಡಿತವಾಗಿಯೂ ಮಾಡಿಲ್ಲವೆಂದು ಹೇಳಬೇಕಾಗಿದೆ. ಇದನ್ನು ಮಾಡದೆ ಮಾಮೂಲಾಗಿ ವರ್ಷೇ ವರ್ಷೇ ಡಿಮ್ಯಾಂಡುಗಳ ಮೇಲೆ ಖರ್ಚಿಗೆ ದುಡ್ಡು ಕೊಡಿ ಎಂದು ಕೇಳಿದರೆ ನ್ಯಾಯವೇ ? ಹನ್ನೆರಡು ಕೋಟಿಯಲ್ಲದಿದ್ದರೆ, 14 ಕೋಟಿರೂಪಾಯಿ ಕೊಡೋಣ ; ಆದರೆ ಅದಕ್ಕೆ ತಕ್ಕ ಪ್ರತಿಫಲ ದೊರಕದಿದ್ದರೆ, ದೇಶದಲ್ಲಿ ಯಾವ ಒಂದು ಸಮಾಜವನ್ನು ಕಟ್ಟಬೇಕೋ ಅದನ್ನು ಕಟ್ಟುವುದಕ್ಕಾಗುವುದಿಲ್ಲ ವೆಂದು ನಾನು ಹೇಳಬೇಕಾಗಿದೆ.

ಮುನಿಸಿಪಲ್ ಹೈಸ್ಕೂಲು ಸ್ಥಿತಿಗತಿಗಳ ಕಡೆ ಸರ್ಕಾರದವರು ಗಮನ ಕೊಟ್ಟಿಲ್ಲ. ಸರ್ಕಾರಿ ಹೈಸ್ಕೂಲಿನಲ್ಲಿರತಕ್ಕಂಥ ಹೆಡ್ ಮಾಸ್ಟರುಗಳಿಗೆ ಒಂದು ಪೇಸ್ಕೇಲು ಕೊಡುತ್ತೀರಿ. ಅದೇ ಕರಿಕುಲ, ಅದೇ ಸಿಲಬಸ್, ಅದೇ ಪಠ್ಯ ಪುಸ್ತಕಗಳು ಮತ್ತು ಕಾರ್ಯಕ್ರಮಗಳು, ಅದೇ ರಿಕ್ರೂಟ್ ಮೆಂಟ್ ರೂಲ್ಸ್ ಅದೇ ಸರ್ವೀಸ್ ಕಂಡಿಷನ್ನುಗಳು, ಅದೇ ಎಂ. ಎಸ್. ಆರ್. ಇಬ್ಬರಿಗೂ ಇರುವಂಥ ಸಂದರ್ಭದಲ್ಲಿ ಏತಕ್ಕೋಸ್ಕರ ಇಬ್ಬರಲ್ಲಿ ತಾರತಮ್ಯ ಮಾಡುತ್ತೀರೋ ಅರ್ಥವಾಗುವುದಿಲ್ಲ ಹೀಗೆ ಮಾಡಿದರೆ, ನೀವು ಯಾವ ಒಂದು ಗುರಿಯನ್ನು ಇಟ್ಟುಕೊಂಡಿದ್ದೀರೋ, ಯಾವ ಒಂದು ಸಮಾಜವನ್ನು ಕಟ್ಟಬೇಕು, ಒಂದು ರಾಮರಾಜ್ಯವನ್ನು ಮಾಡಬೇಕು ಎಂದು ಇದ್ದೀರೋ, ಅದು ಖಂಡಿತವಾಗಿಯೂ ಆಗುವುದಿಲ್ಲ. ಎಲ್ಲಿಯತನಕ ಅತೃಪ್ತಿ, ಭೇದವಿರುತ್ತದೋ, ಅಲ್ಲಿಯವರೆಗೆ ಇದು ಆಗುವುದಿಲ್ಲವೆಂದು ಹೇಳುತ್ತೇನೆ. ಈಗಲಾದರೂ ಆಖೈರಾಗಿ ಸರ್ಕಾರಕ್ಕೆ ನಾನು ಒತ್ತಿ ಹೇಳುವುದು ಇಷ್ಟೇ.

ಎಲ್ಲಾ ಪ್ರೌಢ ಶಾಲೆಗಳಲ್ಲಿರತಕ್ಕ ಉಪಾಧ್ಯಾಯರ ಸಂಬಳ ಸಾರಿಗೆಗಳನ್ನು ಒಂದೇ ಮಟ್ಟಕ್ಕೆ ತರಬೇಕು, ಯಾರು ಎರಡು ವರ್ಷ ಅವಿಚ್ಛಿನ್ನವಾಗಿ ಸರ್ವೀಸಿನಲ್ಲಿ

ರುತ್ತಾರೋ ಅವರನ್ನು ಖಾಯಂಮಾಡಬೇಕು; ಅಸಿಸ್ಟೆಂಟ್ ಮಾಸ್ಟರುಗಳ, ಪಂಡಿತರು, ಮುನಿಸಿಪಲ್ ಎಂಪ್ಲಾಯಿಗಳು, ಗುಮಾಸ್ತರು, ಮುಂತಾದವರ ಸ್ಕೇಲನ್ನು ಸಮೀಕರಣಮಾಡಿ, ಒಂದೇ ವೇತನವನ್ನು ಕೊಡುವ ಏರ್ಪಾಡು ಮಾಡಬೇಕು; ಕಾರ್ಪೊರೇಷನ್ ಹೈ ಸ್ಕೂಲುಗಳಲ್ಲಿರುವವರಿಗೆ ಹೇಗೆ ಇವತ್ತಿನದಿವಸ ಪೆನ್ಷನ್ ಸ್ಕೀಮನ್ನು ಕೊಟ್ಟಿದ್ದೀರೋ, ಯಾವರೀತಿ ಸರ್ಕಾರಿ ಉಪಾಧ್ಯಾಯರುಗಳಿಗೆ ಪೆನ್ಷನ್ ಕೊಡುತ್ತೀರೋ, ಅದನ್ನು ಮುನಿಸಿಪಲ್ ಹೈಸ್ಕೂಲಿನವರಿಗೂ ಅನ್ವಯಿಸುವಹಾಗೆ ಮಾಡಬೇಕು. ಮದ್ರಾಸಿನಲ್ಲಿ ಇವತ್ತಿನ ದಿವಸ ಒಂದು ಹೆಜ್ಜೆ ಮುಂದೆಹೋಗಿದ್ದಾರೆ. ನಾನ್-ಗೆಜೆಟೆಡ್ ಉಪಾಧ್ಯಾಯರುಗಳಿಗೆ ಉಚಿತವಾದ ಮೆಡಿಕಲ್ ಸೌಕರ್ಯಗಳನ್ನು ಕೊಡಿ, ಉಚಿತವಾಗಿ ಶಿಕ್ಷಣವನ್ನು ಕೊಡಿ ಎಂದು ಶಿಫಾರಸುಮಾಡಿ ಕಾರ್ಯಗತಮಾಡಿದ್ದಾರೆ.

ಇವತ್ತಿನ ದಿವಸ ಉಪಾಧ್ಯಾಯರುಗಳು ಜೀವನ ಮಾಡುವುದಕ್ಕೋಸ್ಕರ ನಡೆಸುತ್ತಿರುವ ಒಂದು ಚಿತ್ರವನ್ನು ನಿಮ್ಮ ಮುಂದಿಡುತ್ತೇನೆ, ಯಾವ ಫೌಢಶಾಲೆಗೇ ಹೋಗಲಿ, ಉಪಾಧ್ಯಾಯರುಗಳು ಮನೆಯಲ್ಲಿ ಪ್ರೈವೇಟ್ ಟ್ಯೂಷನ್ನುಗಳನ್ನು ಕೊಡುತ್ತಿರುವುದು ಕಂಡುಬರುತ್ತದೆ. ಏಕೆಂದರೆ ಅವರು ಒಂದು ಮಟ್ಟದಲ್ಲಿ ಜೀವನ ನಡೆಸುವುದಕ್ಕೆ ಅವರಿಗೆ ಕೊಡುವ ಸಂಬಳ ಸಾಲುವುದಿಲ್ಲ. ಯಾವ ವಿದ್ಯಾರ್ಥಿಗಳಿಗೆ ದುಡ್ಡು ಜಾಸ್ತಿ ಇರುತ್ತದೆಯೋ, ಯಾರ ತಂದೆ ತಾಯಿಗಳಿಗೆ ದುಡ್ಡು ಜಾಸ್ತಿ ಇರುತ್ತದೆಯೋ, ಅಂಥವರು ಮಾತ್ರ ಪ್ರೈವೇಟ್ ಟ್ಯೂಷನ್ ತೆಗೆದುಕೊಳ್ಳುವುದಕ್ಕಾಗುತ್ತದೆ. ಅಂದರೆ. ಬಡ ವಿದ್ಯಾರ್ಥಿಗಳ, ಹಿಂದುಳಿದವರ ಪಾಡೇನು? ಬಡವರ ಮಕ್ಕಳು ಮರಿಗಳಿಗೆ ಪಠ್ಯ ಪುಸ್ತಕಗಳನ್ನು ಕೊಳ್ಳುವುದಕ್ಕೆ ಸಹ ಚೈತನ್ಯವಿರುವುದಿಲ್ಲ. ಇವರುಗಳು ಪ್ರೈವೇಟ್ ಟ್ಯೂಷನ್ ತೆಗೆದುಕೊಳ್ಳುವುದು ಹೇಗೆ? ಈ ದೃಷ್ಟಿಯಿಂದ ತಕ್ಷಣ ಯೋಚನೆ ಮಾಡಿ, ಒಂದೇ ರೀತಿಯಾದ, ಒಂದೇ ಯೂನಿಫರಂ ಪೇ ಸ್ಕೇಲ್‌ಗಳು ಇರುವಂತೆ ಮಾಡಬೇಕು. ಏಕೆಂದರೆ, ಈ ಮುನಿಸಿಪಲ್ ಸ್ಕೂಲುಗಳನ್ನು ಒಂದು ಮೇನೇಜಿಂಗ್ ಕಮಿಟಿಗೆ ಕೊಟ್ಟಿರುತ್ತೀರಿ. ಅದರ ಚೇರ್‌ಮನ್ ಡೆಪ್ಯುಟಿಕಮಿಷನರ್ ಆಗಿರುತ್ತಾರೆ. ಮುನಿಸಿಪಲ್ ಪ್ರೆಸಿಡೆಂಟ್ ಸೆಕ್ರೆಟರಿಯಾಗಿರುತ್ತಾರೆ, ಇನ್ನೂ ಕೆಲವು ಖಾಸಗಿ ಮನುಷ್ಯರು ಅದರಲ್ಲಿರುತ್ತಾರೆ. ಈ ಉಪಾಧ್ಯಾಯರುಗಳ ಸಂಬಳ, ಮೇಂಟೆನೆನ್ಸಿಗೆ ಸರ್ಕಾರದ ಗ್ರಾಂಟಿರುತ್ತದೆ ಮುನಿಸಿಪಲ್ ಕೋಟ ಸಹ ಇರುತ್ತದೆ, ಫೀ ಕಲೆಕ್ಷನ್ನಿನಿಂದ ಹಣ ಬರುತ್ತದೆ ಅನೇಕ ಖಾಸಗಿ ಸಂಸ್ಥೆಗಳಲ್ಲಿದುಡ್ಡಿರುವುದಿಲ್ಲ. ಮೂರು-ನಾಲ್ಕು ತಿಂಗಳುಗಳು ಉಪಾಧ್ಯಾಯರಿಗೆ ಸಂಬಳಗಳನ್ನು ಕೊಡದಿರುವ ನಿದರ್ಶನಗಳನ್ನು ಅಂಕಿ ಅಂಶಗಳ ಸಹಿತ ಕೊಡಲು ತಯಾರಿದ್ದೇನೆ. ಮೂರು ನಾಲ್ಕು ತಿಂಗಳುಗಳ ಕಾಲ ಅವರಿಗೆ ಸಂಬಳ ಬರುವುದಿಲ್ಲ ಹೀಗೆ ಮಾಡಿ, ಎಲ್ಲಿ ಯವರೆಗೆ ಅವರಲ್ಲಿ ಅತೃಪ್ತಿ, ಅಶಾಂತಿ ಇರುತ್ತದೆಯೋ ಅಲ್ಲಿಯತನಕ ನೀವು ನಿರೀಕ್ಷಣೆ ಮಾಡುವುದನ್ನು ನೆರವೇರಿಸುವುದಕ್ಕಾಗುವುದಿಲ್ಲ. ಈ ದೃಷ್ಟಿಯಲ್ಲಾದರೂ ಕೂಡ ನಮ್ಮ ವಿದ್ಯಾ ಮಂತ್ರಿಗಳು ದಿಟ್ಟತನದ ಮನಸ್ಸುಮಾಡಿ, ವಿದ್ಯಾ ಇಲಾಖೆಯಲ್ಲಿ ಯಾವ ತಾರತಮ್ಯವೂ ಇಲ್ಲದಂತೆ, ಉಪಾಧ್ಯಾಯ ವರ್ಗದಲ್ಲಿ ತೃಪ್ತಿಯನ್ನು ತಂದು, ಮುಂದಿನ ಜನತೆ ಸರಿಯಾಗಿ ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಕೆಂಪು ಚೀನ, ಜಪಾನ್, ಜರ್ಮನಿ, ಅಮೇರಿಕ ದೇಶಗಳನ್ನು ತೆಗೆದುಕೊಳ್ಳಿ. ಅವರಲ್ಲಿರುವ ವಿದ್ಯಾಭ್ಯಾಸದ ಸೌಕರ್ಯಗಳ ವಿಚಾರದಲ್ಲಿ ಇಂಗ್ಲೆಂಡ್ ಕೂಡ ಸವಾಲು ಮಾಡಲಾರದು. ವಿಷಯ ಹಾಗಿರಬೇಕಾದರೆ ನೀವು ಸುಮ್ಮನೆ ಪ್ರಚಾರವೇದಿಕೆಗಳ ಮೇಲೆ ನಿಂತುಕೊಂಡು, ಭಾಷಣ ಮಾಡುವ ರೀತಿಯಲ್ಲಿ, ವರ್ಷ ವರ್ಷವೂ ಮಾಮೂಲಾಗಿ ಆಡಳಿತ ಪಕ್ಷದಲ್ಲಿ ಹೆಚ್ಚಿಗೆ ಮಂದಿ ಇದ್ದೇವೆಂದು ಇಷ್ಟುಹಣ ಕೊಡಿ ಎಂದು ಕೇಳಿಕೊಂಡು ಬಂದರೆ ಯಾವನ್ಯಾಯ, ಯಾವ ಧರ್ಮ ಎಂದು ಪ್ರಶ್ನೆಮಾಡಬೇಕಾಗಿದೆ.

ವಿಶ್ವವಿದ್ಯಾನಿಲಯಗಳಲ್ಲಿ ನೀವು ಮಾಡಿರತಕ್ಕಂಥದ್ದೇನು? ಅಲ್ಲಿರುವ ಅಧ್ಯಾಪಕರುಗಳಿಗೆ ಕೊಟ್ಟಿರತಕ್ಕಂಥ ಸೌಕರ್ಯಗಳೇನು? ಅದರಿಂದ ನೀವು ನಿರೀಕ್ಷಣೆಮಾಡತಕ್ಕಂಥ ಧ್ಯೇಯ ಧೋರಣೆಗಳೇನು? ವಿಶ್ವ ವಿದ್ಯಾನಿಲಯದಲ್ಲಿ ಬುದ್ಧಿವಂತರಾಗುವುದು, ಮಾಸ್ಟರ್ ಡಿಗ್ರಿ ತೆಗೆದುಕೊಳ್ಳುವುದು, ಕೇವಲ ಒಂದು ಉದ್ಯೋಗದಲ್ಲಿ ನಿರತರಾಗುವುದು ವಿಶ್ವ ವಿದ್ಯಾನಿಲಯದ ಧ್ಯೇಯವಲ್ಲ. A university must become the radiating centre. It must become a source of guidance and inspiration. Are you achieving that? I want to ask the Hon'ble Education Minister. ಆ ದೃಷ್ಟಿಯಿಂದ ನಾನು ಹೇಳುವುದು, ಯೂನಿವರ್ಸಿಟಿಯೊಳಗೆ ವಿದ್ಯಾಭ್ಯಾಸ ಮಾಡತಕ್ಕವರಿಗೆ ಹೆಚ್ಚಾದ ಸೌಲಭ್ಯಗಳನ್ನು ಕೊಡಬೇಕು. ಹಾಗೆ ಕೊಡದಿದ್ದಲ್ಲಿ, ಇವತ್ತಿನ ದಿವಸ ಜನಜೀವನ, ಸಮಾಜ, ಉಜ್ವಲ ಸಮಾಜವಾಗಲಾರದು. ಈಗ ನಾವು ಅಟಾಮಿಕ್ ಏಜಿ (Atomic age) ನಲ್ಲಿದ್ದೇವೆ, ಪಂಚಶೀಲ ತತ್ವಗಳನ್ನು ಪ್ರಚಾರ ಮಾಡುತ್ತಿದ್ದೇವೆ. ವಿಶ್ವದಲ್ಲಿ ಶಾಂತಿಯಾಗ ಇವೊತ್ತು ಬೇಕು. International education ಅಥವ world citizenship education ಕೊಟ್ಟು ನಮ್ಮ ವಿದ್ಯಾರ್ಥಿಗಳನ್ನು ತಯಾರು ಮಾಡಿದ್ದೇವೆಯೆ? ದೇಶದಲ್ಲಿ ಅಂತರ ರಾಷ್ಟ್ರೀಯ ವಾತಾವರಣ, ಅಂತರರಾಷ್ಟ್ರೀಯ ಮನೋಭಾವನೆ ಇದೆಯೇ ಎನ್ನುವುದನ್ನು ಪರೀಕ್ಷೆ ಮಾಡೋಣವೆಂದರೆ, education on internationalism and education on world citizenship, ಏರ್ಪಾಡು ಮಾಡಿದ್ದೀರ? ಖಂಡಿತವಾಗಿಯೂ ಇಲ್ಲ.

ವಯಸ್ಕರ ಶಿಕ್ಷಣ ಕೌನ್ಸಿಲ್ಲಿನವರು ಒಂದು ಶಿಫಾರಸು ಮಾಡಿದರು. ಇವತ್ತಿನ ದಿವಸ ನಾನೂ ಅದರ ಎಕ್ಸಿಕ್ಯೂಟಿವ್ ಕೌನ್ಸಿಲ್ಲಿನಲ್ಲಿದ್ದೇನೆ. ವಯಸ್ಕರ ಶಿಕ್ಷಣ ಇಲಾಖೆಯಲ್ಲಿ ನಾವು ಯಾವ ಮಟ್ಟದಲ್ಲಿ ಖರ್ಚುಮಾಡುತ್ತಿದ್ದೇವೆ. ನಾವು ನಿರೀಕ್ಷಿಸಿದಷ್ಟು ಗುರಿ ಮುಟ್ಟಿದ್ದೇವೆಯೇ? ಇಲ್ಲ. ಅವರಿಗೆ ಕೇವಲ ಓದು ಬರಹ ಬಂದರೆ ಸಾಲದು. ರಾಜಕೀಯವಾಗಿ, ನೈತಿಕವಾಗಿ ವ್ಯವಹಾರಿಕ ದೃಷ್ಟಿಯಿಂದ ಅವರು ಮುಂದೆ ಬರದಿದ್ದರೆ ಖಂಡಿತವಾಗಿಯೂ ನಮ್ಮ ಗುರಿಯನ್ನು ಮುಟ್ಟಲಾರೆವು ಮತ್ತು ಒಳ್ಳೆಯ ಸಮಾಜವನ್ನು ನಿರ್ಮಿಸಿಕೊಳ್ಳುವುದಕ್ಕೆ ಆಗಲಾರದು.

ಈ ದೃಷ್ಟಿಯಿಂದ ನಾನು ಹೇಳುವುದು, ಮುಖ್ಯವಾಗಿ ನಮಗೆ ಬೇಕಾಗಿರುವುದು ಶಿಸ್ತು. ಯಾವಾಗ ಒಂದು ಶಿಸ್ತು ವಿದ್ಯಾ ಇಲಾಖೆಯಲ್ಲಿರುವುದಿಲ್ಲವೋ, ಸಮಾಜದಲ್ಲಿರುವುದಿಲ್ಲವೋ, ಅಲ್ಲಿಯವರೆಗೆ ಆ ಸಮಾಜ, ಆ ರಾಷ್ಟ್ರ ಅಥವಾ ದೇಶವನ್ನು ಸರಿಯಾಗಿ ಕಟ್ಟಲಾಗುವುದಿಲ್ಲ; ಅದು ಹುಚ್ಚನ ಮಾತು ಅಥವಾ ಕನಸಿನ ಮಾತಾಗುತ್ತದೆ. ಆದ್ದರಿಂದ ಬನಾರಿಸ್ ಯೂನಿವರ್ಸಿಟಿಯಲ್ಲಾಗಿರತಕ್ಕ ಅನಾಹುತಗಳನ್ನೂ, ನಮ್ಮ ವಿಶ್ವವಿದ್ಯಾನಿಲಯದಲ್ಲಾಗಿರುವ ಅನಾಹುತಗಳನ್ನೂ ಗಣನೆಗೆ ತೆಗೆದುಕೊಂಡು, you must have

(ಶ್ರೀ ವೈ. ವೀರಪ್ಪ)

administrative control. ಇಲ್ಲಿಯ ಉಪಾಧ್ಯಾಯರುಗಳಲ್ಲಿ ಕೂಡ ಒಂದು ಶಿಸ್ತು, ಕ್ರಮ ಇರಬೇಕಾದರೆ, ಅವರಿಗೆ ತೃಪ್ತಿ ಬರುವ ರೀತಿಯಲ್ಲಿ ವಾತಾವರಣವನ್ನು ಕಲ್ಪನೆ ಮಾಡಬೇಕು, ಮತ್ತು ತಂದೆ ತಾಯಿಗಳು ಕೂಡ ತಮ್ಮ ಮಕ್ಕಳು ಸರಿಯಾದ ರೀತಿಯಲ್ಲಿ ಒಳ್ಳೆಯ ಪೌರರಾಗುವಂತೆ ಅವಕಾಶ ಮಾಡಿಕೊಳ್ಳಬೇಕು.

ಈ ಎಲ್ಲ ದೃಷ್ಟಿಯಿಂದಲೂ ಇದನ್ನು ಸಮೀಕರಣ ಮಾಡಿ ನೋಡಿದರೆ, ಇವತ್ತಿನ ದಿವಸ ಕೊಡತಕ್ಕಂಥ ವಿದ್ಯಾಭ್ಯಾಸದ ಗುರಿ, ಕ್ರಮ, ಖರ್ಚುಮಾಡುವ ವ್ಯವಸ್ಥೆ ಸರಿಯಾಗಿಲ್ಲವೆಂದು ಹೇಳುತ್ತೇನೆ.

ಒಂದು ನಿದರ್ಶನವನ್ನು ಹೇಳುತ್ತೇನೆ. ಮಕ್ಕಳಿಗೆ ಸರಿಯಾದ ಕಾಲದಲ್ಲಿ ಪಠ್ಯಪುಸ್ತಕಗಳು ದೊರೆಯುವುದಿಲ್ಲ. ದೊರೆಯದೆ ಇದ್ದ ಪಕ್ಷದಲ್ಲಿ ಅವುಗಳು ದೊರೆಯುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಮಿಡಲ್ ಸ್ಕೂಲಿಗೆ ಬೇಕಾಗುವ ಇಂಗ್ಲೀಷ್ ಪಠ್ಯ ಪುಸ್ತಕಗಳನ್ನು ಡೆಲ್ಲಿಯಲ್ಲಿ ಯಾರೋ ಸಪ್ಲೈ ಮಾಡುತ್ತಿದ್ದಾರೆಂದು ನನಗೆ ತಿಳಿದು ಬಂದಿದೆ. ಹೋದ ವರ್ಷ ನಾನೇ ಪಠ್ಯ ಪುಸ್ತಕಗಳನ್ನು ಕೊಂಡುಕೊಳ್ಳಲು ಹೋದಾಗ, ಯಾರೋ ಒಬ್ಬ ಡೆಲ್ಲಿಯವನಿಂದ ಪ್ರಿಂಟ್ ಆಗಬೇಕಾಗಿದೆ, ಅವು ಇನ್ನೂ ಬಂದಿಲ್ಲ, ಎಂಬ ಜವಾಬು ಬಂದಿತು. ಹೀಗೆ ವ್ಯವಸ್ಥೆ ಮಾಡಿದರೆ, ಏಕೆ ನಿಮಗೆ ದುಡ್ಡು ಕೊಡಬೇಕೋ ಗೊತ್ತಾಗುವುದಿಲ್ಲ. ಮೈಸೂರು ಡಿವಿಜನ್ನಿನಲ್ಲಿ ಹೊಸಹಳ್ಳಿ ಎಂಬ ಕಡೆ ಒಂದು ಸರ್ಕಾರಿ ಹೈ ಸ್ಕೂಲಿಗೆ– ಬಹುಶಃ ಇದರ ವಿಚಾರವನ್ನು ಎಜುಕೇಷನ್ ಮಂತ್ರಿಗಳಿಗೆ ಹೇಳಿದ್ದೇನೆ– ಅಲ್ಲಿಗೆ ಉಪಾಧ್ಯಾಯರುಗಳು ಯಾರೂ ಬರುತ್ತಿಲ್ಲ. ಬಹುಶಃ ಆರು ತಿಂಗಳಾಗಿದೆ. ನೇಮಕ ಮಾಡಿ ಎಂದು ಕೇಳುವ ಪ್ರಸಂಗ ಬಂತು.

2·30 P.M.

Is it not your bounden duty to see that books are supplied at the proper time? ಈ ದೃಷ್ಟಿಯಿಂದ ನೋಡಿದರೆ ಸರ್ಕಾರದವರು ಯಾವ ವ್ಯವಸ್ಥೆಯನ್ನೂ ಮಾಡದಿದ್ದರೆ ಈ ಬಾಬಿನಲ್ಲಿ ನಾವೇನು ಈಗ ಹಣವನು ಖರ್ಚುಮಾಡುತ್ತಿದ್ದೇವೋ ಅದೆಲ್ಲವೂ ವ್ಯರ್ಥವಾಗುತ್ತದೆ. ಈ ಒಂದು ದೃಷ್ಟಿಯಿಂದ ಹೇಳುವುದಾದರೆ ಸರ್ಕಾರದವರು ಕೂಡಲೆ ತಮ್ಮ ಆಡಳಿತದಲ್ಲಿರತಕ್ಕ ನ್ಯೂನತೆಗಳನ್ನು ತಿದ್ದಿಕೊಳ್ಳಬೇಕೆಂದು ಹೇಳುತ್ತೇನೆ. ಈ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ ಈಗಾಗಲೇ ನನ್ನ ಮಾನ್ಯ ಮಿತ್ರರೊಬ್ಬರು ಹೇಳಿರುವಹಾಗೆ ನಮ್ಮ ವಿದ್ಯೆಯಸ್ವರೂಪವನ್ನು ನಾವು ಆಧ್ಯಾತ್ಮಿಕ ದೃಷ್ಟಿ ಕೋಣದಿಂದ ನೋಡಿದ್ದೇ ಆದರೆ ನಮ್ಮ ವಿದ್ಯೆ ಒಂದು ಶೋಭಾಯಮಾನವಾಗಿ ಕಾಣುವಂತಾಗಬೇಕಾಗಿದ್ದರೆ, ನಾವೇನು ಹಿಂದಿನಿಂದ ಉಪನಿಷತ್ ಹಾಗೂ ವೇದಗಳ ಕಾಲದಿಂದ ಒಂದು ಸಮಾಜರಚನೆಯನ್ನು ಮಾಡಿಕೊಂಡು ಬಂದಿದ್ದೇವೋ, ಏನೊಂದು ದೊಡ್ಡ ಚಕ್ರಾಧಿಪತ್ಯವನ್ನೇ ಕಟ್ಟಿ ಜಗತ್ತಿನ ಇತರ ರಾಷ್ಟ್ರಗಳಿಗೆಲ್ಲಾ ಒಂದು ಮಾದರೀ ರಾಷ್ಟ್ರವನ್ನಾಗಿಮಾಡಿ ನಾವು ಬಾಳು ನಡೆಸಿಕೊಂಡು ಬಂದಿದ್ದೇವೋ ಆ ಬಗ್ಗೆ ಈಗಲೂ ಅನೇಕ ದೊಡ್ಡ ಇತಿಹಾಸಗಳೇ ಇವೆ. ಆದುದರಿಂದ ನಾವು ಸಂಪೂರ್ಣವಾಗಿ ಈಗಿನ ಶಿಕ್ಷಣ ಕ್ರಮದಲ್ಲಿ ಹಿಂದಿನ ನಮ್ಮ ಕೆಲವು ಆಚರಣೆಗಳನ್ನೂ ಕೂಡ ಸೇರಿಸಿಕೊಂಡರೆ ಅದರಲ್ಲಿ ಏನೂ ದೋಷವಿರಲಾರದ. ಆದರೆ ಈಗ ನಾವು ಈ ಶಿಕ್ಷಣಕ್ರಮವನ್ನು ನಮ್ಮದೇ ಆದ ಯಾವುದೋ ಒಂದು ದೃಷ್ಟಿಯಿಂದ ನೋಡುತ್ತಿದ್ದೇವೆ. ಆದ ಕಾರಣ ನಾನೀಗ ನಮ್ಮ ಸರ್ಕಾರದವರನ್ನು ಈ ಸಂದರ್ಭದಲ್ಲಿ ಕೇಳಿಕೊಳ್ಳುವುದಿಷ್ಟೆ: ಈಗಾಗಲೇ ನನ್ನ ಅನೇಕ ಮಾನ್ಯ ಸ್ನೇಹಿತರೂ ಮತ್ತು ಶ್ರೀ ಘೋರ್ಪಡೆಯವರೂ ಮಾತನಾಡಿರುವ ರೀತಿಯಲ್ಲಿ ನಾವೀಗ ದೇಶದಲ್ಲಿ ಒಳ್ಳೆಯ ಯೋಧರನ್ನು ಶಿಸ್ತಿನ ನಿಪುಣರನ್ನು ಅರಿತು ನುರಿತಂಥ ಶಿಪಾಯಿಗಳನ್ನು ತಯಾರಿಸುವಂಥ ಶಾಲೆಗಳನ್ನು ಕೂಡಲೆ ತೆಗೆಯತಕ್ಕದ್ದು ಅತ್ಯವಶ್ಯಕ. ಈ ದಿವಸ ವಿದ್ಯಾರ್ಥಿಗಳಾಗಿ ಬರತಕ್ಕವರಿಗೆ ಅವರೆಲ್ಲರನ್ನೂ ಒಂದೇ ರೀತಿಯಲ್ಲಿ ಬಡವರಾಗಿರಲಿ, ಭಾಗ್ಯವಂತರಾಗಿರಲಿ, ಎಲ್ಲರಿಗೂ ಒಂದೇ ನೇಮವನ್ನು ಅನುಸರಿಸುತ್ತಿದ್ದೀರಿ. ಇದರಲ್ಲಿ ನಾವು ಯಾವ ಒಂದು ಜಾತಿ ಗೋತ್ರಗಳನ್ನೂ ಎಣಿಸುವುದು ಬೇಡ. ಸಮಾಜದಲ್ಲಿ ಬಡವರ ಮಕ್ಕಳು—ಬಲ್ಲಿದರ ಮಕ್ಕಳೆಂದು ಎರಡು ವಿಭಾಗ ಮಾಡಿದರೆ ಸಾಕು. ಬಲ್ಲಿದರ ಮಕ್ಕಳಿಗೆ ಹೆಚ್ಚಿಗೆ ಟ್ಯಾಕ್ಸ್‌ನ್ನು ಹಾಕಿ, ಬಡವರ ಮಕ್ಕಳಿಗೆ ಉಚಿತ ವಿದ್ಯಾಸೌಕರ್ಯಗಳನ್ನು ಒದಗಿಸಿ.

ಇನ್ನು ಬಡವರ ಮಕ್ಕಳಿಗಾಗಿ ಒದಗಿಸುತ್ತಿರುವ ಮಿಡ್‌ಡೇ–ಮೀಲಿಗಾಗಿ ಆ ಮಕ್ಕಳ ಬೆಳವಣಿಗೆಯ ದೃಷ್ಟಿಯಿಂದ ಈಗ ಒದಗಿಸಿರತಕ್ಕ ಹಣವನ್ನು ಇನ್ನೂ ಸ್ವಲ್ಪ ಉದಾರಭಾವದಿಂದ ಹೆಚ್ಚಿಸಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ನಿಮಗೆ ಕ್ಲುಪ್ತಮಾಡಿದ್ದ ವೇಳೆಗಿಂತ ಹೆಚ್ಚುಕಾಲಾವಕಾಶ ತೆಗೆದುಕೊಂಡಿದ್ದೀರಿ. ದಯವಿಟ್ಟು ನಿಮ್ಮ ಭಾಷಣವನ್ನು ಮುಗಿಸಿ. ಈ ದಿವಸ ಮಾತನಾಡತಕ್ಕ ಸದಸ್ಯರ ಸಂಖ್ಯೆ ಇಪ್ಪತ್ತಿದೆ. ಆದ ಕಾರಣ ಬೇರೆಯವರಿಗೆ ವೇಳೆ ದೊರಕಿಸಲು ಕಷ್ಟವಾಗುತ್ತದೆ.

ಶ್ರೀ ವೈ. ವೀರಪ್ಪ.—ನಾನು ಯಾವ ಯಾವುದೋ ವಿಷಯಗಳನ್ನು ಯಾವ ಯಾವುದೋ ರೀತಿಯಲ್ಲಿ ಹೇಳಬೇಕೆಂದಿದ್ದೆನು. ಆದರೆ ಅಧ್ಯಕ್ಷರಿಂದ ಬೇಗ ಮುಗಿಸಬೇಕೆಂಬ ಒತ್ತಾಯ ಪದೇ ಪದೇ ಬರುತ್ತಿರುವುದರಿಂದ ನಾನು ಹೇಳಬೇಕೆಂದಿದ್ದ ವಿಷಯಗಳೆಲ್ಲವನ್ನೂ ಕೇವಲ 15 ನಿಮಿಷಗಳಲ್ಲಿ ಅರಗಿಸಿಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ಸರ್ಕಾರದವರು ನಮ್ಮ ಮುಂದಿನ ವಿದ್ಯಾಭ್ಯಾಸ ಕ್ರಮವನ್ನು ಒಂದು ಪರಿಣಾಮಕಾರಿ ರೀತಿಯಲ್ಲಿ ಬದಲಾವಣೆ ಮಾಡಬೇಕೆಂದು ಕಡೆಯದಾಗಿ ಒಂದು ಮಾತನ್ನು ಹೇಳಿ, ನಾನಿನ್ನು ಅಧ್ಯಕ್ಷರನ್ನು ವಂದಿಸಿ ಕುಳಿತುಕೊಳ್ಳಲು ಸಭೆಯ ಅನುಮತಿಯನ್ನು ಬೇಡುತ್ತೇನೆ.

ಶ್ರೀ ಟಿ. ಕೆ. ಕಂಬಳಿ (ಕುಂದಗೋಳ್).—ಮಾನ್ಯ ಅಧ್ಯಕ್ಷರೇ, ಈ ದಿವಸ ಸಭೆಯ ಮುಂದಿರತಕ್ಕ ವಿದ್ಯಾಭ್ಯಾಸದ ಡಿಮಾಂಡನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತ ಸರ್ಕಾರದವರಿಗೆ ನಾನು ಒಂದೆರಡು ಸಲಹೆಗಳನ್ನೀಗ ಕೊಡಬಯಸುತ್ತೇನೆ. ಹೊಸ ಮೈಸೂರು ರಾಜ್ಯವು ಬೇರೆ ಬೇರೆ ಐದು ಭಾಗಗಳನ್ನು ಒಳಗೊಂಡಿರುವುದರಿಂದ ಒಂದೊಂದು ವಿಭಾಗದ ಕಾಯಿದೆ ಇನ್ನೊಂದು ವಿಭಾಗಕ್ಕೆ ಅನ್ವಯಿಸದೆ ಹೊಸ ರಾಜ್ಯವೇರ್ಪಟ್ಟು ಎರಡು ವರ್ಷಗಳ ಮೇಲಾಗಲಿಕ್ಕೆ ಹತ್ತಿದ್ದರೂ ಇನ್ನೂ ಈ ಕಾನೂನುಗಳ ಸಮನ್ವಯವಾಗದೆ ಇರುವುದರಿಂದ ಅನೇಕ ಕೊರತೆಗಳುಂಟಾಗಿವೆ. ಆದುದರಿಂದ ತೀವ್ರವಾಗಿ ರಾಜ್ಯದ ಎಲ್ಲ ಪ್ರದೇಶಕ್ಕೂ ಒಂದೇ ಸ್ವರೂಪದ ಕಾನೂನನ್ನು ಜಾರಿಗೆ ತರಬೇಕೆಂದು ಹೇಳ ಬಯಸುತ್ತೇನೆ. ಇದೇ ಸಂದರ್ಭದಲ್ಲಿ ನಾನು ಮತ್ತೊಂದು ವಿಷಯ ತಿಳಿಸಬೇಕಾದದ್ದೇನೆಂದರೆ ಇದೇ ವರ್ಷವೇ ದೇಶದ ಎಲ್ಲಾ ಭಾಗಗಳ ಶಾಲೆಗಳಲ್ಲೂ ಏಕರೂಪದ ಪಠ್ಯಪುಸ್ತಕ

ಗಳು ದೊರಕುವಂತಾಗಬೇಕೆಂದು ಹೇಳಬಯಸುತ್ತೇನೆ. ಈ ದಿವಸ ರಾಜ್ಯದಲ್ಲಿ ಒಂದು ಕಡೆಯಲ್ಲಿ ಈ ಶಾಲಾ ಮಾಸ್ತರುಗಳಿಗೆ ತಿಂಗಳಿಗೆ 40 ರೂಪಾಯಿಗಳ ಸಂಬಳವಿದೆ. ಇನ್ನು ಕೆಲವು ಕಡೆ 40 ರೂಪಾಯಿಗಳಿಂದ ಹಿಡಿದು 60 ರೂಪಾಯಿಗಳವರೆಗೆ ಸಂಬಳವಿದೆ. ಹೀಗೆ ಒಂದೊಂದು ಕಡೆ ಒಂದೊಂದು ರೀತಿಯ ಸ್ಕೇಲುಗಳಿರುತ್ತವೆ. ಇದರ ಜೊತೆಗೆ ಆ ಶಾಲಾ ಮಾಸ್ತರುಗಳು ಒಂದು ತಿಂಗಳು ದುಡಿದಮೇಲೂ ಅವರಿಗೆ ಒಂದನೆಯ ತಾರೀಖಿಗೆ ಸಂಬಳದ ದುಡ್ಡು ಮುಟ್ಟುವುದಿಲ್ಲ. ಬಾಕಿ ಇಲಾಖೆಗಳಲ್ಲಿರತಕ್ಕವರಿಗೆಲ್ಲ ಈ ಸಂಬಳ ಸಾರಿಗೆಗಳು ಒಂದನೇ ತಾರೀಖಿಗೇ ಮುಟ್ಟಿದರೂ ಈ ಮಾಸ್ತರುಗಳಿಗೆ ಮೊದಲನೇ ವಾರದಲ್ಲಾದರೂ ಮುಟ್ಟುವುದು ಬೇಡವೇ? ಅದೂ ಹೋಗಲಿ, ಅನೇಕರಿಗೆ ಅವರ ದುಡಿದ ಸಂಬಳ ಅವರಿಗೆ ತಿಂಗಳುಗಟ್ಟಲೆ ಆದರೂ ಮುಟ್ಟದೆ ಇರುವಂಥ ಪರಿಸ್ಥಿತಿ ಬಂದಿದೆ. ಇದು ಕೂಡಲೇ ಹೋಗಬೇಕು. ಈ ದಿವಸ ನಡೆಯತಕ್ಕ ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭಾಸ ಸಕ್ರಮವೇನಿದೆ ಇದು ಒಂದೊಂದು ರೀತಿಯಾಗಿದೆ. ಬೊಂಬಾಯಿ ಕರ್ಣಾಟಕ ಪ್ರಾಂತ್ಯದಲ್ಲಿ ಒಂದು ರೀತಿಯ ವಿದ್ಯಾಭ್ಯಾಸ ಕ್ರಮವಿದೆ. ಹಳೇ ಮೈಸೂರು ಪ್ರದೇಶದ ವಿದ್ಯಾಭ್ಯಾಸ ಕ್ರಮವೇ ಒಂದು ರೀತಿಯಿದೆ. ಬೊಂಬಾಯಿ ಕರ್ಣಾಟಕ ಪ್ರದೇಶದಲ್ಲಿ ಶಿಕ್ಷಣ ಪ್ರಾರಂಭದಿಂದ ಏಳನೇ ಇಯತ್ತೆಯವರೆಗೆ ಅಭ್ಯಾಸ ಮಾಡಿದ ನಂತರ ಅಲ್ಲಿ ಒಂದು ಮುಲ್ಕಿ ಪರೀಕ್ಷೆ ಎಂದು ಇದೆ, ಇದರಲ್ಲಿ ನಿಮ್ಮ ಪ್ರೈಮರಿ ಮತ್ತು ಮಿಡಲ್‌ಸ್ಕೂಲುಗಳ ವಿದ್ಯಾಭ್ಯಾಸ ಮುಗಿದು ಇನ್ನೂ ಮೂರುವರ್ಷಗಳ ಒಂದು ಕನ್ನಡ ಟ್ರೈನಿಂಗ್ ಇರುತ್ತದೆ, ಅಲ್ಲಿ S. S. L. C. ಪರೀಕ್ಷೆಗೆ ಕೂಡಲು ಹನ್ನೊಂದು ವರ್ಷಗಳು ಬೇಕು. ಬೊಂಬಾಯಿ ಕರ್ಣಾಟಕ ಪ್ರಾಂತದಲ್ಲಿ ಪ್ರೈಮರಿ—ಮಿಡಲ್ ದರ್ಜೆಯ ವಿದ್ಯಾಭ್ಯಾಸ ಪೂರೈಸಿದ ನಂತರ ಕನ್ನಡ ಭಾಷಾಜ್ಞಾನ ಹೆಚ್ಚುವಂತೆ ಮಾಡಲು ಮೊದಲು ಎರಡು ವರ್ಷಗಳ ಒಂದು ಟ್ರೈನಿಂಗನ್ನು ಕೊಡುತ್ತಿದ್ದರು. ಈಗ ಆ ಟ್ರೈನಿಂಗಿನ ಅವಧಿಯನ್ನು ಮೂರು ವರ್ಷಗಳಿಗೆ ಹೆಚ್ಚಿಸಬೇಕು. ಮಿಡಲ್ ಸ್ಕೂಲು ವಿದ್ಯಾವ್ಯಾಸಂಗ ಮುಗಿಸಿದ ನಂತರ ನಿಮ್ಮಲ್ಲಿ ಮಿಡಲ್‌ಸ್ಕೂಲು ಪರೀಕ್ಷೆ ಪಾಸಾಯಿತೆಂದ ನಂತರ ಆ ವಿದ್ಯಾರ್ಥಿಗಳಿಗೆ ನಮ್ಮ ಕಡೆ ಮೂರು ವರ್ಷಗಳು ಶಿಕ್ಷಣ ಕೊಡಬೇಕು ಇದರಿಂದ ಅವರಿಗೆ ಕನ್ನಡ ಭಾಷೆಯ ಪರಿಶ್ರಮ, ಜ್ಞಾನ ಹೆಚ್ಚುತ್ತದೆ. ಮುಂದೆ ಅಂಥ ಅವರು ಸಾಲಾಮಾಸ್ತರುಗಳಾಗಲು ಅನುಕೂಲವಾಗುತ್ತದೆ. ಆದುದರಿಂದ ದೇಶದ ಎಲ್ಲ ಭಾಗಗಳಲ್ಲೂ ಈ ಮೂರುವರ್ಷದ ಟ್ರೈನಿಂಗನ್ನು ಎಲ್ಲರಿಗೂ ದೊರೆಯುವಹಾಗೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಈ ಮಟ್ಟದ ತನಕ ವಿದ್ಯಾಭ್ಯಾಸವು ಎಲ್ಲರಿಗೂ ಪುಕ್ಕಟ್ಟೆಯಾಗಿ ಸಿಕ್ಕಬೇಕು. ಪ್ರೈಮರಿ ವಿದ್ಯಾಭ್ಯಾಸದಿಂದ ಹಿಡಿದು ಏಳನೆಯ ಇಯತ್ತೆಯವರೆಗೆ ಎಲ್ಲಾ ಕಡೆಯೂ ಈ ವಿದ್ಯೆ ಎಲ್ಲರಿಗೂ ಪುಕ್ಕಟ್ಟೆಯಾಗಿ ದೊರೆಯುವಂತೆ ಮಾಡಬೇಕು ಎನ್ನುವ ಒಂದು ಸೂಚನೆ ಅದೆ. ಇದು ಮುಗಿದಕೂಡಲೆ ಮುಂದಿನ S.S.L.C. ತರಗತಿಯವರೆಗೆ ಎಲ್ಲರಿಗೂ ಕಡ್ಡಾಯ ಶಿಕ್ಷಣ ದೊರೆಯುವಂತೆ ಮಾಡಿ ಈ ಪ್ರಾಥಮಿಕ, ಮಾಧ್ಯಮಿಕ ಮತ್ತು ಮುಲ್ಕಿ ತರಗತಿಗಳಾದ ಮೇಲೆ ನಮ್ಮ ರಾಜ್ಯದಲ್ಲಿ ಯಾವ ಯಾವ ಹುಡುಗನ ಮನಸ್ಸು ಮತ್ತು ಬುದ್ಧಿ ಯಾವ ಯಾವ ಕಡೆಗೆ ಎಳೆಯುತ್ತಿದೆಯೆಂಬುದನ್ನು ಕಂಡುಹಿಡಿಯಲು ಒಂದು ಪರೀಕ್ಷೆಯನ್ನು ಮಾಡಿ ಅದರ ಪ್ರಕಾರ ಅವರು ಮುಂದಿನ ವಿದ್ಯಾವ್ಯಾಸಂಗಕ್ಕೆ ಹೋಗಲು ಒಂದು ಅವಕಾಶಮಾಡಿಕೊಡಬೇಕೆಂದೂ ಮತ್ತು ಅವರು ನಾನಾಗಲೇ ಹೇಳಿದ ಒಂದು ತರಬೇತಿಯನ್ನೂ ಸಹ ಪಡೆಯುವಂತೆ ಮಾಡಬೇಕೆಂದೂ ಹೇಳಬಯಸುತ್ತೇನೆ.

ಇನ್ನು ನಮ್ಮ ದೇಶದಲ್ಲಿ ಪ್ರೈಮರಿಸ್ಕೂಲು ವ್ಯಾಸಂಗ ಮುಗಿದ ಕೂಡಲೆ, ಒಂದು ವರ್ಷಕಾಲದ ಪ್ರಾಥಮಿಕ ಅಥವಾ ಮಾಧ್ಯಮಿಕ ಅಭ್ಯಾಸ ಮುಗಿದ ಕೂಡಲೆ ಎಲ್ಲಾ ಹುಡುಗರಿಗೂ 16—17 ವರ್ಷ ವಯಸ್ಸಾಗುವತನಕ ಕಡ್ಡಾಯವಾಗಿ ಒಂದು ಮಿಲಟರಿ ಶಿಕ್ಷಣವನ್ನು ಕೊಡುವಂತೆ ಒಂದು ವ್ಯವಸ್ಥೆ ಮಾಡಬೇಕೆಂಬ ನನ್ನ ಒಂದು ಸೂಚನೆ ಅದೆ.

ಇನ್ನು ಈಗಿರತಕ್ಕ ಕ್ರಾಫ್ಟ್ಸ ಮತ್ತು ಬೇಸಿಕ್ ಶಾಲೆಗಳ ವಿಚಾರ ತೆಗೆದುಕೊಂಡರೆ ಇವುಗಳಲ್ಲಿ ಒಂದು ಹೊಂದಾವಣಿ ವ್ಯವಸ್ಥೆ ಇರವುದಿಲ್ಲ. ಎಲ್ಲಿ ಬೇಸಿಕ್ ಸ್ಕೂಲು ಇರಬೇಕೋ ಅಲ್ಲಿ ಬೇಸಿಕ್ ಸ್ಕೂಲರದೆ ಅಲ್ಲೊಂದು ಕ್ರಾಫ್ಟ್ಸ ಸ್ಕೂಲನ್ನೂ, ಎಲ್ಲಿ ಒಂದು ಕ್ರಾಫ್ಟ್ಸಸ್ಕೂಲರಬೇಕೋ ಅದು ಅಲ್ಲಿರದೆ ಅಲ್ಲೊಂದು ಬೇಸಿಕ್ ಸ್ಕೂಲನ್ನೂ ತೆರೆದಿರುವಂಥ ಸನ್ನಿವೇಶಗಳಿವೆ. ಈ ರೀತಿ ಈಗ ಇಂಥ ಒಂದು ಹೊಂದಾವಣಿಕೆ ಇಲ್ಲದಂತೆ ಈ ಸ್ಕೂಲುಗಳನ್ನು ತೆಗೆದಿದ್ದಾರೆ.

ಈಗ ಶಿಕ್ಷಣದ ಪದ್ಧತಿ ಹಳೆಯ ಮೈಸೂರಿನಲ್ಲಿ ಒಂದು ರೀತಿ ಇದೆ, ನಮ್ಮ ಮುಂಬೈ ಕರ್ಣಾಟಕದಲ್ಲಿ ಒಂದು ರೀತಿ ಇದೆ. ಅಲ್ಲಿ ಸ್ಕೂಲ್ ಬೋರ್ಡ್ ಸಂಸ್ಥೆ ಪ್ರೈಮರಿಸ್ಕೂಲುಗಳನ್ನೂ ನೋಡುವುದಕ್ಕೆ ಇದೆ. ಉತ್ತಮ ರೀತಿಯಿಂದ ಕೆಲಸ ಮಾಡತ್ತಿದೆ. ಸ್ಕೂಲ್ ಬೋರ್ಡ್ ಏನಿದೆ ಅದು ಎಜುಕೇಷನಲ್, ಮುನಿಸಿಪಾಲಟಿ, ಲೋಕಲ್ ಬೋರ್ಡ್ ಹೀಗೆ ನಾಲ್ಕೈದು ಕಡೆಗಳಿಂದ ಚುನಾಯಿತರಾಗಿ ಬಂದಂಥ ಸದಸ್ಯರನ್ನೊಳಗೊಂಡ ಸಂಸ್ಥೆಯಾಗಿದೆ. ಆ ಸಂಸ್ಥೆ ಶಿಕ್ಷಣದೊಳಗೆ ಏನು ತೊಡಕುಗಳಿವೆ, ಅವನ್ನು ಹೇಗೆ ನಿವಾರಿಸಬೇಕು, ಶಿಕ್ಷಣ ಹೇಗೆ ಪ್ರಗತಿಯಾಗಬೇಕು ಎಂಬುದನ್ನೆಲ್ಲ ನೋಡುತ್ತದೆ. ಮಾಸ್ತರ್ ವರ್ಗದವರ ನೇಮಕಗಳನ್ನೂ ಅಡ್ಮಿನಿಸ್ಟ್ರೇಟೀವ್ ಆಫೀಸರುಗಳೇ ಮಾಡುತ್ತಾರೆ. ಹೊಸ ರಾಜ್ಯದಲ್ಲಿಯೂ ಸ್ಕೂಲ್ ಬೋರ್ಡ್ ವ್ಯವಸ್ಥೆ ಇರಬೇಕು ಎಂಬುದು ನನ್ನ ಅಭಿಪ್ರಾಯ. 1934ರಲ್ಲಿ ಸ್ಕೂಲ್‌ಬೋರ್ಡ್ ಬಂತು. ಮೊದಲು ಹತ್ತು ವರ್ಷದ ಕ್ರಿಂ ಇತ್ತು. ಈ ಹತ್ತು ವರ್ಷಗಳಲ್ಲಿ ನಮ್ಮ ನಾಲ್ಕು ಜಿಲ್ಲೆಗಳಲ್ಲಿ ನೂರು ಶಾಲೆಗಳನ್ನು ಏರ್ಪಡಿಸಿದರು. 1944ರಿಂದ 1956ರ ವರೆಗಿನ ಹನ್ನೆರಡು ವರ್ಷದೊಳಗೆ ಒಂದು ಸಾವಿರಕ್ಕೂ ಹೆಚ್ಚಿಗೆ ಶಾಲೆಗಳಾಗಿವೆ. ಒಂದು ಕಡೆ ಶಾಲೆಯಾಗಬೇಕಾದರೆ ಮೊದಲು ನಮಗಿರುವ ನಿಯಮದ ಪ್ರಕಾರ ಜಾಗ ಕೊಡಬೇಕು, ಶೇಕಡ 25 ಭಾಗ ಹಣವನ್ನು ಕೊಡಬೇಕು. ಇದನ್ನೆಲ್ಲ ಒದಗಿಸಿದರೆ ಅವರು ಶಾಲೆಯನ್ನು ಕೊಡುತ್ತಾರೆ. ನಮ್ಮ ನಾಲ್ಕು ಜಿಲ್ಲೆಯೊಳಗೆ ಶಾಲೆಗಳ ಕಟ್ಟಡ ಆಗಲು, ನಾನು ಹೋದ ಸಲವೇ ಹೇಳಿರುವಂತೆ ಹನ್ನೊಂದು ಲಕ್ಷರೂಪಾಯಿಗಳು ಬೇಕು. ಅಲ್ಲಿಯ ನಿಯಮದ ಪ್ರಕಾರ ಈಗಾಗಗಲೇ ಐದು ಲಕ್ಷರೂಪಾಯಿಗಳನ್ನು ಕೊಟ್ಟಿದ್ದಾರೆ. ಇನ್ನು ಆರುಲಕ್ಷ ರೂಪಾಯಿಗಳನ್ನು ಮಾತ್ರ ಕೊಡಬೇಕೆಂದು ಹೇಳಬಯಸುತ್ತೇನೆ. ನಮ್ಮ ಧಾರವಾಡ ಜಿಲ್ಲೆಗೆ ಹಲವು ಶಾಲೆಗಳಾಗಿವೆ. ನಮ್ಮ ಕಡೆಯವರು ಏನು ರೊಕ್ಕತುಂಬಿದ್ದಾರೆ ಅದೆಲ್ಲ ಜಮಾ ಇದೆ. ಅದನ್ನೆಲ್ಲ ಅಜಮಾಯಿಷಿ ಮಾಡಿದರೆ ಆರು ಲಕ್ಷ

(ಶ್ರೀ ಟಿ. ಕೆ. ಕಂಬಳಿ)

ರೂಪಾಯಿ ಕೊಡಬೇಕಾಗುತ್ತದೆ. ಅದನ್ನು ಕೊಟ್ಟು ಏನೇನು ಕಟ್ಟಡಗಳು ಉಳಿದಿವೆಯೋ ಅವುಗಳನ್ನು ಕೂಡಲೇ ಮುಗಿಸಬೇಕು ಎಂದು ಹೇಳಬಯಸುತ್ತೇನೆ.

ಇನ್ನು ಶಾಲಾ ಕಟ್ಟಡಗಳ current ರಿಪೇರಿಗಾಗಿ ಲಗೂನ ಹಣವನ್ನು ಪೂರೈಸಬೇಕು. ಈಗ ಏನು ಹಣವನ್ನಿಟ್ಟಿದ್ದಾರೆ ಅದು ಸಾಲುವುದಿಲ್ಲ. ಕರೆಂಟ್ ರಿಪೇರಿಯಾದರೆ ಸ್ಕೂಲ್ ಕಟ್ಟಡ ಉಳಿಯುತ್ತದೆ. ಒಂದೊಂದು ಕಡೆ ಹಳ್ಳಿಯೊಳಗೆ ಮಣ್ಣು ಮಾಳಿಗೆಯ ಕಟ್ಟಡಗಳಿವೆ. ಅವುಗಳೆಲ್ಲ ಬೀಳುವಂಥ ಪರಿಸ್ಥಿತಿಯಲ್ಲಿವೆ. ಕರೆಂಟ್ ರಿಪೇರಿ ಮಳೆಗಾಲ ಬರುವುದರೊಳಗಾಗಿ ಮಾಡಿರಿ. ಈ ಕೆಲಸ ಜಾಗ್ರತೆಯಾಗಿ ಆಗಬೇಕೆಂದು ಒತ್ತಾಯಪಡಿಸುತ್ತೇನೆ. ಗುಡಿಗೇಲಿಯೊಳಗೆ ಇದ್ದ ಒಂದು ಕಟ್ಟಡ ಬಿದ್ದುಬಿಟ್ಟಿತು. ಹುಡುಗರೆಲ್ಲ ಶಾಲೆಯಿಂದ ಹೊರಗೆ ಹೋದದ್ದರಿಂದ ಹುಡುಗರ ಜೀವ ಉಳಿಯಿತು, ಇಂಥ ಪರಿಸ್ಥಿತಿ ಇರುವುದರಿಂದ ಕರೆಂಟ್ ರಿಪೇರಿಗೆ ರೊಕ್ಕ ಒದಗಿಸಿಕೊಡಬೇಕೆಂದು ಹೇಳಬಯಸುತ್ತೇನೆ.

ಟೀಚರುಗಳ ಪರಿಸ್ಥಿತಿ ಬಹಳ ಕೆಟ್ಟಿದೆ. ಅವರ ಹೇಸ್ಕೇಲ್ಸ್‌ನಲ್ಲಿ ಏಕರೂಪತೆಯಾಗಬೇಕು. ಅವರಿಗೆಲ್ಲ ವಸತಿ ಸೌಕರ್ಯವನ್ನು ಕಲ್ಪಿಸಿಕೊಡಬೇಕು. ಅದರಲ್ಲಿಯೂ ಮಿಸ್ಟ್ರೆಸ್‌ಗಳಿಗೆ ವಸತಿಸೌಕರ್ಯವನ್ನು ಅವಶ್ಯ ಕೊಡಿಸಿಕೊಡಬೇಕು. ಇದರಿಂದ ಹೆಚ್ಚಿನ ಅನುಕೂಲವಾಗುತ್ತದೆ ಎಂದು ಹೇಳಬಯಸುತ್ತೇನೆ.

ಟೀಚರುಗಳೇನಿದ್ದಾರೆ ಅವರು ನಮ್ಮ ಗುರುಗಳು ಎಂದು ಹೇಳುತ್ತೇನೆ. ಮಾಸ್ತರುಗಳು ಒಂದು ಶಾಲೆಯಲ್ಲಿ ಮೂರು ವರ್ಷ ಇರಬೇಕೆಂದಿದೆ. ಅದಕ್ಕೆ ಹೆಚ್ಚಿಗೆ ಕಾಲ ಇರಬಾರದು. ಆದರೆ ಒಂದೇಕಡೆ ಹತ್ತು ಹದಿನೈದು ಇಪ್ಪತ್ತು ವರ್ಷ ಹೀಗೆಲ್ಲ ಕೆಲವರಿದ್ದಾರೆ. ಇಂಥವರನ್ನು ವರ್ಗಾಯಿಸಬೇಕೆಂದು ಹೇಳಬಯಸುತ್ತೇನೆ. ಒಂದೇ ಊರಿನಲ್ಲಿ ಹತ್ತಿಪ್ಪತ್ತು ವರ್ಷಗಳ ಕಾಲವಿದ್ದರೆ ಒಳ್ಳೆಯದಲ್ಲ. ಮಾಸ್ತರ್ ಆದವರು ಬರುವ ಮುಂಚೆ ಚೆನ್ನಾಗಿರುತ್ತಾರೆ. ಮೂರು ವರ್ಷದ ನಂತರ ಯಾರೇ ಆಗಲಿ ಅವರನ್ನು ಟ್ರಾನ್ಸ್‌ಫರ್ ಮಾಡಬೇಕು. ಒಂದುವೇಳೆ ಅದೇ ಊರಿಗೆ ಹಾಕಿದರೂ ಮೂರುವರ್ಷ ಮಾತ್ರಹಾಕಿ. ಅನಂತರ ಅವನ್ನು ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡಬೇಕೆಂದು ಹೇಳಬಯಸುತ್ತೇನೆ.

ನಮ್ಮ ಭಾಗದೊಳಗೆ 1953 ರಿಂದ 1956ರವರೆಗೆ ಸೆಲೆಕ್ಷನ್ ಗ್ರೇಡ್ ಎಂದು ಮಾಸ್ತರುಗಳಿಗೆ ಏನು ಇಟ್ಟಿದ್ದರು, ಅದನ್ನು ಖಾಯಂ ಆಗಿ ಅವರಿಗೆ ಜರೂರು ಒದಗಿಸಿಕೊಡಬೇಕೆಂದು ಹೇಳಬಯಸುತ್ತೇನೆ.

ಮರಾಠಿ ಶಾಲೆಗಳ ವಿಷಯ ಹೇಳಬೇಕೆಂದರೆ ಬೆಳಗಾಂ ಜಿಲ್ಲೆಯೊಳಗೆ ಕೆಲವುಕಡೆ, ಜಮಖಂಡಿ ತಾಲ್ಲೂಕಿನಲ್ಲಿ ಕೆಲವು ಕಡೆ, ಬೆಳಗಾಂ ಪ್ರಾಂತ, ಷಾಪುರ, ಇಲ್ಲೆಲ್ಲ ಸಂಸ್ಥಾನಗಳ ರಾಜರು ಅಧಿಕಾರದಲ್ಲಿದ್ದಾಗ, 1948ರಲ್ಲಿ ಅವರು ಬಿಟ್ಟು ಹೋಗುವುದಕ್ಕೆ ಮುಂಚೆ ಅಲ್ಲೆಲ್ಲ ಪೂರ್ತಿ ಕನ್ನಡ ಶಾಲೆಗಳಿದ್ದುವು. ಆದರೆ ಈಗ ಅಲ್ಲೆಲ್ಲ ಮರಾಠಿ ಶಾಲೆಗಳು ಬಂದಿವೆ. ನಾನು ಒಂದು ಸಂಸ್ಥಾನಿಕ ಪ್ರದೇಶದವನು. ನಮ್ಮಲ್ಲಿ ಮುಂಚೆ ಕನ್ನಡ ಶಾಲೆಗಳಿದ್ದುವು. ಸಂಸ್ಥಾನಿಕರು ಬಂದಮೇಲೆ ಅಲ್ಲಿ ಮರಾಠಿ ಶಾಲೆಗಳಾಗಿವೆ. ಬೆಳಗಾಂ ಪ್ರಾಂತ‌ನಲ್ಲಿಯೂ ಮುಂಚೆ ಪೂರ್ತಿ ಕನ್ನಡವಿತ್ತು. ಈ ಜಿಲ್ಲೆಯೊಳಗೆ ಮರಾಠಿ ಶಾಲೆಗಳನ್ನು ಏನುಮಾಡಿದ್ದಾರೆ ಅವನ್ನೆಲ್ಲ ಕೂಡಲೇ ಬದಲುಮಾಡಿ, ಕನ್ನಡ ಶಾಲೆಮಾಡಬೇಕೆಂದು ಹೇಳಬಯಸುತ್ತೇನೆ.

ಸನ್ಮಾನ್ಯ ಅಧ್ಯಕ್ಷರು ಸಮಯ ಕೊಟ್ಟಿದ್ದಕ್ಕಾಗಿ ಅವರಿಗೆ ಆಭಾರಿಯಾಗಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಂ. ಪಾಟೀಲ್ (ಹಡಗಲಿ).—ಮಾನ್ಯ ಅಧ್ಯಕ್ಷರೇ............

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ನಾನು ಒಂದು ಸೂಚನೆ ಮಾಡಬಯಸುತ್ತೇನೆ. ಇಲ್ಲಿ list ನಲ್ಲಿ ಹೆಸರಿದೆಯೆಂದು ಹೇಳಿ ಸದಸ್ಯರುಗಳು ಕುಳಿತುಕೊಂಡಿದ್ದರೆ ನಾನು ತಮ್ಮನ್ನು ಮಾತನಾಡುವುದಕ್ಕೆ ಕರೆಯುವುದಿಲ್ಲ. ಮಾನ್ಯ ಸದಸ್ಯರು ನಿಂತುಕೊಳ್ಳಬೇಕು. ಪಾರ್ಲಿಮೆಂಟಿನಲ್ಲಿಯೂ ಇದೇ ಪದ್ಧತಿ ಇದೆ. I will not call any particular member, because he happens to be in the list. He should stand up and take his chance. That is Parliamentary convention.

ಶ್ರೀ ಎಂ. ಎಂ. ಪಾಟೀಲ್.—ಅಧ್ಯಕ್ಷರೇ, ಈಗ ನಮ್ಮ ವಿದ್ಯಾಖಾತೆಯ ಮಂತ್ರಿಗಳು ಈ ಮಾನ್ಯ ಸಭೆಯ ಮುಂದೆ ಇಟ್ಟಿರುವ 11,32,90,700 ರೂಪಾಯಿಗಳ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ಕೆಲವು ವಿಷಯಗಳನ್ನು ತಿಳಿಸಬಯಸುತ್ತೇನೆ. ವಿದ್ಯಾ ಇಲಾಖೆಯವರು ಪ್ರತಿ ವರ್ಷವೂ ಹೆಚ್ಚು ಹೆಚ್ಚು ಹಣವನ್ನು ಒದಗಿಸುತ್ತಾ ಬಂದಿದ್ದಾರೆ, ಹಾಗೂ ಧಾರಾಳವಾಗಿ ಶಾಲೆಗಳನ್ನು ತೆರೆಯುತ್ತಾ ಬಂದಿದ್ದಾರೆಂಬುದು ಒಂದು ಸಂತೋಷಕರವಾದ ಸಂಗತಿ. ನಮ್ಮ ದೇಶ ಈ ಹೊತ್ತು ಪರದಾಸ್ಯದಿಂದ ಮುಕ್ತವಾಗಿ, ಇಲ್ಲಿನ ಆರ್ಥಿಕ ಪರಿಸ್ಥಿತಿ ಉನ್ನತ ಮಟ್ಟಕ್ಕೆ ಏರಬೇಕಾದರೆ, ನಾವು ಹೆಚ್ಚು ಹೆಚ್ಚು ವಿದ್ಯಾವಂತರನ್ನು ತಯಾರಿಸುವ ವ್ಯವಸ್ಥೆ ಮಾಡಬೇಕು. ಈ ದೃಷ್ಟಿಯಿಂದ ನಮ್ಮ ಸರ್ಕಾರದವರು ಆಗಾಗ್ಗೆ ಯೋಜನೆಗಳನ್ನು ಮಾಡಿಕೊಂಡು ಶಾಲೆಗಳನ್ನು ಹಳ್ಳಿಗಳಕಡೆ ವಿಶೇಷವಾಗಿ ಕೊಡುತ್ತಾ ಬಂದಿದ್ದಾರೆ. ಆದರೂ ಕೂಡ, ನಾವು ಕೇವಲ ಶಾಲೆಗಳನ್ನು ಹೆಚ್ಚಿಸಿಕೊಂಡಾಕ್ಷಣ ನಮ್ಮ ಕರ್ತವ್ಯವನ್ನು ಪೂರೈಸಿದಂತಾಗಲಿಲ್ಲ. ನಾವು ನಮ್ಮ ಗುರಿಯನ್ನು ಸಾಧಿಸಬೇಕಾದರೆ, ನಾವೀಗ ನಮ್ಮ ಕೆಲಸದಲ್ಲಿ ಎಷ್ಟರಮಟ್ಟಿಗೆ ಮುಂದುವರಿದಿದ್ದೇವೆ ಎಂಬುದನ್ನು ಸೂಕ್ಷ್ಮವಾಗಿ ಆಗಾಗ್ಗೆ ಪರಿಶೀಲನೆ ಮಾಡಬೇಕಾಗಿದೆ. ಈ ಹೊತ್ತು ನನ್ನ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಅಲ್ಲಿ ತರದ ಅನೇಕ ಶಾಲೆಗಳು ಕೆಲವೇ ದಿವಸಗಳಲ್ಲಿ ಅಥವಾ ಕೆಲವೇ ತಿಂಗಳುಗಳಲ್ಲಿ ಮುಚ್ಚಲ್ಪಟ್ಟರತಕ್ಕ ಸಂದರ್ಭಗಳು ಅಲ್ಲಲ್ಲೇ ಉಂಟಾಗಿವೆ. ಇಂಥ ಸಂದರ್ಭಗಳಲ್ಲಿ ಯಾವ ಯಾವ ಅಡ್ಡಿ ಆತಂಕಗಳು ಬಂದಿವೆಯೆಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸುವುದು ಅಗತ್ಯ. ಭಿತ್ತಿ ಚಿತ್ರಗಳನ್ನು ಬರೆದು ಈ ಹೊತ್ತಿನ ದಿವಸ ನೀವು ಹೇಗೆ ನಾನಾ ಪ್ರಚಾರ ನಡೆಸುತ್ತಿದ್ದೀರೋ ಹಾಗೆಯೇ ಇಂದು ವಿದ್ಯೆಯ ಮಹತ್ವವನ್ನು ಹಳ್ಳಿಯ ಜನರಿಗೆ ಸ್ಪಷ್ಟಪಡಿಸದೆ ಇದ್ದರೆ ಅವರು ತಮ್ಮ ಮಕ್ಕಳನ್ನು ಸ್ಕೂಲುಗಳಿಗೆ ಕಳುಹಿಸುವುದೇ ಇಲ್ಲ. ಈಗ ಅನೇಕ ಕಡೆ ನಾನು ನೋಡಿರುವುದರಲ್ಲಿ, ಹಳ್ಳಿಯ ರೈತರು ಸುಗ್ಗಿಯ ಕಾಲ ಬಂದೊಡನೆ ತಮ್ಮ ಮಕ್ಕಳನ್ನು ಶಾಲೆಯನ್ನು ಬಿಡಿಸಿ ಹೊಲದ ಕೆಲಸಕ್ಕೆ ಒಯ್ಯುತ್ತಾರೆ. ಶಾಲೆಯಲ್ಲಿ ನೋಡಿದರೆ ಒಬ್ಬರು ಹುಡುಗರೂ ಇರುವುದೇ ಇಲ್ಲ. ಹಳ್ಳಿಯ ಜನರಿಗೆ ವಿದ್ಯೆಯ ಬೆಲೆಯ ಪರಿಜ್ಞಾನವಿಲ್ಲದಿರುವುದೇ ಇದಕ್ಕೆ ಕಾರಣ. ಅವರಿಗೆ ಈ ವಿಷಯದಲ್ಲಿ ಹೆಚ್ಚಿನ ಜ್ಞಾನವನ್ನು ಬೋಧಿಸಬೇಕಾಗಿದೆ. ಈ ದೃಷ್ಟಿಯಿಂದ ಸರ್ಕಾರದವರು ಒಂದು ಸಮಿತಿಯನ್ನು ರಚಿಸಿ ಅವರ ಮೂಲಕ ಪ್ರಚಾರ

ಕಾರ್ಯವನ್ನು ಕೈಕೊಂಡರೆ ನೀವು ಶಾಲೆಗಳನ್ನು ತೆರೆದೂ ಪ್ರಯೋಜನವಾದೀತೆಂದು ನನ್ನ ಭಾವನೆ. ಇನ್ನೊಂದೇನೆಂದರೆ, ಹಳ್ಳಿಗಳಲ್ಲಿ ವಿದ್ಯಾ ಶಿಕ್ಷಕರು ಶಾಲೆಗೆ ಹೀಗೆ ಹುಡುಗರು ಬರದೆ ಇದ್ದರೆ, ಅವರೂ ಕೂಡ ಹುಡುಗರ ತಂದೆ ತಾಯಿಗಳಲ್ಲಿಗೆ ಹೋಗಿ ಅವರನ್ನು ಬೇಡಿಕೊಂಡು ಹುಡುಗರನ್ನು ಕರೆಸಿಕೊಂಡು ತಮ್ಮ ಶಾಲೆಯ attendance ನ್ನು ಜಾಸ್ತಿ ಮಾಡಿ ಕೊಳ್ಳಬೇಕಾದದ್ದೂ ಅವರ ಕರ್ತವ್ಯ. ಆದರೆ, ಅನೇಕ ಹಳ್ಳಿಗಳಲ್ಲಿ ನಾವೀಗ ಕಾಣುತ್ತಿದ್ದೇವೆ, ಯಾವಾಗ ತಂದೆ ತಾಯಿಗಳು ತಮ್ಮ ಜವಾಬ್ದಾರಿಯನ್ನು ಸರ್ವ ರೀತಿಯಿಂದಲೂ ನಿರ್ವಹಿಸದೆ, ತಮ್ಮ ಹುಡುಗರನ್ನು ಶಾಲೆಗೆ ಕಳುಹಿಸುವ ಆಸಕ್ತಿ ವಹಿಸುವುದಿಲ್ಲವೋ, ಆಗ ಶಾಲೆಯ ಶಿಕ್ಷಕರೂ ಕೂಡ ಅಲ್ಲಿನ ರಾಜಕೀಯಕ್ಕೆ ಬಿದ್ದು ತಮ್ಮ ಕರ್ತವ್ಯದಿಂದ ವಿಮುಖರಾಗಿರುತ್ತಾರೆ. ಇದನ್ನು ಹೋಗಲಾಡಿಸಬೇಕಾದರೆ, ಶಿಕ್ಷಣ ಖಾತೆ ಯವರು ಇದರ ಮೇಲ್ವಿಚಾರಣೆಯನ್ನು ಚೆನ್ನಾಗಿ ನೋಡಿಕೊಳ್ಳಬೇಕಾಗಿದೆ.

ಇನ್ನೊಂದು ವಿಷಯ; ಈಗ ಅನೇಕ ಹಳ್ಳಿಗಳಲ್ಲಿ ತಾವು ಶಾಲೆಗಳನ್ನು ಕೊಟ್ಟಿರುವುದು ಇಂದಿಗೂ ದೇವಸ್ಥಾನಗಳಲ್ಲಿ ನಡೆಯುತ್ತಿರುತ್ತವೆ. ನಾನಾದರೋ ಮೊದಲಿನಿಂದ ಹೇಳುತ್ತಿದ್ದೇನೆ. ಈ ಜಾತ್ಯತೀತ ರಾಷ್ಟ್ರದಲ್ಲಿ ಶಿಕ್ಷಣಕ್ಕೆ ಎಲ್ಲರಿಗೂ ಸಮಾನಾವಕಾಶ ಬರಬೇಕಾದರೆ ಈ ರೀತಿ ದೇವಾಲಯಗಳಲ್ಲಿ ನಡೆಸ ಕೂಡದು. ಏಕೆಂದರೆ, ನಾನೇ ಖುದ್ದಾಗಿ ನೋಡಿದ್ದೇನೆ. ಇಂಥ ಹಿಂದೂ ದೇವಾಲಯಗಳಿಗೆ ಇವತ್ತಿನವರೆಗೂ, ಕಾನೂನಿದ್ದರೂ, ಅನೇಕ ಜನರಿಗೆ ಪ್ರವೇಶಕ್ಕೆ ಅವಕಾಶ ಕೊಡದಹಾಗೆ ವಿಷಯಗಳು ನಡೆದುಕೊಂಡು ಹೋಗುತ್ತಿವೆ. ಉದಾಹರಣೆಗೆ, ಬಲ್ಲಹುಣಸೆ ಎಂಬ ಊರಿನಲ್ಲಿ ಒಂದು ಶಾಲೆಯಿತ್ತು. ಅಲ್ಲಿಗೆ ನಾನು ಹೋಗಿ ನೋಡಿದಾಗ, ಅಲ್ಲಿನ ಉಪಾಧ್ಯಾಯರು ನಿಮ್ನ ವರ್ಗದವರ ಹುಡುಗರನ್ನು ಶಾಲೆಯ ಹೊರಗಡೆ ಕೂರಿಸಿದ್ದರು. "ಅವರೇನು ತಪ್ಪು ಮಾಡಿದ್ದಾರೆ, ಏಕೆ ಹೊರಗೆ ಅವರನ್ನು ಕೂರಿಸಿದ್ದೀರಲ್ಲಾ" ಎಂದು ನಾನು ಉಪಾಧ್ಯಾಯರನ್ನು ಕೇಳಿದೆ.

ಶ್ರೀ ಬಿ. ಬಸವಲಿಂಗಪ್ಪ (ಗೃಹ ಶಾಖೆಯ ಉಪ ಮಂತ್ರಿಗಳು).—ಅದು ಸರ್ಕಾರಿ ಶಾಲೆಯೇ?

ಶ್ರೀ ಎಂ. ಎಂ. ಪಾಟೀಲ್.—ಹೌದು, ಅದು ಸರ್ಕಾರಿ ಶಾಲೆಯು. ಉಪಾಧ್ಯಾಯರು ಹೇಳಿದರು, "ನಾನೇನು ಮಾಡಲಿ, ದೇವಸ್ಥಾನದೊಳಕ್ಕೆ ಅವರನ್ನು ಸೇರಿಸಿದರೆ ಊರಿನವರು ಆಕ್ಷೇಪಣೆ ಮಾಡುತ್ತಾರೆ" ಎಂದು. ನಾನು ಆಗ ಇದರ ಸತ್ಯಾಂಶವನ್ನು ತಿಳಿದು ಕೊಳ್ಳಬೇಕೆಂದು ಊರಿನವರನ್ನು ಕೇಳಿದಾಗ ಗೊತ್ತಾಯಿತು, ಆ ಶಾಲೆಯ ಶಿಕ್ಷಕ, ಒಬ್ಬ ಉಚ್ಚ ಜಾತಿಗೆ ಸೇರಿದವನಾಗಿದ್ದು ಅಲ್ಲಿಯೇ ಆ ದೇವಸ್ಥಾನದ ಹಿಂದುಗಡೆ ಅಡಿಗೆ ಮಾಡಿಕೊಳ್ಳುತ್ತಿದ್ದ. ಅವನು ಈ ನಿಮ್ನ ವರ್ಗದವರನ್ನು ಒಳಗೆ ಕೂರಿಸಿದರೆ ತನ್ನ ಧರ್ಮಕ್ಕೆ ಲೋಪ ಬರುತ್ತದೆಂದು ಭಾವಿಸಿ, ಊರಿನವರ ಮೇಲೆ ಆರೋಪ ಮಾಡುತ್ತಿದ್ದ. ಆದ್ದರಿಂದ ಸರ್ಕಾರದವರು ಇಂಥದನ್ನೆಲ್ಲಾ ನೋಡಿಕೊಂಡು ಹೋಗಬೇಕಾಗಿದೆ. ಶಾಲೆಗಳಿಗೆ ಕಟ್ಟಡಗಳನ್ನು ಕಟ್ಟಿಸಿಕೊಟ್ಟರೆ ಸಾರ್ವಜನಿಕ ಸ್ಥಳಗಳ ವಿಷಯದಲ್ಲಿ ಯಾರ ಅಡ್ಡಿ ಆತಂಕವೂ ಇರುವುದಿಲ್ಲ. ಸರ್ಕಾರದವರು ಶಾಲೆ ತೆರೆಯುವುದೇ ಮುಹತ್ವವಲ್ಲ. ಶಾಲೆಗೆ ಬೇಕಾದ ಕಟ್ಟಡಗಳನ್ನು ಕಟ್ಟಿಸಿಕೊಡುವುದೂ ಅವರ ಜವಾಬ್ದಾರಿಯೆಂದು ಹೇಳುತ್ತೇನೆ.

ಇನ್ನೊಂದು ಅತಿ ಪ್ರಾಮುಖ್ಯವಾದ ವಿಷಯ ವೇನೆಂದರೆ, ಇತ್ತೀಚೆಗೆ ಹಳ್ಳಿಗಳಲ್ಲಿ ಮಕ್ಕಳನ್ನು ಶಾಲೆಗೆ ಸೇರಿಸಬೇಕಾದರೆ, ಶಾಲೆ ಆದಷ್ಟು ಹತ್ತಿರದಲ್ಲಿರಬೇಕು. ಐದಾರು ವರ್ಷದ ಮಗು ಮೂರು ನಾಲ್ಕು ಮೈಲಿ ಹೋಗಿ ಓದಿಕೊಂಡು ಬರುವುದೆಂದರೆ ಆಗದ ಮಾತು. ಆದ್ದರಿಂದ ಇಂಥ ಕಷ್ಟವನ್ನು ಹೋಗಲಾಡಿಸಬೇಕಾದರೆ ಕಡಮೆ ಜನಸಂಖ್ಯೆಯಿರುವ ಹಳ್ಳಿಗಳಿಗೂ ಶಾಲೆಗಳನ್ನು ಒದಗಿಸಿಕೊಡಬೇಕು; ಮತ್ತು ಸಾಧ್ಯವಾದಷ್ಟುಮಟ್ಟಿಗೆ ಒಂದು ಶಾಲೆಯಿಂದ ಇನ್ನೊಂದು ಶಾಲೆಗೆ ಹೋಗಬೇಕಾಗಿರುವ ಸಂದರ್ಭದಲ್ಲಿ, ಅದು ಕಡಮೆ ದೂರದಲ್ಲಿರುವಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ಸೂಚನೆಯೇನೆಂದರೆ, ಎಲ್ಲಿ ವಿದ್ಯಾ ಮಟ್ಟ ಹಿಂದುಳಿದಿದೆಯೋ, ಅಂಥ ಪ್ರದೇಶಗಳಿಗೆ ವಿಶೇಷವಾಗಿ ಶಾಲೆಗಳನ್ನು ಒದಗಿಸಿಕೊಟ್ಟು ಅವರೂ ಕೂಡ ಇತರರ ಸರಿಸಾಟಿಗೆ ಬರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಮೊದಲಿನಿಂದಲೂ ಕೇಳುತ್ತಿದ್ದೇನೆ. ಈಗ ವಿಲೀನೀಕರಣವಾಗಿ ಎರಡು ವರ್ಷವಾಯಿತು. ವಿಶೇಷವಾಗಿ ಗುಲ್ಬರ್ಗ ಜಿಲ್ಲೆಗೆ ಹೆಚ್ಚು ಹೆಚ್ಚು ಶಾಲೆಗಳನ್ನು ಒದಗಿಸಿಕೊಡುತ್ತಿದ್ದೀರಿ. ಅದಕ್ಕಾಗಿ ಸರ್ಕಾರದವರಿಗೆ ನನ್ನ ವಂದನೆಗಳು, ಅಷ್ಟೇ ಆದರೆ ಸಾಲದು. ರಾಜ್ಯದ ಇತರರ ಮಟ್ಟಕ್ಕೆ ನಮ್ಮನ್ನು ತರುವುದು ಸರ್ಕಾರದವರ ಕರ್ತವ್ಯ. ಹೀಗಿರುವಲ್ಲಿ ನಾನು ಬಡ್ಜೆಟ್ಟನ್ನು ಪರಿಶೀಲನೆ ಮಾಡಿದ್ದರಲ್ಲಿ ಗೊತ್ತಾಗುತ್ತದೆ, 1957-58 ನೆಯ ಸಾಲಿಗೆ ಬಳ್ಳಾರಿ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳಿಗೆ ಕೊಟ್ಟಿದ್ದ ಗ್ರ್ಯಾಂಟ್-ಇನ್-ಏಡ್ 5,84,136 ರೂಪಾಯಿಗಳಿದ್ದರೆ, ಹೋದ 1958-59 ರಲ್ಲಿ ಅದನ್ನು 3,90,000 ರೂಪಾಯಿಗಳಿಗೆ ಇಳಿಸಿದ್ದಾರಲ್ಲಾ!

3 P.M.

ಇದರ ರಿವೈಜ್ಡ್ ಎಸ್ಟಿಮೇಟ್ 3,90,000 ರೂಪಾಯಿಗಳಿಗೆ ಆಗಿದೆ, 1959-60 ರಲ್ಲಿ 4,50,000 ರೂಪಾಯಿಗಳಿಗೆ ಅಂದಾಜಾಗಿದೆ; 1957-58 ರಲ್ಲಿದ್ದುದಕ್ಕಿಂತ 1,34,136 ರೂಪಾಯಿ ಕಡಮೆಯಾಗಿದೆ. ಇತರ ಜಿಲ್ಲೆಗಳಲ್ಲಿ ಶೇಕಡ 85 ಜನ ವಿದ್ಯಾವಂತರಿದ್ದರೆ ನಮ್ಮ ಜಿಲ್ಲೆಯಲ್ಲಿ ಸುಮಾರು ಶೇಕಡ 35 ಮಂದಿ ಇದ್ದಾರೆಂದು ನಿನ್ನೆ ಮಾತನಾಡಿದ ಘೋರ್ಪಡೆಯವರು ಹೇಳಿದರು. ನಮ್ಮಲ್ಲಿ ವಿದ್ಯಾವಂತರ ಸಂಖ್ಯೆಯನ್ನು ಹೆಚ್ಚಿಸಬೇಕು ಎಂದು ಅವರು ಹೇಳಿದರು. ಇಂಥ ಒಂದು ಸಂದರ್ಭದಲ್ಲಿ ಪ್ರಾಥಮಿಕ ಶಾಲೆಗಳಿಗೆ ಗ್ರಾಂಟು ಕೊಡುವಾಗ್ಗೆ ಖೋತಾ ಮಾಡಿ ಕೊಡುವುದು ಸೂಕ್ತವಲ್ಲ. ಒಂದು ದೇಹದ ಅವಯವಗಳು ಸರ್ವಾಂಗ ಸುಂದರವಾಗಿರಬೇಕಾದರೆ ತಲೆ ಭಾರವಾದರೆ, ಹೊಟ್ಟೆ ಭಾರಿಯಾದರೆ ಕಾರ್ಯ ಮಾಡುವುದಕ್ಕಾಗುವುದಿಲ್ಲ ಎಂಬುದನ್ನ ಗಮನಿಸಿ ಈ ವರ್ಷದಿಂದ ಹಳ್ಳಿಗಾಡಿನ ಕಡೆ ಹೆಚ್ಚು ಲಕ್ಷ ಕೊಟ್ಟು ಖೋತಾ ಮಾಡದಂತೆ ಹೆಚ್ಚು ಹಣ ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಈ ಸಮಯದಲ್ಲಿ ಸೂಚಿಸುತ್ತಿದ್ದೇನೆ.

ಇನ್ನು ಈಗಿನ ಶಿಕ್ಷಣ ಪದ್ಧತಿಯಲ್ಲೇನಾಗಿದೆ ಯೆಂದರೆ ಹೈಸ್ಕೂಲುಗಳಲ್ಲಿ ನಮ್ಮ ಶಿಕ್ಷಣಮಟ್ಟ ಬಹಳ ಕಡಮೆಯಾಗುತ್ತಿದೆ. ಈಗಿರುವ ವಿದ್ಯಾರ್ಥಿಗಳ ಶಿಕ್ಷಣ ಮಾಧ್ಯಮ ಕನ್ನಡವಾಗಿರುವುದರಿಂದ ಹೈಸ್ಕೂಲುಗಳಿಂದ ಪಾಸಾಗಿ ಬಂದಕೂಡಲೆ ವಿದ್ಯಾರ್ಥಿಗಳೇ ಎಲ್ಲಾ ವಿಷಯಗಳನ್ನೂ ಇಂಗ್ಲೀಷಿನಲ್ಲಿ ಅಭ್ಯಾಸ

(ಶ್ರೀ ಎಂ. ಎಂ. ಪಾಟೀಲ್)

ಮಾಡಬೇಕಾಗಿರುವುದರಿಂದ ಅನೇಕ ಹಳ್ಳಿಗಾಡಿನಿಂದ ಬಂದ ವಿದ್ಯಾರ್ಥಿಗಳು ಅನುತ್ತೀರ್ಣರಾಗುವ ಪರಿಸ್ಥಿತಿಯುಂಟಾಗಿದೆ. ಇತ್ತೀಚೆಗೆ ಹೈಸ್ಕೂಲುಗಳಲ್ಲಿ ಶಿಕ್ಷಣ ಮಟ್ಟ ಕಡಮೆಯಾಗುತ್ತಿರುವುದೂ ಅಲ್ಲದೆ ನಮಗೆ ಈಗಿನ ವಿದ್ಯಾಭ್ಯಾಸ ಪದ್ಧತಿಯಿಂದ ಅಷ್ಟು ಅನುಕೂಲವಾಗುತ್ತಿಲ್ಲ. ಈಗಿನ ಪದ್ಧತಿಯಂತೆ ಘಜನಿಮಹಮದ್ ಯಾವ ಕಾಲದಲ್ಲಿ ಹುಟ್ಟಿದ, ವೆಲ್ಲಸ್ಲಿ ಏನು ಮಾಡಿದ ಎಂಬುದನ್ನು ತಿಳಿಸುತ್ತಾರೆ. ಆದರೆ ನಮಗೆ ಬೇಕಾಗಿರುವುದು ಮನೆಗೆ ಹೋದ ಕೂಡಲೇ ತಂದೆ ತಾಯಿಗಳಿಗೆ ಹೊರೆಯಾಗದಿರುವ ವಿದ್ಯೆ. ಈ ದಿವಸ ನನ್ನ ಮಗ ಇದ್ದಾನೆ, ಎಸ್.ಎಸ್.ಎಲ್.ಸಿ. ವರೆಗೆ ಓದಿ ಎರಡು ವರ್ಷ ಫೈಲಾಗಿ ಮನೆಯಲ್ಲಿದ್ದಾನೆ. ಯಾವಾಗಲಾದರೂ ಒಂದು ಕೊಡ ನೀರು ತರುವಂತೆ ಹೇಳಿದರೆ ನನ್ನ ಕೈಲಾಗುವುದಿಲ್ಲ ಎಂದು ಹೇಳುತ್ತಾನೆ. ನಾನೇ ಸ್ವತಃ ಎಷ್ಟೋ ವೇಳೆ ನೀರು ತರುತ್ತೇನೆ. ಆದ್ದರಿಂದ ಸ್ವಾವಲಂಬಿಯಾಗಿ ಜೀವನ ಮಾಡುವ ಶಕ್ತಿ ಬರುವಂಥ ವಿದ್ಯೆ ನಮ್ಮ ದೇಶದಲ್ಲಿ ಬೇಕಾಗಿದೆ. ನಾನು ಅಸೆಂಬ್ಲಿಗೆ ಬರುವಾಗ ಒಬ್ಬ ವಿದ್ಯಾರ್ಥಿ ಗಾಂಧಿನಗರದಲ್ಲಿ ಸಿಕ್ಕಿದ, ಅವನು ನೌಕರಿಗಾಗಿ ಎರಡು ದಿವಸಗಳಿಂದ ಅಲೆಯುತ್ತಿದ್ದಾನೆ, ಅನ್ನವಿಲ್ಲದೆ ಒದ್ದಾಡುತ್ತಿದ್ದಾನೆ, ಹಳ್ಳಿಗಳ ಸ್ಕೂಲನ್ನು ಮುಗಿಸಿ ಮಾಧ್ಯಮಿಕ ಶಾಲೆಯಲ್ಲಿ ಓದುವಾಗ ಸ್ವಾವಲಂಬಿಯಾಗಿ ಜೀವನ ನಡೆಸಲು ಏನು ಬೇಕೋ ಅಂಥ ವಿದ್ಯೆ ಕಲಿಸುವ ಬೇಸಿಕ್ ಸ್ಕೂಲು ವಗೈರೆ ತೆರೆಯಬೇಕು. ಇಂದು ಚರಿತ್ರೆ ಪಾಠ ಬೇಡ, ಕೇವಲ ಡಿಗ್ರಿ ಪರೀಕ್ಷೆ ಪಾಸು ಮಾಡುವುದರಿಂದ ಸಹಾಯಕಾರಿಯಾಗುವುದಿಲ್ಲ, ಸ್ವಾವಲಂಬಿಯಾಗಲು ಸಹಕಾರಿಯಾದ ವಿದ್ಯೆ ದೊರೆತರೆ ಹೆಚ್ಚು ಅನುಕೂಲವಾಗುತ್ತದೆ.

ಇನ್ನು ಪ್ರಾಥಮಿಕ ಶಾಲೆಗಳನ್ನು ಬೇಸಿಕ್ ಶಾಲೆಗಳಾಗಿ ಪರಿವರ್ತಿಸಲು ಒಂಭತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ, ಬಹಳ ಸಂತೋಷವಾಯಿತು. ಇದಕ್ಕೆ ಇನ್ನೂ ಹೆಚ್ಚು ಹಣ ಒದಗಿಸಬೇಕು, ಹಣಕಾಸಿನ ಪರಿಸ್ಥಿತಿ ನೋಡಿ ಅದಕ್ಕೆ ತಕ್ಕಂತೆ ಅವಕಾಶ ಮಾಡಿದ್ದಾರೆ. ಈ ಹಣ ವಿನಿಯೋಗವಾಗುವಾಗ ಯಾವ ಹಿಂದುಳಿದ ಪ್ರದೇಶಗಳಿಗೆ ಸಮನಾಗಿ ಸಲ್ಲುವ ಹಾಗೆ ಹಂಚಬೇಕೆಂದು ನಾನು ಅತಿ ವಿನಯದಿಂದ ಪ್ರಾರ್ಥನೆ ಮಾಡಿಕೊಂಡು, ಈ ಸಂದರ್ಭದಲ್ಲಿ ಈ ಸಭೆಯಲ್ಲಿ ಮಾತನಾಡಬೇಕಾದರೆ, ಅದಕ್ಕೆ ಅವಕಾಶ ಸಿಕ್ಕಬೇಕಾದರೆ ಪೂರ್ವಜನ್ಮದ ಪುಣ್ಯಫಲವಿರಬೇಕು, ಘೋರ ತಪಸ್ಸು ಮಾಡಬೇಕು ಎಂದು ಇಷ್ಟು ಸೂಚನೆ ಮಾಡಿಕೊಂಡು, ಇಷ್ಟೊಂದು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದನೆಯನ್ನರ್ಪಿಸಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

The House adjourned for Tea at Six Minutes past Three of the Clock and re-assembled at Forty Minutes past Three of the Clock.

[MR. DEPUTY SPEAKER in the Chair]

ಶ್ರೀ ಎಂ. ಎಸ್. ಪಟ್ಟಣ್ (ರಾಮದುರ್ಗ).--ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ವಿದ್ಯಾ ಇಲಾಖೆಯ ಹನ್ನೊಂದು ಕೋಟಿ ರೂಪಾಯಿಗಳ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈ ಹಣವನ್ನು ಯೋಗ್ಯ ರೀತಿಯಲ್ಲಿ ಖರ್ಚು ಮಾಡಲಾಗುವುದೇ ಎಂದು ನಾನು ಕೇಳುತ್ತೇನೆ. ಹಳ್ಳಿಗಳಲ್ಲಿ ಶಾಲೆಗಳು ನಡೆಯದೆ ಗ್ರಾಂಟು ಮೊತ್ತ ತಿನ್ನುತ್ತಾರೆ. ಶಿಕ್ಷಕರು ಶಾಲೆಗೆ ಬರುವದಿಲ್ಲ. ಸುಮ್ಮನೆ ಹಾಜರಿ ಬುಕ್ ತುಂಬಿ ಗ್ರಾಂಟು ಮೊತ್ತ ತೆಗೆದುಕೊಳ್ಳುತ್ತಾರೆ. ಮಂತ್ರಿಗಳು ಪ್ರವಾಸದ ಕಾಲದಲ್ಲಿ ಹಳ್ಳಿಗಳಿಗೆ ಹೋದಾಗ್ಗೆ ಅಲ್ಲಿಯ ನಿಜವಾದ ಪರಿಸ್ಥಿತಿ ಏನಿದೆ ಎಂಬುದನ್ನು ತಿಳಿದುಕೊಳ್ಳಬೇಕು. ತಮ್ಮ ಡಿಪಾರ್ಟಮೆಂಟಿನ ಕೆಲಸ ಸರಿಯಾಗಿ ಒಂದು ವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿದೆಯೋ ಎಂಬುದನ್ನು ಪರಿಶೀಲಿಸಬೇಕು; ಹಳ್ಳಿಯ ಜನರು ಹೇಳುವುದನ್ನು ಕೇಳಿಕೊಂಡು ಸರಿಪಡಿಸಲು ಪ್ರಯತ್ನ ಮಾಡಬೇಕು. ಆದರೆ ದುರ್ದೈವದಿಂದ ಮಂತ್ರಿಗಳು ಬಂದಾಗ್ಗೆ ವಿರೋಧಪಕ್ಷದ ಸದಸ್ಯರಾದ ನಮ್ಮನ್ನು ಕಾಣುವುದಿಲ್ಲ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸದಸ್ಯರು ಮಂತ್ರಿಗಳ ಸುತ್ತುಮುತ್ತು ಇದ್ದುಕೊಂಡು ಬೇರೆಯವರಿಗೆ ಭೇಟಿಯಾಗುವುದಕ್ಕೆ ಅವಕಾಶವನ್ನೇ ಕಲ್ಪಿಸಿ ಕೊಡುವುದಿಲ್ಲ. ಒಮ್ಮೆ ಮುಖ್ಯ ಮಂತ್ರಿಗಳು ಬಂದಾಗ್ಗೆ ಅವರ ಜೊತೆಗೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸದಸ್ಯರು ಬಂದು ಅಲ್ಲಿ ಹೋಗುವುದು ಬೇಡ ಎಂದು ಹೇಳಿದ್ದಾರೆ. ಈ ರೀತಿಯಾಗಿ ಮಂತ್ರಿಗಳಾದವರು ಬಂದಾಗ್ಗೆ ಜನರ ಬೇಡಿಕೆಗಳನ್ನು ಕೇಳಿಕೊಳ್ಳದೇ ಹೋಗುವುದು ಸರಿಯಲ್ಲ. ಮಾನ್ಯ ಶ್ರೀ ನಿಜಲಿಂಗಪ್ಪನವರು ಒಮ್ಮೆ ನಮ್ಮ ತಾಲ್ಲೂಕಿಗೆ ಬಂದಾಗ್ಗೆ ನಾವು 8—10 ಸಾವಿರ ಜನ ಹಳ್ಳಿಯವರು ಅವರನ್ನು ಅಡ್ಡಗಟ್ಟಿ ನಿಲ್ಲಿಸಿದಾಗ್ಗೆ ಅವರ ಕೂಡ ಮಾತನಾಡಲು ಅವಕಾಶ ದೊರೆಯಿತು. ನಮ್ಮ ತಾಲ್ಲೂಕು ಮೊದಲು ಒಂದು ಚಿಕ್ಕ ಸಂಸ್ಥಾನವಾಗಿತ್ತು. ಅಲ್ಲಿ ಯಾವ ಸುಧಾರಣೆಯನ್ನೂ ಮಾಡಿಲ್ಲ. ಮಂತ್ರಿಗಳು ಹಳ್ಳಿಗಳಲ್ಲಿ ತಿರುಗಾಡಿ ಜನರ ಬೇಡಿಕೆಗಳು ಏನಿವೆ ಎಂಬುದನ್ನು ತಿಳಿದುಕೊಳ್ಳಬೇಕು. ಒಮ್ಮೆ ವಿದ್ಯಾ ಇಲಾಖೆಯ ಮಂತ್ರಿಗಳು ನಮ್ಮ ತಾಲ್ಲೂಕಿಗೆ ಬಂದಾಗ್ಗೆ ಅವರನ್ನು ಭೇಟಿಯಾಗಿ ಏಳು ವರ್ಷಗಳಿಂದ ಇರುವ ರಾಮದುರ್ಗ ಹೈಸ್ಕೂಲಿನ ಬೇಡಿಕೆಯನ್ನು ಅವರ ಗಮನಕ್ಕೆ ತರಬೇಕೆಂದು ನಾವು ಎಷ್ಟು ಪ್ರಯತ್ನಪಟ್ಟರೂ ಅವರನ್ನು ಭೇಟಿಯಾಗಲು ಅವಕಾಶ ದೊರೆಯಲಿಲ್ಲ. ಇಂದಿನ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಬೇಡಿಕೆಗಳು ಏನಿವೆ ಎಂಬುದನ್ನು ಕೇಳಿಕೊಂಡು ರಾಜ್ಯದಾಡಳಿತೆಯನ್ನು ನಡೆಸಬೇಕು. ಹಳ್ಳಿಗಳಲ್ಲಿ ಶಾಲೆಗಳು ಸರಿಯಾಗಿ ನಡೆಯುವುದಿಲ್ಲ. ಮಂತ್ರಿಗಳು ಪ್ರವಾಸಕ್ಕೆ ಹೋದಾಗ್ಗೆ ಅಲ್ಲಿಯ ಶಾಲೆಗಳು ಸರಿಯಾಗಿ ನಡೆಯುತ್ತಿವೆಯೋ ಇಲ್ಲವೇ ಎಂಬುದನ್ನು ಅಲ್ಲಿಯ ಜನರ ಪ್ರತಿನಿಧಿಗಳಿಂದ ತಿಳಿದುಕೊಳ್ಳಬೇಕು. ನಾನು ಎಂ. ಎಲ್. ಎ. ಆದಮೇಲೆ ನಮಗೆ ಏನು ಕಷ್ಟ ಆಗುತ್ತಿದೆ ಎಂದರೆ ಪ್ರತಿಯೊಬ್ಬರೂ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ನವಕರಿಗಾಗಿ ಅರ್ಜಿ ಹಾಕುತ್ತಾರೆ ಮತ್ತು ನವಕರಿ ಕೊಡಿಸಲು ನಮ್ಮ ಸಹಾಯವನ್ನು ಅಪೇಕ್ಷಿಸುತ್ತಾರೆ, ಇದರಿಂದ ನಮಗೆ ಕಷ್ಟವಾಗುತ್ತದೆ. ಆರ್ಟ್ಸ್, ಸಾಯನ್ಸ್, ಕಾಮರ್ಸ್ ಕಾಲೇಜುಗಳಲ್ಲಿ ಸೀಟು ದೊರಕಿಸಿಕೊಡಬೇಕೆಂದು ವಿದ್ಯಾರ್ಥಿಗಳು ಕೇಳಿಕೊಳ್ಳುತ್ತಾರೆ. ಟೆಕ್ನಿಕಲ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗಾಗಿ ಹೆಚ್ಚು ಸೀಟುಗಳ ಏರ್ಪಾಡು ಮಾಡಿ ಅವರಿಗೆ ಪ್ರವೇಶ ದೊರೆಯುವ ಹಾಗೆ ಮಾಡಬೇಕು. ತಾಂತ್ರಿಕ ಶಿಕ್ಷಣ ಪಡೆದು ಅವರು ತಮ್ಮ ಕಾಲಮೇಲೆ ತಾವು ನಿಲ್ಲುವಂತೆ ಆಗಬೇಕು. ಆದುದರಿಂದ ಇಂದು ಅತ್ಯಂತ ಅವಶ್ಯವಾಗಿರುವ ತಾಂತ್ರಿಕ ಶಿಕ್ಷಣದ ಕಾಲೇಜುಗಳಲ್ಲಿ ಹೆಚ್ಚಾಗಿ ಸೀಟುಗಳು ದೊರಕುವ

ಹಾಗೆ ಒಂದು ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಈ ಉಪಾಧ್ಯಾಯರ ಪರಿಸ್ಥಿತಿಯಂತೂ ಬಹಳ ಕೆಟ್ಟ ಪರಿಸ್ಥಿತಿಯಲ್ಲಿದೆ ಎಂದು ಹೇಳುತ್ತಾ ಇದ್ದಾರೆ. ಟೌನ್‌ನಲ್ಲಿರತಕ್ಕ ಉಪಾಧ್ಯಾಯರು ಅವರಿಗೆ ಬರತಕ್ಕ 70 ರೂಪಾಯಿಗಳ ಸಂಬಳದಲ್ಲಿ ಅತಿ ಹೆಚ್ಚಾದ ಮನೆಬಾಡಿಗೆ ಕೊಟ್ಟು ಜೀವನ ನಡೆಸುವುದೇ ದುಸ್ತರವಾಗಿದೆ. ಕನಿಷ್ಠ 50 ಸಾವಿರ ಜನಸಂಖ್ಯೆಗೆ ಮೇಲ್ಪಟ್ಟು ಇರತಕ್ಕ ಟೌನ್‌ಗಳಲ್ಲಿ ಟೀಚರ್ಸ್‌ಗೆ ಬಾಡಿಗೆ ಸಲುವಾಗಿ ಅಲೋಯೆನ್ಸ್ ಕೊಡಬೇಕು, ಬೇರೆ ಡಿಪಾರ್ಟುಮೆಂಟಿನವರಿಗೆ ಇತರ ಉತ್ಪನ್ನಗಳು ಇರುತ್ತವೆ. ಮಕ್ಕಳಿಗೆ ವಿದ್ಯೆಕಲಿಸತಕ್ಕ ಈ ಟೀಚರ್ಸ್‌ಗೆ ಬೇರೆ ಯಾವ ತರಹದ ಉತ್ಪನ್ನವೂ ಇರದೆ ನೀವು ಕೊಡತಕ್ಕ ಸಂಬಳವನ್ನೇ ಅವಲಂಬಿಸಿ ಅವರು ಜೀವನ ಮಾಡಬೇಕಾಗುತ್ತದೆ.

ಶ್ರೀ ಅಣ್ಣಾರಾವ್ ಗಣಮುಖಿ (ವಿದ್ಯಾ ಶಾಖೆಯ ಮಂತ್ರಿಗಳು).—ಬೇರೆಯವರಿಗೆ ಯಾವ ಉತ್ಪನ್ನ ಇದೆ?

ಶ್ರೀ ಎಂ. ಎಸ್. ಪಟ್ಟಣ್.—ಅದು ನನಗೂ ಗೊತ್ತು ನಿಮಗೂ ಗೊತ್ತು, ವಿವರಿಸಿ ಹೇಳಬೇಕಾಗಿಲ್ಲ. ಇನ್ನು ಹೆಚ್ಚುಕಾಲಾವಕಾಶವಿಲ್ಲದೇ ಇರುವುದರಿಂದ ಸ್ವಂತದ ವಿಷಯ ಮೊದಲು ಹೇಳಿ ಮುಗಿಸಿಕೊಂಡು ಬಾಕಿ ವಿಚಾರ ಆಮೇಲೆ ಮಾತನಾಡುತ್ತೇನೆ. ರಾಮದುರ್ಗ ಎನ್ನುವಂತಹದು ಮೊದಲು ಒಂದು ಸಂಸ್ಥಾನವಾಗಿತ್ತು. ಅಲ್ಲಿನ ಜನರು ಜವಾಬ್ದಾರಿ ಸರ್ಕಾರದ ಸಲುವಾಗಿ 20 ವರ್ಷ ಹೋರಾಟ ಮಾಡಿದರು. ಹೋರಾಟ ನಡೆಸುವ ಕಾಲಕ್ಕೆ ಅಲ್ಲಿನ ಸಂಸ್ಥಾನಿಕರು ಎಷ್ಟೋ ದೌರ್ಜನ್ಯದಿಂದ ದಬ್ಬಾಳಿಕೆ ನಡೆಸಿ ರಾಜ್ಯವನ್ನು ಆಳಿದರು. ಅದು ನಮ್ಮ ಚೀಫ್ ಮಿನಿಸ್ಟರಿಗೆ ಸಂಪೂರ್ಣ ಮಾಹಿತಿ ಇದೆ. ಸಂಸ್ಥಾನದ ಆಳ್ವಿಕೆ ಹೋಗಬೇಕು, ಸ್ವತಂತ್ರರಾಜ್ಯವಾಗಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಬೇಕೆಂದು ಹೋರಾಟ ನಡೆದಾಗ ಹಿಟ್ಲರ್‌ಶಾಹಿಯಂತೆ ನಡೆದುಕೊಂಡರು. ಕೊನೆಗೆ ಇಡೀ ಹಿಂದೂಸ್ತಾನದಲ್ಲಿ 700 ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ನಡೆದು ಸ್ವಾತಂತ್ರ್ಯ ಬಂತು. ಮುಂಬೈ ರಾಜ್ಯದಲ್ಲಿದ್ದಾಗ ರಾಮದುರ್ಗ ಹೈಸ್ಕೂಲನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಿ ಎಂದರೆ ಮುಂಬೈ ಸರ್ಕಾರದವರು ಜಿಲ್ಲಾಕ್ಕೆ ಒಂದು ಹೈಸ್ಕೂಲು ಸರ್ಕಾರಿ ಹೈಸ್ಕೂಲು ಮಾಡುತ್ತೇವೆ ಬಾಕಿಯದು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರು. ನಮ್ಮ ಮುನಿಸಿಪಾಲಿಟಿಯವರಿಗೆ ಆಗಲೇ ನಿರ್ವಹಿಸಲು ಶಕ್ಯವಿರಲಿಲ್ಲ. ಅದಕ್ಕೆ ಒಂದು ಲೋಕಲ್ ಕಮಿಟಿ ಮಾಡಿ, ಲೋಕಲ್ ಫಂಡ್ ಇಟ್ಟು ಅವರ ಸ್ವಾಧೀನಕ್ಕೆ ತೆಗೆದುಕೊಳ್ಳಬಹುದಾಗಿತ್ತು. ಆದರೆ ಕರ್ನಾಟಕದ ಏಕೀಕರಣವಾದಾಗ ರಾಮದುರ್ಗದವರೂ ಹೋರಾಟ ನಡೆಸಿದರು. ಆಗಲೂ ಈ ಹೈಸ್ಕೂಲು ಹಾಗೆಯೇ ಉಳಿಯಿತು. ಎಂದರೆ ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ಮುಂದೆ ಬರಲಿಲ್ಲ. ಬಿಜಾಪುರ ಜಿಲ್ಲೆಯಲ್ಲಿ ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ ಎಂದು ಇದೆ. ಅವರು ಇದನ್ನು ಐದು ವರ್ಷದ ಕಂಡೀಷನ್‌ಮೇಲೆ ತೆಗೆದುಕೊಂಡರು. ಅವರು ಹೇಳಿದ ಹಾಗೆ ಕೇಳಿಕೊಂಡು, ಅವರೊಡನೆ ಸಹಕರಿಸಿಕೊಂಡು ಹೋಗುತ್ತಿದ್ದಾರೆ ಎಂದು ನಾವು ಸಮಾಧಾನ ತಾಳಿದೆವು. ಮುಂದೆ ಕ್ರಮೇಣ ಏನಾಯಿತು, ರಾಮದುರ್ಗ ತಾಲ್ಲೂಕನ್ನು ಬೆಳಗಾಂಜಿಲ್ಲೆಯಲ್ಲಿ ಸೇರಿಸಿದರು. ಆಗ ಬಾಗಲಕೋಟೆಯ ವಿದ್ಯಾವರ್ಧಕ ಸಂಘದವರು ತಮ್ಮ ಪ್ರತಿನಿಧಿಗಳ ಮೂಲಕ ಈ ಹೈಸ್ಕೂಲನ್ನು ನಡೆಸಿ, ತಮ್ಮದೇ ಆದ ರೀತಿಯಿಂದ ದೌರ್ಜನ್ಯ ನಡೆಸಿ ಆಡಳಿತ ಮಾಡುತ್ತಾ ಬಂದಿದ್ದಾರೆ. ಪರೀಕ್ಷೆ ಶುರು ಆಗುವುದಕ್ಕೆ ಮುಂಚೆ ಇನ್ನು ಎರಡು ತಿಂಗಳು ಪರೀಕ್ಷೆ ಇದೆ ಎನ್ನುವಾಗ ಯಾರೋ ಒಬ್ಬ ಆಡಳಿತಗಾರರು ತಮ್ಮ ವಶೀಲಿಯಿಂದ ತಮಗೆ ಬೇಕಾದ ಇಬ್ಬರು ಟೀಚರ್ಸ್‌ನ್ನು ನೇಮಿಸಿ ರಾಮದುರ್ಗಕ್ಕೆ ಕಳುಹಿಸಿದರು. ಪರೀಕ್ಷೆ ಮುಗಿದ ಮೇಲೆ ಬದಲಾಯಿಸಿರಿ, ವಿಷಯ ಹೆಚ್ಚು ಕಮ್ಮಿ ಆಗುತ್ತದೆ, ಪರೀಕ್ಷೆ ಮುಗಿದ ಮೇಲೆ ಬದಲಾವಣೆ ಮಾಡಬಹುದು ಎಂದು ಹೇಳಿದರೂ ಕೂಡ ಕೇಳದೆ ಹೋದರು. ಅದರ ಸಲುವಾಗಿ ವಿದ್ಯಾರ್ಥಿಗಳು ಪ್ರತಿಭಟನೆ ಮಾಡಿ ಹೈಸ್ಕೂಲಿಗೆ ಬಹಿಷ್ಕಾರ ಹಾಕಿ ಹೊರಗೆ ಬಂದರು. ಆ ರೀತಿ ಮಾಡಿದವರು ಯಾರು ಎಂದು ಹೇಳಿ ಈ ಸಂದರ್ಭದಲ್ಲಿ ಆ ವ್ಯಕ್ತಿಗಳ ಹೆಸರು ಹೇಳುವುದಿಲ್ಲ. ಪರಿಸ್ಥಿತಿ ಹೀಗಿದ್ದರೂ ಸಹ ಆ ವ್ಯಕ್ತಿಗಳು ಮತ್ತು ಬಸವೇಶ್ವರ ಸಂಘದವರು ಪ್ರಭಾವ ಬೀರಿ ಬೆಳಗಾಂ ಜಿಲ್ಲೆಯ ಕಲೆಕ್ಟರಿಗೆ ತಪ್ಪುಕಲ್ಪನೆಮಾಡಿ, ತಾವು ಮಾಡಿದ ತಪ್ಪನ್ನು ಮುಚ್ಚಿಕೊಂಡು, ವಿದ್ಯಾರ್ಥಿಗಳು ಆಡಳಿತವರ್ಗದವರ ವಿರುದ್ಧ ಮೂವ್‌ಮೆಂಟ್ ನಡೆಸಿದ್ದಾರೆ, ಅವರನ್ನು ಸದೆಬಡಿಯಬೇಕೆಂದು ತಿಳಿಸಿ ಡಿ.ಎಸ್.ಪಿ. ಮತ್ತು ಪೋಲೀಸ್ ವ್ಯಾನ್ ತೆಗೆದುಕೊಂಡು ವಿದ್ಯಾರ್ಥಿಗಳ ಮೇಲೆ ದಬ್ಬಾಳಿಕೆ ಮತ್ತು ದೌರ್ಜನ್ಯ ನಡೆಸುವಂಥ ಪರಿಸ್ಥಿತಿ ಬಂತು. ಅಲ್ಲಿ ಜನರು ಬ್ರಿಟಿಷರ ಆಳ್ವಿಕೆಯನ್ನು ಎದುರಿಸಿದವರು. ಅಂತಹ ರಾಮದುರ್ಗದ ಬಾಲಕರ ಮೇಲೆ ನಿಮ್ಮ ಬೇಡಿಕೆಗೆ ಮನ್ನಣೆ ಕೊಡುವುದಿಲ್ಲ ಎಂದು ಹೇಳಿ ದೌರ್ಜನ್ಯ ನಡೆಸಲು ಬಂದಾಗ ಡಿ. ಎಸ್.ಪಿ.ಯವರಿಗೆ ಸಮಾಧಾನ ಕೊಟ್ಟು, ಅವರ ಬೇಡಿಕೆಯನ್ನು ಮನ್ನಣೆ ಮಾಡಿದ್ದೇ ಆದರೆ ಆಗಿಂದಾಗಲೇ ಶಾಲೆಗೆ ಬರಲು ಸಿದ್ಧವಾಗಿದ್ದೇವೆ ಎಂದು ವಿದ್ಯಾರ್ಥಿಗಳು ಹೇಳಿದರು. ಬಾಗಲಕೋಟೆ ಆಡಳಿತಗಾರರು ವಾಪಸು ಹೋಗಿ ಆ ಇಬ್ಬರು ಟೀಚರ್ಸ್‌ನ್ನು ಬೇರೆ ಕಡೆಗೆ ವರ್ಗಮಾಡಿದರು. ಮೊದಲಿದ್ದವರನ್ನೇ ರಾಮದುರ್ಗಕ್ಕೆ ಕಳುಹಿಸಿದರು. ಇನ್ನೊಬ್ಬರು ಟೀಚರನ್ನು ಸಕಾರಣವಿಲ್ಲದೇ ಬರ್‌ತರ್ಫ್ ಮಾಡಿದರು. ಇಂತಹ ದೌರ್ಜನ್ಯದ ಆಡಳಿತವನ್ನು ರಾಮದುರ್ಗದ ವಿದಾರ್ಥಿಗಳು ಸಹಿಸುವುದಕ್ಕೆ ಸಾಧ್ಯವಿಲ್ಲ ಎಂದು ಈ ಸಮಯದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನಿಮ್ಮ ಸರ್ಕಾರದ ಪಾಲಿಸಿ ಇವತ್ತು ಏನಿದೆ? ಬೆಳಗಾಂ ಜಿಲ್ಲೆಯ ಆಡಳಿತದಲ್ಲಿ ಈ ರೀತಿ ಆಗಿದೆ. ಹೈದರಾಬಾದಿನ ಆಡಳಿತ ಮೊಗಲಾಯರ ಜಬರ್‌ದಸ್ತಿನಂತೆ ನಡೆದಿದೆ. ಯಾರದೋ ತಪ್ಪಿಗೆ ಯಾರಿಗೋ ಶಿಕ್ಷೆ ಮಾಡಬೇಡಿ, ತಪ್ಪುಮಾಡಿದವರಿಗೆ ಶಿಕ್ಷೆ ಮಾಡಿ. ಅಶಾಂತಿ ಮೂಡಿ ಜನತೆಗೆ ವಿರೋಧವಾಗಿ ನಡೆದರೆ ನಿಮ್ಮ ಪಾಲಿಸಿ ಏನಾಗುತ್ತದೆ? ನಿಮ್ಮ ಪಾಲಿಸಿ ಯಾವಾಗಲೂ ಜನತೆಗೆ ಅಂಜಿಕೊಂಡು ಹೋಗಬೇಕು, ಜನತೆಯ ಸುಖದುಃಖ ಅರಿತು ಜನರಿಗೆ ಬೇಕಾದ ಸೌಲಭ್ಯ ಒದಗಿಸಿ ಕೊಡಿರಿ. ಪರಮಾತ್ಮ

4 P.M.

ಭಸ್ಮಾಸುರನಿಗೆ ಅವತಾರ ಕೊಟ್ಟ. ಭಸ್ಮಾಸುರ ಅವತಾರ ತೆಗೆದುಕೊಂಡನಂತರ ತಿರುಗಿಬಿದ್ದ. ಮೋಹಿನಿ ಹುಟ್ಟಿದಳು. ಅದೇ ಪ್ರಕಾರ ಪರಿಸ್ಥಿತಿಯಾಗುತ್ತದೆ. ಜನತೆ ಆರಿಸುವಂಥ ಮಂತ್ರಿಗಳು ಜನತೆಯ ಕಷ್ಟಸುಖಗಳನ್ನು ವಿಚಾರಮಾಡಿ, ತಿಳಿದುಕೊಂಡು, ಜನತೆಯ ಇಚ್ಛೆಯ ಪ್ರಕಾರ ನಡೆದುಕೊಳ್ಳಬೇಕು. ಹಾಗೆ ಜನರು ಹೇಳಿದ ಹಾಗೆ ನಡೆದುಕೊಳ್ಳದೆಹೋದರೆ, ಮತ್ತೆ ಮೋಹಿನಿಯು

(ಶ್ರೀ ಎಂ. ಎಸ್. ಪಟ್ಟಣ್)

ಹುಟ್ಟಿ ಅನರ್ಥವಾಗುತ್ತದೆ. ನಮ್ಮ ಮಂತ್ರಿಗಳೂ ಹುಮ್ಮಸ್ಸಿನಿಂದ ಕಾರ್ಯಮಾಡಿ, ನಮ್ಮ ಹೈಸ್ಕೂಲನ್ನು ಅದಲು ಬದಲು ಮಾಡಿ, ಜನತೆಯ ಇಚ್ಛೆಯ ಪ್ರಕಾರ ನಡೆದುಕೊಂಡು ಬರುವರೆಂದು ನನ್ನ ಸಂಪೂರ್ಣ ಆಸೆ ಇದೆ. 1952ರೊಳಗೇ ಮುನಿಸಿಪಾಲಿಟಿಯವರು ಠರಾವುಮಾಡಿ ಕಳುಹಿಸಿದ್ದಾರೆ. ಎಲ್ಲಾ ಮೆಂಬರುಗಳೂ ಇದನ್ನು ಸ್ವಲ್ಪ ಲಕ್ಷ್ಯಕೊಟ್ಟು ಕೇಳಿರಿ. 1952ರೊಳಗೇ ನಮ್ಮ ಮುನಿಸಿಪಾಲಿಟಿಯವರು ಹೈಸ್ಕೂಲು ಆಡಳಿತವನ್ನು ನಡೆಸುತ್ತೇವೆ, ಹೈಸ್ಕೂಲನ್ನು ಅವರ ಸ್ವಾಧೀನಕ್ಕೆ ಕೊಡಬೇಕೆಂದು, ಯುನಾನಿಮುಸ್ಸಾಗಿ ಬರೆದು ಠರಾವು ಮಾಡಿ ಕಳುಹಿಸಿದರು. ಅದಕ್ಕೆ ಒಂದು ಉತ್ತರವಿಲ್ಲ. ಅದಕ್ಕೆ ಸಂಬಂಧಪಟ್ಟ ಹಿಂದಿನ ಫೈಲು ಏನಾಯಿತೋ ಪತ್ತೆ ಇಲ್ಲ. 1958ರಲ್ಲಿ ಹೊಸ ಮುನಿಸಿಪಾಟಿಯೂ ಒಮ್ಮತದಿಂದ ಠರಾವನ್ನು ಪಾಸುಮಾಡಿ ಕಳುಹಿಸಿದ್ದಾಯಿತು. ನಾವು ನಮ್ಮ ಹೆಣ್ಣುಮಕ್ಕಳ ಆಸ್ತಿಗಳನ್ನು ಗೊತ್ತಿಗೆ ಹಚ್ಚಿ ಭೂಮಿಗಳನ್ನು ಮಾರಾಟಮಾಡಿ, ಇವರ ಬೆನ್ನು ಹತ್ತಿ, ಮೋಟಾರು ರೈಲುಗಳಿಗೆ ರೊಕ್ಕಕೊಟ್ಟು, ನಮಗೆ ಅನ್ಯಾಯ ಮಾಡುತ್ತಿದ್ದೀರಿ ಎಂದು ಹೇಳಿ ಕೆಲಸ ಮಾಡುವವರು ನಾವು, ಯಾರೋ ಬಂದು ವಶೀಲಬಾಜಿಯಿಂದ ಕಮಿಟಿಯಲ್ಲಿ ಸೇರಿಕೊಂಡು, ಸಾವಿರಗಟ್ಟಲೆ ಸಂಬಳ ಹೊಡೆದುಕೊಂಡು, ಆಡಳಿತ ಕೈಯಲ್ಲಿ ಹಿಡಿದುಕೊಂಡು, ದೌರ್ಜನ್ಯ ಮಾಡುತ್ತೇವೆಂದರೆ, ಹಿಂದಿನ ರಾಜರ ದೌರ್ಜನ್ಯವನ್ನು ಯಾವರೀತಿ ಎದುರಿಸಿದೆವೊ ಅದೇ ಪ್ರಕಾರದಲ್ಲಿ ಎದುರಿಸುವ ಪರಿಸ್ಥಿತಿಯನ್ನು ಮಾನ್ಯ ಮಂತ್ರಿಗಳು ತಂದುಕೊಳ್ಳಬಾರದು. ಜನತೆಯ ಅಂತಃಕರಣವನ್ನು ನೋಡಿ, ಅವರಿಗೆ ನೆರವು ನೀಡಿ. ಯಾರೋ ಒಬ್ಬರು ನಾಲ್ಕು ಮಂದಿ ಜನತೆಗೆ ಬೇಡದವರಿಂದ, ಮುನಿಸಿಪಾಲಿಟಿಯವರ ಕೈಯಲ್ಲಿ ಹೈಸ್ಕೂಲನ್ನು ನಡೆಸಲಿಕ್ಕೆ ಆಗಲಾರದು ಎಂದು ಅರ್ಜಿಗಳನ್ನು ತೆಗೆದುಕೊಂಡು ಬಂದರೆ ಅದೇ ನೆಪದಿಂದ, ಆಗುವುದಿಲ್ಲ ಎಂದರೆ ಅದು ಸರಿಯಲ್ಲ. ಮೊನ್ನೆ 1956ರ ಚುನಾವಣೆಯಲ್ಲಿ ಜನತೆಯ ಪ್ರತಿನಿಧಿಯಾಗಿ ಬಂದ ಎಂ. ಎಲ್. ಎ. ನಾನು ಹೇಳುತ್ತಿದ್ದೇನೆ. ರಾಮದುರ್ಗ ಹೈಸ್ಕೂಲನ್ನು ನಮ್ಮ ಕಡೆಗೆ ಸ್ವಾಧೀನಕೊಡಿರಿ; ರಾಮದುರ್ಗದ ಹೈಸ್ಕೂಲು ಇಡೀ ಕರ್ಣಾಟಕದಲ್ಲಿಯೇ ಅತ್ಯಂತ ಶ್ರೇಷ್ಠವಾದ ಹೈಸ್ಕೂಲು ಎಂದು ಸರ್ಟಿಫಿಕೇಟ್ ತೆಗೆದುಕೊಳ್ಳುತ್ತೇವೆ. ಒಂದು ವರ್ಷ ನಮ್ಮ ಕೈಲಿಕೊಟ್ಟು ನೋಡಿ ಎಂದು ನಾವು ಹೇಳುತ್ತಿದ್ದೇವೆ. 1958ರಲ್ಲಿ ರಾಮದುರ್ಗ ಮುನಿಸಿಪಾಲಟಿಗೆ ಚುನಾವಣೆ ನಡೆಯಿತು. ವಿರೋಧಿಗಳು ಬೇಕಾದಷ್ಟು ಪ್ರತಿಬಂಧಕ ಮಾಡಿದರು. ಹತ್ತು ಸಾವಿರಗಟ್ಲೆ ಚುನಾವಣೆಯಲ್ಲಿ ಖರ್ಚು ಮಾಡಿದರೂ ಸಹ ಅವರು ಜಯವಾಗದೆ, ಇವತ್ತಿನ ದಿವಸ ನಾವು 9–10 ಸೀಟುಗಳಷ್ಟು ಹೆಚ್ಚಾಗಿ ಆರಿಸಿ ಬಂದಿದ್ದರೂ ಕೂಡ, ನಮ್ಮ ಕೈಯಲ್ಲಿ ಹೈಸ್ಕೂಲು ಆಡಳಿತ ಕೊಡುವುದಕ್ಕಾಗುವುದಿಲ್ಲ ಎಂದರೆ ಸರಿಯೇ?

ರಾಮದುರ್ಗ ಮುನಿಸಿಪಾಲಟಿಯ ಆಡಳಿತದ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳುತ್ತೇನೆ. ಆ ಮುನಿಸಿಪಾಲಟಿಗೆ ಹೈಸ್ಕೂಲು ನಡೆಸಿಕೊಂಡು ಹೋಗುವುದಕ್ಕೆ ಯೋಗ್ಯತೆ ಇದೆಯೋ ಇಲ್ಲವೋ ನೋಡಿ. ತೊಂಭತ್ತು ಸಾವಿರ ರೂಪಾಯಿಗಳನ್ನು ಜನರಿಂದ ಕೂಡಿಸಿ, ನಾವೂ ಗ್ರ್ಯಾಂಟ್ ಕೊಟ್ಟು, ಹೆರಿಗೆ ಆಸ್ಪತ್ರೆ ಕಟ್ಟಿಸಿದ್ದೇವೆ. ಮೂವತ್ತು ಸಾವಿರ ರೂಪಾಯಿ ರೊಕ್ಕ ಖರ್ಚು ಮಾಡಿ ಸಿಮೆಂಟ್ ರಸ್ತೆ ಮಾಡಿದ್ದೇವೆ. ನೀರು ಟ್ಯಾಂಕು ಕಟ್ಟಿ, ನೀರು ಸಪ್ಲೈ ಮಾಡುವ ಯೋಜನೆ ಇದೆ. ಇವತ್ತು ಒಬ್ಬ ಕಕ್ಕಸ್ ಬಾಜುವನಿಂದ ಹಿಡಿದು ಸೆಕ್ರೆಟೆರಿತನಕ ಯಾವ ನೌಕರನದೂ ಒಂದು ದಮ್ಮಡಿ ಸಂಬಳ ಆ ಮುನಿಸಿಪಾಲಟಿ ನಿಲ್ಲಿಸಿಲ್ಲ.

ಅಂಥ ಮುನಿಸಿಪಾಲಟಿ ಒಮ್ಮತದಿಂದ ಠರಾವು ಮಾಡಿ ಕೆಳಗಿನ ಇನ್‌ಸ್ಪೆಕ್ಟರಿಗೆ ಅರ್ಜಿ ಹಾಕಿದರೆ, ಬೆಳಗಾಮಿಗೆ ಹೋಗಿದೆ ಎನ್ನುತ್ತಾರೆ. ಒಬ್ಬ ಎಂ.ಎಲ್.ಎ. 100-150 ರೂಪಾಯಿ ಖರ್ಚು ಮಾಡಿ ಬೆಳಗಾಮಿಗೆ ಹೋಗಿ ಅಡ್ಡಾಡಿದಮೇಲೆ, ಅದು ಧಾರವಾಡಕ್ಕೆ ಬಂದು ಬಿತ್ತು. ಧಾರವಾಡಕ್ಕೆ ಬಂದು ಬಿದ್ದಮೇಲೆ ನಾಲ್ಕೈದು ದಫ ಹೋಗಿದ್ದೇನೆ; ಅಧಿಕಾರಿಗಳಿಗೆ ವಶೀಲಬಾಜಿ ಹಚ್ಚಿ 100 ದಫ ಅಡ್ಡಾಡಿದ್ದೇನೆ. ಅಲ್ಲಿ ಕೇಳಿದರೆ ಎಜುಕೇಷನ್ ಡಿಪಾರ್ಟ್‌ಮೆಂಟಿಗೆ ಅರ್ಜಿ ಕಳುಹಿಸಿದ್ದೇವೆಂದು ಹೇಳುತ್ತಿದ್ದರು. ಇಲ್ಲಿ ಬಂದು ಕೇಳಿದರೆ ಬಂದಿಲ್ಲ, ನಮಗೆ ಇವತ್ತು ಬರುತ್ತದೆ, ನಾಳೆ ಬರುತ್ತದೆ ಎಂದು ಹೇಳುತ್ತಿದ್ದರು. ಇಷ್ಟೆಲ್ಲಾ ನಡೆದಮೇಲೆ ನಾನು ಸರ್ಕಾರಕ್ಕೆ ಮತ್ತು ಮಂತ್ರಿಗಳಿಗೆ ಒತ್ತಾಯಮಾಡಿ ಹೇಳುವುದೇನೆಂದರೆ: ಯಾವ ಪ್ರಕಾರ ಬ್ರಿಟಿಷರು ಅವರ ಕೂಡ ಹೋರಾಟ ಮಾಡುವ ಪರಿಸ್ಥಿತಿ ತಂದರೋ, ಯಾವ ಪ್ರಕಾರ ಸಂಸ್ಥಾನಿಕರು ದೌರ್ಜನ್ಯ ಮಾಡುವ ಪರಿಸ್ಥಿತಿ ತಂದರೋ, ಅದೇ ಪ್ರಕಾರ ಕಾಂಗ್ರೆಸ್ ಸರ್ಕಾರ ದೌರ್ಜನ್ಯದಿಂದ ಹೋರಾಡುವ ಪರಿಸ್ಥಿತಿ ತರಬೇಡಿ. ನೀವು ದಯಮಾಡಿ ನಮ್ಮ ಕ್ಲೇಮನ್ನು ಸರಿಯಾಗಿ ಕೊಡಿರಿ. ನಮ್ಮ ಮಂತ್ರಿಗಳಿಗೆ ಇದನ್ನು ದೇಶದ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ. ಅತ್ಯಂತ ಗೌರವದಿಂದ ಸ್ವಾಗತ ಮಾಡುತ್ತೇನೆ—ಲೋಕಲ್ ಕಮಿಟಿ ಮಾಡಿ, ಅದನ್ನು ಜನತೆಯಿಂದ ಮಾಡುವುದು ಉತ್ತಮವೆಂದು ಹೇಳುತ್ತೇನೆ. ಮತ್ತೆ ಅತ್ತ ಇತ್ತ ದಾರಿ ತೋರಿಸದೆ, ಇನ್ನೊಂದು ಬೇರೆ ಪಾಲಿಸಿ ಹಿಡಿಯಬೇಡಿರಿ; ಹೈಸ್ಕೂಲನ್ನು ನಮ್ಮ ಮುನಿಸಿಪಾಲಟಿಗೆ ಕೊಡಿರಿ. ಇವತ್ತು ನೀವು ಈ ಪ್ರಶ್ನೆಯನ್ನು ಸುಮ್ಮನೆ ಪರಿಹರಿಸಿದರೆ ನೆಟ್ಟಗಾಗುತ್ತದೆ. ಇಲ್ಲವಾದರೆ ನಮ್ಮಂಥವರು ಮುಂದಿನ ಅಸೆಂಬ್ಲಿ ಅಧಿವೇಶನಕ್ಕೆ ಬರುವುದಿಲ್ಲ, ಎಷ್ಟೋ ಮಂದಿ ಜೈಲಿನಲ್ಲಿ ಇರುವ ಪರಿಸ್ಥಿತಿ ಇದೆ.

ಏನೇನೋ ಪರಿಸ್ಥಿತಿಗೊಳಗಾಗಿ, ಧಾರವಾಡದಿಂದ ಕಾಗದ ಎಜುಕೇಷನ್ ಡಿಪಾರ್ಟ್‌ಮೆಂಟಿಗೆ ಬಂದಿದೆ. ಮಂತ್ರಿಗಳು ಹೇಳಿದರು ಇದೇನು ದೊಡ್ಡ ಮಾತು ಎಂದು. ಮುಂದಿನ ಪ್ರಕರಣ ಕೇಳಿ. ಧಾರವಾಡದಿಂದ ಕಳುಹಿಸಿ, ಇಲ್ಲಿಗೆ ಬಂದಿತು. ಅದು ಕಲೆಕ್ಟರ ಕಡೆಯಿಂದ ಬರಬೇಕೆಂದು ಹೇಳಿ, ಡಿ.ಪಿ.ಐ. ರವರು ಅವರಿಗೆ ಕಳುಹಿಸಿಕೊಟ್ಟರು. ಮತ್ತೆ ಬೆಳಗಾಮಿಗೆ ಓಡಿಹೋದೆವು. ಕಲೆಕ್ಟರಿಗೆ ಇದ್ದ ವಿಚಾರ ಹೇಳಿದೆವು. ಕಲೆಕ್ಟರ್‌ರವರು ರಾಮದುರ್ಗ ಮುನಿಸಿಪಾಲಟಿ ಹೇಗೆ ನಡೆದಿದೆ ಎಂದು ವಿಚಾರ ಎಂಕ್ವೈರಿ ಮಾಡಿಕೊಂಡು ಹೋಗಿ, ಅದು ಸುವ್ಯವಸ್ಥಿತ ರೀತಿಯಿಂದ ನಡೆದಿದೆ ಎಂದು ಸರ್ಟಿಫಿಕೇಟ್ ಕೊಟ್ಟಿದ್ದಾರೆ; ಮತ್ತು ಶಿಫಾರಸು ಮಾಡಿ ಕಳುಹಿಸಿದ್ದಾರೆ. ಮತ್ತೆ ಇಲ್ಲಿಗೆ ಬಂದು ಡಿ.ಪಿ.ಐ. ಕಡೆ ಭೇಟಿ ಆದೆ. ಆದರೆ ಅವರು ಕಮಿಷನರ ಕಡೆ ಹೋಗಿದೆ ಎಂದರು. ಕಮಿಷನರು ಶಿಫಾರಸು ಮಾಡಿ ಕಳುಹಿಸಿದರು. ಡಿ.ಪಿ.ಐ. ಯಾರ ಒತ್ತಾಯಕ್ಕಾಗಿ ಹೀಗೆ ಮಾಡಲಿಕ್ಕೆ ಹತ್ತಿದ್ದಾರೋ ಏನೋ. ಅವರು ಏನು ಬರೆದು ಕಳುಹಿಸಿದ್ದಾರೆನ್ನುವುದು ಕೂಡ ಗೊತ್ತಿದೆ; ಅದನ್ನು ಹೇಳುವುದಕ್ಕೆ ತಯಾರಿಲ್ಲ; ಮತ್ತೆ ಮಂತ್ರಿಗಳಿಗೆ ಯಾರಾದರೂ ಬಾಗಲ್‌ಕೋಟೆ ಅಧಿಕಾರಿಗಳು ಅಥವಾ ಆಡಳಿತ ವರ್ಗದವರು ಅವರು

ನಡೆಸುತ್ತೀವೆಂದು ಒತ್ತಾಯ ಮಾಡಿದರೆ, ಅವರನ್ನು ಯಾವ ಕಾರಣದಿಂದ ನಡೆಸುತ್ತೀರಿ ಎಂದು ಯೋಗ್ಯ ವಿಚಾರ ಮಾಡಿ. ಯಾರು ನಿಮಗೆ ಗಂಟು ಬಿದ್ದಿದ್ದಾರೋ ಅವರನ್ನು ಕುರ್ಚಿಯಲ್ಲಿ ಕುಳ್ಳಿರಿಸಿಕೊಳ್ಳಿ, ನಮ್ಮನ್ನು ಅವರ ಮುಂದೆ ಕುಳ್ಳಿರಿಸಿಕೊಳ್ಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ (ಮರಾಮತ್ ಮತ್ತು ವಿದ್ಯುಚ್ಛಕ್ತಿ ಶಾಖೆಯ ಮಂತ್ರಿಗಳು).—ನಿಮಗೆ ಏನು ತೊಂದರೆ ಇದೆ?

ಶ್ರೀ ಎಂ. ಎಸ್. ಪಟ್ಟಣ್.— ಬಹಳ ತೊಂದರೆ ಇದೆ.

ಶ್ರೀ ಜೆ.ಬಿ. ಮಲ್ಲಾರಾಧ್ಯ (ನಂಜನಗೂಡು).-ಸಾಂಡೂರು ಹೈಸ್ಕೂಲನ್ನು ಅಷ್ಟು ಸುಲಭವಾಗಿ ಕೊಟ್ಟಿದ್ದೀರಿ. On the same ground, why don't you give the School to the Municipality ?

Sri H. M. CHANNABASAPPA.—Let me understand his difficulties.

ಶ್ರೀ ಎಂ. ಎಸ್. ಪಟ್ಟಣ್.—ನಾನು ಬಿ.ಎ., ಎಲ್ಎಲ್.ಬಿ. ಓದಿ ಇಲ್ಲಿ ಮಾತನಾಡುತ್ತಿಲ್ಲ. ದೇವರು ಬುದ್ಧಿ ಕೊಟ್ಟಿರುವುದರಲ್ಲಿ ಮಾತನಾಡುತ್ತಿದ್ದೇನೆ. ಮಾತನಾಡುವವರಿಗೆ ಸ್ಥಾನ ಕೊಟ್ಟಿದ್ದರೆ, ಅಸೆಂಬ್ಲಿ ಹೀಗೆ ಇರುತ್ತಿರಲಿಲ್ಲ; ಇಂಥವರಿಗೆ ಸ್ಥಾನ ಕೊಟ್ಟಿದ್ದರೆ ಬೇರೆ ರೀತಿ ನಡೆಯುತ್ತಿತ್ತು; ಪ್ರಜಾಪ್ರಭುತ್ವ ಕಾನೂನು ಪ್ರಕಾರ ನಡೆಯುತ್ತಿತ್ತು. ಸುಶಿಕ್ಷಿತ ಮಂದಿಗೆ ಸರಿಯಾದ ರೀತಿಯಲ್ಲಿ ಅಸೆಂಬ್ಲಿಯಲ್ಲಿ ನಡೆದುಕೊಂಡು ಹೋಗುವುದಕ್ಕೆ ಸ್ಥಾನವಿಲ್ಲ. ಯಾವ ಜನರು ಗಟ್ಟಿಮುಟ್ಟಾಗಿರುವ, ದಕ್ಷತೆಯಿಂದ ಕೆಲಸ ಮಾಡುವ ಕಾರ್ಯಕರ್ತರನ್ನು ಆರಿಸಿ ಅಸೆಂಬ್ಲಿಗೆ ಕಳುಹಿಸಿದ್ದಾರೋ, ಅಂಥವರು ಇವತ್ತಿನ ದಿವಸ ನಿಮ್ಮ ಮುಂದೆ ಈ ಅಸೆಂಬ್ಲಿ ಮುಂದೆ ಜನತೆಯ ಬೇಡಿಕೆ ಇಡಿ ಎಂದು ನಮ್ಮನ್ನು ಕಳುಹಿಸಿದ್ದಾರೆ. ಸಾಂಡೂರು ಮಹಾರಾಜರು ಇಂಗ್ಲೆಂಡಿಗೆ ಹೋಗಿ ಬಂದಿದ್ದಾರೆಂದು ಎಂಟು ದಿವಸದೊಳಗೆ ಆರ್ಡರ್ ಮಾಡಿದಿರಿ. ಸಾಂಡೂರು ಮಾಜಿ ರಾಜರು, ಮಾಜಿ ಯುವರಾಜರು, ಅವರ ಹೆಂಡಿರು, ಇನ್ನೂ ಮತ್ತೊಬ್ಬರು, ಎಲ್ಲಾ ರೊಕ್ಕ ಇದ್ದವರು ಸಾಂಡೂರು ಲೋಕಲ್ ಎಜುಕೇಷನ್ ಕಮಿಟಿಯ ಮೆಂಬರು. ರಾಮದುರ್ಗದ ಪ್ರಶ್ನೆ ಬೇರೆ. ಎಲ್ಲಾ ಕಡೆಯೂ ಅಂಥ ಶ್ರೀಮಂತರೇ ಇರುತ್ತಾರೆಯೇ? ನಮ್ಮ ರಾಮದುರ್ಗ ತಾಲ್ಲೂಕಿನೊಳಗೆ ಹೆಚ್ಚಾದ ಶ್ರೀಮಂತರೆಂದರೆ, 20 ಸಾವಿರ ರೂಪಾಯಿ ಇದ್ದರೆ, 20 ಲಕ್ಷ ರೂಪಾಯಿ ಇದ್ದ ಹಾಗೆ. ಇಂಥ ಪರಿಸ್ಥಿತಿಯಲ್ಲಿ ನಾವು ಕೆಲಸ ಮಾಡುತ್ತೇವೆ. ಒಂದು ಹಾಸ್ಟೆಲ್ ನಡೆಸುತ್ತಾ ಇದ್ದೇವೆ. ಹಾಸ್ಟೆಲಗೆ ಸೇರಿಸಿಕೊಳ್ಳುವುದಕ್ಕೆ ಇಂಥ ಜಾತಿಯವರೆಂದು ಅನ್ನುವುದಿಲ್ಲ. ಶ್ರೀಮಂತರಿಗೆ ಕೈಮುಗಿದು ಒಂದೂ ಮಾಡಿಲ್ಲ. 40 ವಿದ್ಯಾರ್ಥಿಗಳಿಗೆ ಊಟ ಹಾಕುತ್ತಾ ಇದ್ದೇವೆ. ಹೈಸ್ಕೂಲನ್ನು ಮುನಿಸಿಪಾಲಟಿಗೇ ಕೊಡಿರಿ. ಹಾಸ್ಟಲನ್ನು ನಡೆಸಿದ ಹಾಗೆಯೇ ರಾಮದುರ್ಗ ಜನರು ನಡೆಸುತ್ತಾರೆ. ಪಂಚಾಯಿತಿಯೇ ದೇಶದ ರಾಜ್ಯಭಾರವನ್ನು ನಡೆಸುವುದು. ಗಾಂಧಿಜಿ ಹೇಳುತ್ತಿದ್ದಂತೆ, ಪಂಚಾಯಿತಿಯಿಂದಲೇ ಇಡೀ ರಾಜ್ಯ ನಡೆಯಬೇಕಾಗಿದೆ. ಬಾಗಲಕೋಟೆ ಎನ್ನುವುದು ರಾಮದುರ್ಗಕ್ಕೆ ಸಂಬಂಧಿಸಿದ್ದಲ್ಲ. ಅವರು ನಡೆಸಿದರೆ ಏನಾಗುತ್ತದೆ ಎಂದು ಚನ್ನಬಸಪ್ಪನವರು ಕೇಳಿದರು. ನಮ್ಮನ್ನು ಕೈಬಿಟ್ಟರೆ ಇವರ ಗಂಟು ಏನು ಹೋಗುತ್ತದೆ ಎಂದು ಕೇಳುತ್ತೇನೆ. ಇದು ಹೊಡೆದು ಹೇಳುವ ಮಾತು ಅಲ್ಲ, ಆದರೆ ಯಾರು ನೋಡಿದ್ದಾರೆ? ಅನೇಕ ಸ್ಕೂಲುಗಳಲ್ಲಿ 150 ರೂಪಾಯಿ ಸಂಬಳ ತೆಗೆದುಕೊಂಡು 220 ರೂಪಾಯಿಗಳ ಸಂಬಳ ಕೊಟ್ಟಿದ್ದೇವೆಂದು ಸೈನ್ ತೆಗೆದುಕೊಳ್ಳುತ್ತಾರೆ. ಹೀಗಿರುವಾಗ ಹೈಸ್ಕೂಲಿನವರು ಆ ರೀತಿ ತೆಗೆದುಕೊಳ್ಳುವುದಕ್ಕೆ ಏನು ಹೇಳುತ್ತೀರಿ? ಅವರು ಮನಃಪೂರ್ವಕವಾಗಿ, ಗೌರವಪೂರ್ವಕವಾಗಿ ಸರ್ಕಾರದವರನ್ನು ಕಾಣುತ್ತಿದ್ದಾರೆಯೇ? ಮಂತ್ರಿಗಳಿಗೆ ಅಂತಃಕರಣ ಬುದ್ಧಿ ಇದ್ದರೆ ಯಾರ ದಾಕ್ಷಿಣ್ಯಕ್ಕೂ ಒಳಗಾಗುವುದಿಲ್ಲ. ಇವತ್ತು ನಾವು ಒಂದು ರಾಜ್ಯದೊಡನೆ ಹೋರಾಡಿದರೆ, ಇಡೀ ಹಿಂದೂಸ್ಥಾನ ಅಲ್ಲಿನ ಬಲಾಢ್ಯ ರಾಜ್ಯಗಳೊಡನೆ ಹೋರಾಡಿ, ಅಲ್ಲಿ ಕೆಲಸಮಾಡಿದಂಥ ನಮ್ಮ ಹಿರಿಯರಿಂದ ಈ ಸ್ವತಂತ್ರ ರಾಜ್ಯವನ್ನು ಕಟ್ಟಿದೆ. ಇವತ್ತು ಅಲ್ಲಿನ ಆಡಳಿತಗಾರರು ಯಾರಾದರೂ ಬಂದು ಆ ರೀತಿ ಹೇಳಿದ್ದಾರೆಯೇ? ಎಂ.ಎಲ್.ಎ. ಮತ್ತು ಎಂ.ಎಲ್.ಸಿ. ಆಗಿ ತಿಂಗಳಿಗೆ 500-1,000 ರೂಪಾಯಿಗಳ ವರಮಾನ ಪಡೆದುಕೊಂಡು ಲೋಲರಾಗಿ ಬಂದು ಇಲ್ಲಿ ನಾವು ಕುಳಿತಿರುವವರಾಗಿದ್ದೇವೆಯೇ ಹೊರತು ದೇಶಕ್ಕೋಸ್ಕರ ರಕ್ತ ಸುರಿಸಿದ್ದವರು ಯಾರೂ ಬಂದಿಲ್ಲ. ಇವತ್ತು ಏನಿಲ್ಲ, ಡಿ.ಪಿ.ಐ. ರಾಮದುರ್ಗಕ್ಕೆ ಟೂರ್ ಪ್ರೋಗ್ರಾಂ ಹಾಕಿಕೊಂಡು ಬಂದರೆ, ಮಂತ್ರಿಗಳು ಮಾಯವಾಗಬೇಕು. ಆದ್ದರಿಂದ ಅದಕ್ಕೆ ಬೆಲೆ ಕೊಟ್ಟು ಸರಿಯಾದ ರೀತಿಯಿಂದ ನಿರ್ಣಯವಾಗಬೇಕು. ರಾಮದುರ್ಗಕ್ಕೆ ಒಂದು ಮುನಿಸಿಪಲ್ ಹೈಸ್ಕೂಲನ್ನು ಒದಗಿಸಿಕೊಟ್ಟರೆ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವನ್ನು ಗಳಿಸಿದುದಕ್ಕಿಂತಲೂ ಹೆಚ್ಚಿನ ಒಂದು ದೊಡ್ಡ ಉಪಕಾರವನ್ನು ನಮಗೆ ಮಾಡಿದಂತಾಗುತ್ತದೆ ಎಂದು ಸರ್ಕಾರದವರಿಗೆ ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀಮತಿ ರುಕ್ಮಿಣಿಯಮ್ಮ (ಹೊಸಕೋಟೆ).—ಸ್ವಾಮಿ, ಈ ದಿವಸ ನಮ್ಮ ಈ ಮಹಾಸಭೆಯ ಮುಂದಿರುವ ಶಿಕ್ಷಣ ಇಲಾಖಾ ಬೇಡಿಕೆಗೆ ನನ್ನ ಒಪ್ಪಿಗೆ ನೀಡುತ್ತಾ ನಾಲ್ಕಾರು ವಿಷಯಗಳನ್ನು ಪ್ರಸ್ತಾಪ ಮಾಡಲು ಇಚ್ಛೆ ಪಡುತ್ತೇನೆ. ವಿದ್ಯಾಭ್ಯಾಸ ಇಲಾಖೆಗೆ ಇಬ್ಬರು ಡೈರೆಕ್ಟರುಗಳಿರಬೇಕು ಎಂದು ಮಾನ್ಯ ಸದಸ್ಯರು ಸಲಹೆ ಮಾಡಿದ್ದಾರೆ. ಅದು ಬಹಳ ಉತ್ತಮವಾದ ಸಲಹೆ. ಅದನ್ನಂತೂ ಕೂಡಲೆ ಜಾರಿಗೆ ತರಬೇಕು. ಸರ್ಕಾರದವರು ಅನ್ಯಥಾ ಭಾವಿಸದಿದ್ದರೆ ಈ ಸಂಬಂಧದಲ್ಲಿ ಮತ್ತೊಬ್ಬ ಡೈರೆಕ್ಟರು ಮಹಿಳೆಯಾಗಿರಬೇಕೆಂಬುದು ನನ್ನ ಸಲಹೆ.

ವಿದ್ಯಾಭ್ಯಾಸದ ವಿಚಾರದಲ್ಲಿ ನಮಗೆ ಸ್ವಾತಂತ್ರ್ಯ ಬಂದಲಾಗಾಯ್ತು ನಾಲ್ಕಾರು ಮಾರ್ಪಾಟುಗಳನ್ನು ಮಾಡಲು ಯತ್ನಿಸಿದ್ದೇವೆ. ಒಂದೂ ಸರಿಯಾಗಿ ಕಾರ್ಯಗತವಾಗಿಲ್ಲ. ಇದರಿಂದ ವಿದ್ಯಾರ್ಥಿಗಳಿಗೂ ಬೋಧಕರಿಗೂ ಅನೇಕ ಆತಂಕಗಳುಂಟಾಗಿವೆ. ಇದನ್ನು ಬೇಗನೆ ನಿವಾರಿಸದಿದ್ದರೆ ನಮ್ಮ ದೇಶದಲ್ಲಿ ಮುಂದುವರಿದವರು ವಿದ್ಯಾಭ್ಯಾಸದಲ್ಲಿ ಮುಂದುವರಿಯುತ್ತಲೇ ಇರುತ್ತಾ ಹಿಂದುಳಿದವರು ಹಿಂದೆ ಹಿಂದಕ್ಕೇ ಹೋಗಿಬಿಡುತ್ತಾರೆ. ಇದರಿಂದ ಒಂದು ಕೆಟ್ಟ ಪರಿಣಾಮ ದೇಶದಲ್ಲಿ ತಲೆದೋರುತ್ತದೆ. ಅದೇನೆಂದರೆ ಮುಂದುವರಿದವರೇ ಬುದ್ಧಿವಂತರು, ಅವರೇ ಆಡಳಿತಕ್ಕೆ ಲಾಯಕ್ಕಾದವರು, ಹಿಂದುಳಿದವರೆಲ್ಲಾ ದಡ್ಡರು ಎಂಬ ವಾತಾವರಣ ದೇಶದಲ್ಲಿ ಉಂಟಾಗುತ್ತದೆ. ಅದರ ಪರಿಣಾಮವಾಗಿ ಶ್ರೀ ದೀನದಯಾಳು ನಾಯ್ಡು ಅವರು ಎಚ್ಚರಿಸಿರುವ ಹಾಗೆ ಇನ್ನು ಕೆಲವೇ ವರ್ಷಗಳಲ್ಲಿ ಒಂದೇ ಕೋಮಿನವರು ಎಲ್ಲಾ ಆಡಳಿತದ ಮುಖ್ಯ ಸ್ಥಾನಗಳನ್ನು ಆಕ್ರಮಿಸಿಬಿಡುತ್ತಾರೆ. ಅದರಿಂದ ದೇಶದಲ್ಲಿ ಶಾಂತಿ ಸಮಾಧಾನಗಳಿಗೆ ಧಕ್ಕೆ ಬರುತ್ತದೆ.

(ಶ್ರೀಮತಿ ರುಕ್ಮಿಣಿಯಮ್ಮ)

ಕೋಮುವಾರು ಜಗಳಗಳನ್ನು ನಾವೇ ಕಲ್ಪಿಸಕೂಡದು.

ಸ್ವಾಮಿ, ನಮ್ಮ ಹರಿಜನರ ಮಕ್ಕಳ ವಿಷಯದಲ್ಲಿ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ಹರಿಜನರಲ್ಲಿ ವಿದ್ಯಾಭ್ಯಾಸದ ಚಳುವಳಿ ಸುಮಾರು ಮೂರು ಶತಮಾನಗಳಿಂದ ಇದ್ದರೂ ಅವರ ವಿದ್ಯಾಭ್ಯಾಸದಮಟ್ಟ ಶೇಕಡ ಮೂರಕ್ಕೆ ಮೀರಿಲ್ಲ, ಅದಕ್ಕೆ ಕಾರಣವೇನೆಂಬುದು ಗೊತ್ತಾಗುವುದಿಲ್ಲ. ಸರ್ಕಾರದ ನೀತಿಯೇನೆಂಬುದನ್ನು ತೋರಿಸಿ. ಇದರಿಂದ ಹರಿಜನರಿಗೆ ಬಹಳ ಅನ್ಯಾಯವಾಗಿದೆ. ಹಿಂದಿನ ಸರ್ಕಾರಕ್ಕೆ ನಾವು ಹೊಣೆಯಲ್ಲ ಎನ್ನುತ್ತೀರಿ. ಇಂದಿನ ಸರ್ಕಾರದ ನೂತನ ಯೋಜನೆಗಳೇನು? ಕಾಲೇಜು ವಿದ್ಯಾರ್ಥಿಗಳು ಕಾಲೇಜಿನಿಂದ ವಾಪಸ್ಸು ಬರುವ ವೇಳೆಯಾದರೂ ಅವರಿಗೆ ಸ್ಕಾಲರ್‌ಷಿಪ್ ಇಲ್ಲ. ಅದು ಅವರಿಗೆ ಒಂದು ರೀತಿಯಲ್ಲಿ ಕಾಲಕ್ಕೆ ಸರಿಯಾಗಿ ಒದಗುತ್ತಿಲ್ಲ. ನಮ್ಮ ಮಕ್ಕಳಿಗಾದರೂ ನಿರ್ಬಂಧ ವಿದ್ಯಾಭ್ಯಾಸವನ್ನು ಜಾರಿಗೆ ತರಬೇಕೆಂದು ಪದೇ ಪದೇ ನಾನು ಒತ್ತಿ ಒತ್ತಿ ಹೇಳುತ್ತಲೇ ಇದ್ದೇನೆ.

ಇನ್ನು ಮೈಸೂರಿನಲ್ಲಿ ಒಂದು ಹೆಣ್ಣು ಮಕ್ಕಳ ಬೋರ್ಡಿಂಗ್ ಹೋಂ ಇದೆ. ಅದರಲ್ಲಿ ವಿಧ್ಯಾರ್ಥಿನಿಯರಿಗೆ ಹೆಚ್ಚು ಅವಕಾಶಕೊಡಬೇಕು. ಅವರಿಗೆ ಸರಿಯಾದ ಅನುಕೂಲಗಳನ್ನೆಲ್ಲಾ ಕಲ್ಪಿಸಿಕೊಡಬೇಕೆಂದು ನಾನು ಈ ಸಭೆಗೆ ಮೆಂಬರಾಗಿ ಬಂದಲಾಗಾಯಿತು ಹೇಳುತ್ತಿದ್ದೇನೆ. ಹೇಳಿ ಹೇಳಿ ನನಗೆ ಸಾಕಾಗಿ ಹೋಯಿತು. ರಿಕಾರ್ಡ್ ಆಗುತ್ತಲೇ ಇದೆ. ಅದನ್ನು ಗಮನಿಸಿದವರೇ ಇಲ್ಲ.

ಈಗಲೂ ನಾನು ಕೇಳಿಕೊಳ್ಳುತ್ತೇನೆ. ನಮ್ಮ ಜನಾಂಗವನ್ನು ನಿಜವಾಗಿಯೂ ಎಲ್ಲ ಜನಾಂಗದವರ ಮಟ್ಟಕ್ಕೆ ತರಬೇಕೆಂಬ ನೀತಿ ನಮ್ಮ ಸರ್ಕಾರಕ್ಕೆ ಇದ್ದರೆ ಆಗ ನಮ್ಮ ಮಕ್ಕಳಿಗೆ ಊಟ, ಬಟ್ಟೆ, ವಿದ್ಯಾ ಸಲಕರಣೆಗಳನ್ನು ಕೊಟ್ಟು ಪ್ರೈಮರಿ ಸ್ಕೂಲುಗಳಿಂದ ಹಿಡಿದು ಹೈಸ್ಕೂಲ್ ವ್ಯಾಸಂಗದವರೆಗಾದರೂ ಸಹಾಯ ಕಲ್ಪಿಸಿಕೊಡಬೇಕು. ಈ ಇಲಾಖೆಯಲ್ಲಿ ನಡೆಯತಕ್ಕ ಪರೀಕ್ಷೆಗಳಲ್ಲಿ ನಂಬರ್ ಕೊಡುವಾಗ ಆಗುತ್ತಿರುವ ಮೋಸ, ತುಂಬಾ ಅಪರಾಧ—ಇವುಗಳನ್ನು ಸರ್ಕಾರದವರು ಕೂಡಲೆ ಗಮನಿಸಬೇಕು. ಇಂಥಾ ನಾನಾ ವಿಧವಾದ ಮೋಸಗಳು ಎಲ್ಲೆಲ್ಲೂ ಹರಿಜನರಿಗೇ ಆಗುತ್ತಿವೆ. ಇದರಿಂದ ದೇಶಕ್ಕೆ ಒಳ್ಳೆಯದಲ್ಲ. ಹರಿಜನರ ಹೊಣೆ ಈ ದಿವಸ ನಮ್ಮ ಮೇಲಿದೆ. ಇನ್ನು ಪ್ರಾಥಮಿಕ ವಿದ್ಯಾಭ್ಯಾಸದ ಮಟ್ಟದಲ್ಲಿ ಹರಿಜನರಿಗಾಗಿ ಬೇರೆ ಪ್ರಾಥಮಿಕ ಶಾಲೆಗಳು ಬೇಡ. ಎಲ್ಲಾ ಜನಾಂಗಗಳ ಮಕ್ಕಳೂ ಒಂದೇ ಕಡೆ ವ್ಯಾಸಂಗಮಾಡುವ ಒಂದು ಜನರಲ್ ಪಾಠಶಾಲೆ ಇರಬೇಕು ಎಂಬುದಾಗಿ ಅನೇಕ ಮಾನ್ಯ ಸದಸ್ಯರು ಅಭಿಪ್ರಾಯ ಪಡುತ್ತಾರೆ. ಆದರೆ ಅನೇಕ ಹಳ್ಳಿಗಳ ಕಡೆ ದೇವಸ್ಥಾನಗಳಲ್ಲಿ, ಸವರ್ಣೀಯರ ಚಾವಡಿಗಳಲ್ಲಿ ಪಾಠಶಾಲೆಗಳು ನಡೆಯುತ್ತಿವೆ. ಇಂತಹ ಕಡೆ ಬಡ ಹರಿಜನರ ಮಕ್ಕಳು ಹೋಗಲು ಹೆದರುತ್ತಾರೆ. ಎಲ್ಲೆಲ್ಲಿ ಹರಿಜನರ ಬೀದಿಗಳಲ್ಲಿ ಉತ್ತಮವಾದ ಕಟ್ಟಡಗಳಿವೆಯೋ ಅವುಗಳನ್ನೇ ಜನರಲ್ ಸ್ಕೂಲುಗಳಾಗಿ ಮಾಡುವುದರಲ್ಲಿ ನನ್ನ ಅಭ್ಯಂತರವಿಲ್ಲ. ಎರಡನೆಯದಾಗಿ ಒಂದಕ್ಕಿಂತ ಹೆಚ್ಚು ಉಪಾಧ್ಯಾಯರಿರುವ ಪಾಠಶಾಲೆಗಳಲ್ಲಿ ಸಾಧ್ಯವಾದಮಟ್ಟಿಗೆ ಹರಿಜನ ಕೋಮಿನ ಉಪಾಧ್ಯಾಯರನ್ನು ನೇಮಿಸಲು ಒಂದು ಸರ್ಕಾರೀ ಆಜ್ಞೆಯಾಗಬೇಕು. ಪಠ್ಯಪುಸ್ತಕಗಳನ್ನು ಪ್ರತಿವರ್ಷವೂ ಬದಲಾಯಿಸುವುದರಿಂದ ಬಡ ತಂದೆ ತಾಯಿಗಳಿಗೆ ತುಂಬ ಕಷ್ಟವಾಗುತ್ತದೆ. ಆದ್ದರಿಂದ ಪಠ್ಯಪುಸ್ತಕಗಳನ್ನು ಅನೇಕ ಬಾರಿ ಬದಲಾಯಿಸುವುದನ್ನು ಕಡಮೆ ಮಾಡಬೇಕು. ಇನ್ನು ನಿಮ್ನ ತರಗತಿಯ ಉಪಾಧ್ಯಾಯರಿಗೆ ಹಳ್ಳಿಗಳಲ್ಲಿ ಅವರ ವಾಸಕ್ಕೆ ಮನೆಗಳು ಸಿಕ್ಕದೆ ಬಹಳ ತೊಂದರೆ ಪಡುತ್ತಿದ್ದಾರೆ. ಇದಕ್ಕಾಗಿ ಅವರಿಗೆ ವಸತಿ ಸೌಕರ್ಯಗಳನ್ನೊದಗಿಸಲು ತಕ್ಕ ವ್ಯವಸ್ಥೆ ಮಾಡಬೇಕು. ನಿಮ್ನ ತರಗತಿಯ ವಿದ್ಯಾರ್ಥಿ ನಿಲಯಗಳಿಗೆ ಸಹಾಯ ಧನವನ್ನು ಸರ್ಕಾರದವರು ಈ ವರ್ಷ ಹೆಚ್ಚಿಗೆ ಒದಗಿಸಿದುದಕ್ಕಾಗಿ ನಾನು ವಿದ್ಯಾಮಂತ್ರಿಗಳಿಗೂ, ಇಲಾಖೆಯವರಿಗೂ ಋಣಿಯಾಗಿದ್ದೇನೆ. ಆದರೆ ಪ್ರತಿವರ್ಷವೂ ಇದೇ ರೀತಿ ಗ್ರಾಂಟನ್ನೀಡನ್ನು ಹೆಚ್ಚಿಸಲು ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಪ್ರತಿಯೊಬ್ಬ ಯೋಗ್ಯ ವಿದ್ಯಾರ್ಥಿನಿ ಮತ್ತು ವಿದ್ಯಾರ್ಥಿಗೆ ವಿದ್ಯಾರ್ಥಿವೇತನ ಕೊಡಲು ಕೊನೆಯಪಕ್ಷ ಆರು ಲಕ್ಷ ರೂಪಾಯಿಗಳನ್ನೊದಗಿಸಬೇಕು. ಈಗ ಒದಗಿಸಿರುವ 72 ಸಾವಿರ ರೂಪಾಯಿಗಳು ಏನೇನೂ ಸಾಲವು. ಒಟ್ಟಿನಲ್ಲಿ ಈ ರೀತಿ ಕೊಡತಕ್ಕ ಹಣ ಸಕಾಲದಲ್ಲಿ ಇಲಾಖೆಗಳನ್ನು ತಲುಪಿ ಸದ್ವಿನಿಯೋಗವಾಗಬೇಕು. ಕೊನೆಯದಾಗಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri K. MALLAPPA (Mercara).—I rise to support the motion. In doing so, I wish to speak a few words. The Hon'ble Members yesterday as well as today have spoken at length on various points touching education. Therefore, I confine myself to only one or two points which have not been either dealt with fully or not dealt with at all. My first point is about the deterioration that has set in in the standards of education in our schools. It is a very serious matter and unfortunately we in our desire to expand and plan our educational programmes have not given sufficient thought to this problem. If the causes for this deterioration are not diagnosed and proper remedies are not applied immediately, I am afraid incalculable harm will be done to the cause of education. To my mind there appears to be three causes for this deterioration. One is about the teaching staff. Unfortunately the teaching profession has not attracted better type of people. There are many teachers who are incompetent or inefficient. Something will have to be done in this direction. The present method of recruitment will have to be changed. If necessary, the status and emoluments of the teaching personnel must be improved with a view to attract or induce better type of people

to apply for and take up the profession. Those who hve a flair for teaching or the capacity to handle students properly should be recruited.

The other cause which is attributed to this fall of educational standards in the school is the overcrowding in classes. In an overcrowded class it is impossible to find out who is the dull boy and who is the bright boy. It is necessary that special attention should be paid to dull boys. In an over-crowded class it is impossible to find out such dull boys. The pupil teacher ratio will have to be strictly maintained. I think it would be rather difficult to have more than 45 students and this ratio will have to be maintained if the standard has to be kept up.

The third cause is that we have given too much of importance to public examinations. Many experts on education think that public examinations are not the proper device to assess the attainments of students. On account of this over due importance given to public examinations all sorts of corrupt practices have crept in and students instead of trying to attain and equip themselves with knowledge, will always be on the look out to know what sort of questions will appear and in what manner they have to prepare to answer those questions. Some other device may have to be made. I would suggest that instead of giving too much of importance to public examinations, the authorities concerned will do well to have periodical tests and when assessing finally the attainments of a boy, they will take due consideration of the performance made in the classes. There may be other causes also but as a lay man I have not much experience of having handled educational matters. I earnestly appeal to the authorities concerned that they would take serious notice of this matter and if there are any other causes besides the one that I have narrated, they will try to remove those causes and apply proper remedies.

Without lowering the standards a sense of discipline should be inculcated in the minds of students. I consider that discipline in the schools and colleges may be considerably improved by having better type of teachers. By setting their own example and by giving proper guidance to the students they will be able to bring about a good standard of discipline. I feel that by introducing some extra curricular activities like N.C.C. or A.C.C. discipline can very well be improved. Of course the N.C.C. training is not possible for all classes but A.C.C. is a possibility. In Coorg we tried this A.C.C. movement. Today n that small district there are 9,000 to 10,000 boys and girls who are given A.C.C. training and I do not want to compliment myself but because I am here I must tell what our experience was in that small district.

Sri J. B. MALLARADHYA.— They would not permit scout movement there.

Sri K. MALLAPPA.—There is not much difference between scouting and A.C.C. It has built up character and leadership in the boys and it has done very well. If anybody goes there he will be pleased to find how well behaved those children are. It is made compulsory for all the boys and girls over 12 years of age and everybody has taken it with great enthusiasm. It may be that the Hon'ble Member Sri J. B. Mallaradhya might say that scouting movement should become popular. I am trying to say that A.C.C. is equally good if not better, as an organisation to improve the discipline and character of the students. The Defence authorities are providing the necessary staff for the training of teachers as well as to supervise the training of boys, and very little expenditure is incurred.

About the reforms in education, my friend Sri J. B. Mallaradhya was referring as to why these reforms were introduced without consulting the Legislature. Of course, the Legislature should have been consulted. In Madras a White Paper was issued and after consulting the public opinion they have introduced reforms. Such a thing could have been done. But, we cannot consider that as a serious defect because these reforms were recommended by expert Committees like Lakshmanaswamy Mudaliar Committee,

(SRI K. MALLAPPA)

Radhakrishna Committee and like that.

4-30 P.M.

And these reforms were considered by all the States Ministers. As a result of these deliberations, reforms have been accepted. According to these reforms, primary education is to be made basic, secondary education is to be diversified and college education is to be upgraded to a course of three years. So far as college education is concerned, some appreciable progress has been made, but there is absolutely no progress at all so far as secondary education is concerned. I request the Hon'ble Minister to see that appreciable progress is made in reforming secondary education to make it diversified persuant to the recommendations of the expert committee.

Then about basic education, it is necessary that appropriate action should be taken to see that our primary schools are made basic as early as possible. I should like to say in this connection that in selecting basic crafts for these basic schools, the tendency is to have spinning as the basic craft. Teaching a craft is not improving basic education. As I understand, the purpose of basic education is to see that education is made practicable and when a boy or girl leaves the school, he or she must go back and fit into the society or environment from which he or she has been taken into the school to make him or her prepare for life. That is the purpose of education. Whenever any basic craft is selected for any particular area, it must be seen that that basic craft fits into the environment. For example, in a place like Coorg, where there are no facilities and no conveniences for taking up spinning, what is the use of introducing spinning as a handicraft ?

Sri J. B. MALLARADHYA.—Yours is not a cotton growing area.

Sri K. MALLAPPA.—We are not growing cotton. In that place if spinning is introduced as the basic craft, it will be committing the same mistake; instead of preparing the boy for life, perhaps we will be taking him away from the society to which he belongs. Instead of that agriculture or horticulture would be more welcome. Most of our children leave the school after their middle school education is over. Such boys can go back to their villages and pursue their own occupation without going about knocking for a job. I suggest that wherever basic schools are started, the basic craft should be of that area and spinning should not be forced on the pupils invariably because somebody had suggested that spinning should be cor-related to the education that is given to the boy. If a teacher is an intelligent person, he can cor-relate any craft with teaching. What ever craft is selected, it must fit into environment in which the student has to go and live.

Sir, I have something more to say, but as my time is up, I do not like to inconvenience the other speakers. I thank the Speaker for giving me this opportunity. With these remarks I close.

[Sri MADHAV RAO (Hulsur) spoke in Hindi].

Sri L. S. VENKAJI RAO (Basavangudi).—Mr. Speaker, Sir, while supporting the Demand for Education, I would like to suggest certain matters for the consideration of the Government. I urge that private institutions should be encouraged because the *per capita* expenditure under the management of private institutions is far less than that of the Government. For instance, college education costs nearly 60 per cent more per head to Government when compared to the private institutions. In regard to high schools, I have no doubt whatever that it is cheaper by at least 35 per cent. The present encouragement given by the Government to the private management is, in my opinion, not enough.

Sri J. B. MALLARADHYA.—Grossly inadequate.

Sri L. S. VENKAJI RAO.—It is in the interest of the Government itself because the budgetary position will be far better if Government make up their mind to support private institutions. I am of opinion that there is dual

control over the colleges, *i.e.*, by the University and the Government. For instance, affiliated colleges are under a handicap because by the time they get a grant or budget estimates sanctioned, the colleges will be open and the management will be at a loss to understand as to how much they should spend for the period. There is a lot of delay. Although the University is an autonomous body, it has to depend entirely upon the Government's proposals. It takes time because affiliated colleges and colleges under the direct control of the University send in proposals for consideration and in the meanwhile a lot of other considerations crop in so much so, not only the private colleges but even the Government colleges are working under a handicap. It is not so in the case of high school and primary education. Their position is better. They are directly under the Government. There is the Director and there are the Deputy Directors; Government's attention could be drawn much earlier than in the case of University. This la una is brought to the notice of the Government time and again and I am glad that for the last 1½ years Government have tried their level best to reduce the delay but still in my opinion it is not sufficiently satisfactory and it has not enabled the private colleges to go ahead with the proposals. Here, Sir, to quote an instance, the University Grants Commission have allotted certain sums, still, although we are in the month of March, it has not fructified because there is considerable delay. Another matter which I want to bring to the notice of this Government and the House is we cannot cope up with the Central Government's grant because the expenditure is so huge and the sanction is so enormous that the States, particularly our State in my opinion cannot, and may not, be able to cover even 50 per cent of their part of share.

5 P.M.

As regards the private colleges, I am afraid that their position is now becoming more and more difficult. I am of the view that Government should make up their mind as to whether they should have affiliated and other colleges under their control or they should be administered by the University. Some years ago I had expressed a definite opinion in this matter and that is that the University while having control in regard to curricula, syllabus, examination, etc., the administrative and financial side of it should be handed over to Government and that should be managed by the Director of Collegiate Education. I am told that the Lakshmanaswamy Mudaliar Committee also has expressed the same opinion. If this is not agreeable to the Government, the other course left open to it is to have more universities. That will be democratic and it will also be very easy from the administration point of view. If you take any model Government outside this country, you they will find that there is a university for every 5,000 students. So why not we have one university in Bangalore, another in Mysore, another for the Hyderabad area, another for South Kanara and so on? It will be far easier to manage them and they will be looked after better because the colleges there will be directly under the control of the particular university and the autonomous character of these institutions will also be retained. Government must choose between the two and take an early decision.

Sri V. P. DEENADAYALU NAIDU (Cubbonpet).—Do you think that the administrative expense in this regard will be the same as now?

Sri L. S. VENKAJI RAO.—After all, this department itself is a spending department. We have got to find out the resources for this department to spend. Otherwise we must restrict college education to the best of the students. What are we doing now? We are turning out thousands and thousands of boys from our colleges. This is a very costly education. Government should make up their mind to restrict college education to the best students if they cannot find the necessary resources for all these colleges. They have to take a decision one way or the other. We cannot be indecisive in this matter. If they want to please the population of the country they will have to incur greater and

(SRI L. S. VENKAJI RAO)

greater expenditure and for that we have got to find the necessary means. If it is difficult to find out the means for it, then it is better to restrict this type of education to the best students.

With regard to high school and primary education, I personally feel that our motto should be to bestow greater attention and incur greater expenditure on this. We have also got to encourage nursery and kindergarten schools.

Sri U. M. MADAPPA (Chamarajanagar).—What is the opinion of the member regarding colleges directly under the control of Government ?

Sri L. S. VENKAJI RAO.—I have expressed my view on so many occasions.

Sri C. J. MUCKANNAPPA (Gubbi).—It is deplorable.

Sri L. S. VENKAJI RAO.–Absolutely not. There is a type of dual control. My friend Sri Mallaradhya also has expressed his opinion as a member of the Syndicate. I was also a member of the Syndicate some years ago. He has experience and I also have some experience in the field. Ambition of man is very, very high. It is rather difficult to satisfy the ambitions of each and every man in this regard. In this matter what will come to our rescue is the simplification of the method and procedure towards this and Government should try their level best to work.

Coming to high school and primary education, greater attention should be bestowed on nursery education because that is the base for higher education. We have got to build our superstructure on this basement. So the expenditure towards this should be far higher than what is envisaged in the budget.

Then, Sir, the young children in the schools should be fed in the afternoons and Government must bear that expenditure. There is no escape from it. We are in a position to show that we have improved our lot in other aspects but still we lag behind in this field. If we compare the education given to children at the earlier stages in other countries with that given in our country, we cannot keep our head aloft. Very recently the Central Minister for Education expressed that compulsory primary educaion will be introduced for the children between six to eleven. While doing so he also gave an assurance about food and other facilities to be afforded to the children in the noon. So why not we go ahead of the Central Government? I am for better treatment to be meted out to the students at the elementary stage and so also the teachers. I am not very much bothered about higher education. What are we doing now ? We are actually manufacturing graduates. The students passing out of our colleges are at a loss to understand what they should do and what employment they can get. We have not assured employments to the students coming out of our colleges. We have not bestowed enough thought on technical education and polytechnics. We should certainly do our best to improve facilities for higher technical education. The budget allotment towards that should be much more than what we have now. If we do not do that, we will find in future years that we have an army of educated young men without employment, seeking other avenues for their livelihood. To avoid such a situation, we must plan ahead.

The other question that arises is where are we going to find the means for it. I had no occasion to take part in the budget discussion, Myself but I heard some member saying that the budgetary position of this State is so bad that there will be nothing left by 1961, and that we will have to raise our hands and say good-bye. That is not correct. We have enough resources. Compared to other countries, we are still much lower in certain types of taxation. We will certainly have indirect taxation. Even for direct taxation, there is ample scope.

Sri Y. VEERAPPA.—What do you say about the statement made by the Finance Minister that our financial position in 1960 will be very weak.

Sri L. S. VENKAJI RAO.—Sir, of course, it is my duty when a question is put to answer the same. The

financial position of the State, as it is, is very sound. I can say that it is one of the soundest among the States.

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲ್).—35 ಕೋಟಿ ರೂಪಾಯಿ ಸಾಲ ಇರುವುದನ್ನು ಮರೆತಿದ್ದೀರಾ?

Sri L. S. VENKAJI RAO.—The public debt is Rs. 35 crores. But there is ample scope for direct and indirect taxation.

Sri U. M. MADAPPA.—It is better that the Hon'ble Member confines himself to the Demand.

Sri L. S. VENKAJI RAO.—I need not be told about what I have to speak and not to speak. There is still room for introducing more taxes than at present. What I am now saying is that money collected from the public should be well spent in the interest of the general public. The education that is given to the students must be one such which will enable them to eke out not only their livelihood but to improve the general calibre of the country as such.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ತಾವು ಪ್ರೈವೇಟ್ ಇನ್‌ಸ್ಟಿಟ್ಯೂಷನ್ ನಡೆಸುವವರು ಆ ಬೇಸಿಸ್ ಮೇಲೆ ಏಕೆ ಇನ್‌ಸ್ಟಿಟ್ಯೂಷನ್‌ಗಳನ್ನು ನಡೆಸಬಾರದು ?

ಶ್ರೀ ಎಲ್. ಎಸ್. ವೆಂಕಾಜಿರಾವ್.—ನಡೆಸುತ್ತಾ ಇದ್ದೇವೆ ಎಂದು ಹೇಳುತ್ತೇನೆ. Mr. Mallaradhya has made certain criticisms about the administration. My Hon'ble friend Sri Mallaradhya was himself the Director of Public Instruction. Whatever the lacunae were then, these continue to be even now. It is now being rectified. It is rather difficult for our country to come up to the standard of other countries, because we have gained independence just ten years back. Take for instance other countries which were being quoted as an example, among them—Russia. They have taken nearly 40 years to be what they are. Among the countries of the world, I can say without any fear of contradiction whatever that our country within these ten years has developed so much that it could be an example to other countries to emulate and follow. So far as the Girls' Schools are concerned, I am afraid, there are not enough teachers. There should be better type of recruitment. We have to recruit more. Sir, I personally feel that greater attention must be bestowed upon primary education, nursery education, etc. There is Adult Education. I do not think it is functioning well. That should be taken over by the Government and must be entrusted to the Directorate of Education. I am not against private bodies or local bodies managing it. But still those bodies cannot function better. There again, dual control comes in. It is better to have it directly under the control of the Government.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಪ್ರೈವೇಟ್ ಸಂಸ್ಥೆಗಳು ಚೆನ್ನಾಗಿ ಕೆಲಸಮಾಡುತ್ತವೆ ಎಂದು ಒಂದು ಕಡೆ ಹೇಳುತ್ತೀರಿ, ಇನ್ನೊಂದು ಕಡೆ ಚೆನ್ನಾಗಿ ಕೆಲಸಮಾಡುವುದಿಲ್ಲ ಎಂದು ಹೇಳುತ್ತೀರಿ.

Sri L. S. VENKAJI RAO.—I think my friend has not understood me properly. So far as high school and collegiate education is concerned, that is all right. But so far as adult education is concerned, it could not function properly. That should be clubbed with general routine and it could not be excluded from the original Department. If a trial is given to do so, I think it will be better. I am of opinion that it should be taken over by Government or at least consideration should be given towards that end. Finally I would like to urge upon the Government to see that dual system of control over colleges is removed as early as it is possible and see that the colleges function better from now onwards.

Sri C. M. ARUMUGHAM (Kolar Gold Fields).—I submit this is a very important Demand and we are spending nearly 11 crores of rupees. We would like to know how far we are going to sit?

Mr. DEPUTY SPEAKER.—There will be at reply at 6-30 P.M.

Sri C. M. ARUMUGHAM.—Most of the members are anxious to speak. Time must be extended.

Sri D. DEVARAJ URS (Hunsur).—Many more members on this side are also anxious to speak on this Demand. If the Opposition Members have no objection and if they are willing to sit for a few more hours, we can sit till 8 o'clock.

Mr. DEPUTY SPEAKER.—There is no objection.

ಶ್ರೀಮತಿ ಸಿದ್ದವ್ವ ಮೈಲಾರ್ (ಹಾವೇರಿ).—ಸ್ವಾಮಿ, 1959-60ನೆಯ ಸಾಲಿನ ಡಿಮ್ಯಾಂಡ್‌ಗಳಿಗೆ ಬೆಂಬಲವನ್ನು ಕೊಡುತ್ತ ಕೆಲವೊಂದು ಸೂಚನೆಯನ್ನು ಕೊಡಲು ಇಚ್ಛೆಪಡುತ್ತೇನೆ.

(ಶ್ರೀಮತಿ ಸಿದ್ದವ್ವ ಮೈಲಾರ್)

ಹೊಸ ಮೈಸೂರು ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಕರಲ್ಲಿ ತೀರ ಅಸಮಾಧಾನವುಂಟಾಗಿದೆ. ಇದಕ್ಕೆ ಕಾರಣವೇನೆಂದರೆ ಹಳೆಯ ಮೈಸೂರು ರಾಜ್ಯದಲ್ಲಿ ನಿವೃತ್ತರಾಗುವ ವಯಸ್ಸು ಐವತ್ತೆಂಟು ಮಾಡಲಾಗಿದೆ. ಮುಂಬೈ, ಹೈದರಾಬಾದು ಕರ್ನಾಟಕಗಳಲ್ಲಿ ಅದು ಐವತ್ತೈದು ಇದೆ. ಈ ಅಂತರವನ್ನು ಹೋಗಲಾಡಿಸಿ ಏಕರೂಪತೆಯನ್ನು ತರಬೇಕು. ಅದರಂತೆ ಇತರ ನೌಕರರ ವರ್ಗದಲ್ಲಿ ವಿಶೇಷವಾಗಿ ಮುಂಬೈ ಕರ್ನಾಟಕದಲ್ಲಿ ಸಣ್ಣಪುಟ್ಟ ಆಫೀಸರಲ್ಲಿ ತೀವ್ರ ಅಸಮಾಧಾನವುಂಟಾಗಿದೆ. ಏಕೆಂದರೆ ಅಂತಹ ರಾಜ್ಯದ ಸೀನಿಯಾರಿಟಿ ಪ್ರಶ್ನೆಯು ಬೇಗನೆ ಮುಂದೆ ತಳ್ಳಲಾಗುತ್ತಿರುವುದರಿಂದ ಎಷ್ಟೋ ಜನರಿಗೆ ತಮಗೆ ನ್ಯಾಯವಾಗಿ ಸಿಕ್ಕಬೇಕಾದ ಸಂಬಳ, ಬಡತಿಗಳು ಸಿಕ್ಕದೇ ಇರುವುದರಿಂದ ಅವರಲ್ಲಿ ಒಂದು ಬಗೆಯ ಅಸಂತೋಷ, ನಿರಾಶೆ ಉಂಟಾಗಿದೆ. ಅದೂ ಅಲ್ಲದೆ ಮುಂಬೈ ರಾಜ್ಯದಲ್ಲಿ ಕೆಲವೊಂದು ಬಡತಿ ವಿಷಯಗಳಲ್ಲಿ ತಪ್ಪುಗಳು ಹಾಗೆಯೇ ಉಳಿದು ಬಂದುದರಿಂದ ಅವುಗಳನ್ನು ತೀವ್ರ ಸರಿಪಡಿಸಿದರೆ ಚೆನ್ನಾಗಿ ಆಗುತ್ತದೆ ಮತ್ತು ಅಂತರ ರಾಜ್ಯದ ಸೀನಿಯಾರಿಟಿ ಮುಂದೆ ಮುಂದೆ ತಳ್ಳಿ ಪ್ರದೇಶಿಕ ಸೀನಿಯಾರಿಟಿ ಮೇಲಿಂದ ಬಡತಿ ಕೊಡುವುದು ಕಂಡುಬರುತ್ತದೆ. ಇದರಿಂದ ಅಂತರ ರಾಜ್ಯದ ಸೀನಿಯಾರಿಟಿ ಲಿಸ್ಟಿನಲ್ಲಿ ಅರ್ಹರಾದ ಆಫೀಸರಿಗೆ ಬಡತಿ ಇಲ್ಲದೆ ಅವರು ತೊಳಲಾಡುತ್ತಾರೆ. ಈ ಬಡತಿಗಳು ಅವರ ಸಂಬಳ ಭತ್ತೆಗಳಲ್ಲಿ ಬಹಳ ಅಂತರವಾಗಿ ಹಾನಿಗೆ ಒಳಗಾಗಿದ್ದಾರೆ. ಮುಂಬೈ ಕರ್ನಾಟಕದಲ್ಲಿ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೊಡುವ ಪದ್ಧತಿ ಪರೀಕ್ಷೆಯ ಮೇಲೆ ಅವಲಂಬಿಸಿರುತ್ತದೆ. ಆದರೆ ಹಳೆಯ ಮೈಸೂರು ರಾಜ್ಯದಲ್ಲಿ ಬಡತನ ಮತ್ತು ವಾರ್ಷಿಕ ಪರೀಕ್ಷೆಗಳ ಮೇಲೆ ಅವಲಂಬಿಸಿರುತ್ತದೆ. ಇದರಿಂದ ಮುಂಬೈ ಕರ್ನಾಟಕದಲ್ಲಿ ಹಳೆಯ ಮೈಸೂರು ರಾಜ್ಯದಲ್ಲಿ ಸಿಕ್ಕುವ ಸ್ಕಾಲರ್‌ಷಿಪ್ಸ್ ಪ್ರಮಾಣದ ಮೇಲೆ ನೋಡಿದರೆ ಬಹಳ ಕಡಿಮೆ ಇವೆ. ಈ ವಿಷಯದಲ್ಲಿ ಎಲ್ಲ ರಾಜ್ಯಕ್ಕೂ ಸರಿಹೊಂದುವಂತೆ ಹಂಚಬೇಕು. ಹಳೆಯ ಮೈಸೂರು ರಾಜ್ಯದಲ್ಲಿ ಮಿಡಲ್‌ಸ್ಕೂಲುಗಳಲ್ಲಿ ಪ್ರತಿ ಇಪ್ಪತ್ತೈದು ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕನಿದ್ದರೆ ಮುಂಬೈ ಕರ್ನಾಟಕದಲ್ಲಿ ಪ್ರತಿ ನಲವತ್ತೈದು ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕನಿರುತ್ತಾನೆ. ಇದರಲ್ಲಿ ಏಕರೂಪತೆ ಕಾಣಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಆದ್ದರಿಂದ ಮುಂಬೈ ಕರ್ನಾಟಕದಲ್ಲಿಯೂ ಇನ್ನು ಮುಂದೆ ಪ್ರತಿ ಇಪ್ಪತ್ತೈದು ವಿದ್ಯಾರ್ಥಿಗಳಿಗೊಬ್ಬ ಶಿಕ್ಷಕನನ್ನು ನೇಮಿಸಬೇಕು.

ಇನ್ನು ಬೇಸಿಕ್ ಶಿಕ್ಷಣ ಮತ್ತು ಒತ್ತಾಯ ಶಿಕ್ಷಣ ಮುಂಬೈ ಕರ್ನಾಟಕದಲ್ಲಿ ಒಳ್ಳೆಯ ಅಭಿವೃದ್ಧಿ ಹೊಂದಿದೆ ಎಂಬ ಸಂಗತಿ ಎಲ್ಲರಿಗೂ ತಿಳಿದ ವಿಷಯವಾಗಿದೆ. ಆದರೆ ಇತ್ತೀಚೆಗೆ ಇವುಗಳಿಗೆ ಪ್ರಗತಿ ಮತ್ತು ಪ್ರೋತ್ಸಾಹ ಸಿಗದೆ ಇದ್ದಕಾರಣ ಅವುಗಳ ಅಭಿವೃದ್ಧಿ ಬಹಳ ಕುಂಠಿತ ಅವಸ್ಥೆಯಲ್ಲಿ ಬಂದಿದೆ. ಅವುಗಳಿಗೆ ತಕ್ಕ ಗಮನವನ್ನು ಸರ್ಕಾರದವರು ಕೂಡಲೇ ಕೊಡಬೇಕು.

ಇನ್ನೊಂದು ವಿಷಯವನ್ನು ವಿದ್ಯಾ ಸಚಿವರಲ್ಲಿ ವಿನಂತಿ ಮಾಡಿಕೊಳ್ಳಬೇಕಾಗಿದೆ. ಹಾವೇರಿ ತಾಲ್ಲೂಕಿನ ಎಷ್ಟೋ ಹಳ್ಳಿಗಳಲ್ಲಿ ಎಂಬತ್ತೆರಡು ಹುಡುಗರಿಗೆ ಒಬ್ಬೊಬ್ಬ ಶಿಕ್ಷಕನಿರುವುದರಿಂದ ಅಲ್ಲಿ ವಿದ್ಯಾರ್ಥಿಗಳಿಗೆ ಸರಿಯಾದ ಶಿಕ್ಷಣ ದೊರಕುತ್ತಿಲ್ಲ. ಇದರಂತೆಯೇ ಇತರ ತಾಲ್ಲೂಕುಗಳ ಹಳ್ಳಿಗಳಲ್ಲಿ ಒಳ್ಳೆಯ ಶಿಕ್ಷಕರೂ ಕಮ್ಮಿ ಇರುವುದರಿಂದ ಹಳ್ಳಿಯ ಜನರ ಮಕ್ಕಳಿಗೆ ಸಾಕಷ್ಟು ಸರಿಯಾದ ಶಿಕ್ಷಣ ಸಿಗಲಲ್ಲವೆಂಬ ಅಂಶವನ್ನು ಮಾನ್ಯ ವಿದ್ಯಾ ಸಚಿವರ ಗಮನಕ್ಕೆ ತಂದು ಇನ್ನು ಮುಂದಾದರೂ ಮಾನ್ಯ ಮಂತ್ರಿಗಳು ಗ್ರಾಮಾಂತರ ಪ್ರದೇಶಗಳ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನ ಕೊಟ್ಟು ಪ್ರತಿಯೊಂದು ಗ್ರಾಮದಲ್ಲೂ ಶಾಲಾಕಟ್ಟಡ ಒಳ್ಳೆಯ ಶಿಕ್ಷಕರ ನೇಮಕದ ವ್ಯವಸ್ಥೆಯನ್ನು ಕೂಡ ಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri C. J. MUCKANNAPPA.—Is there any list with you and are you following it?

Mr. DEPUTY SPEAKER.—I am following a list and it is left to my discretion to call upon members to speak. I call upon Sri Arumugham to speak.

Sri C. J. MUCKANNAPPA.—If it is left to your discretion, why should we sit here at all?

Mr. DEPUTY SPEAKER.—The Chair is not bound by the list.

Sri C. M. ARUMUGHAM.—Sir, if you kindly agree it is my suggestion that you may allow Sri Muckannappa to speak because he has been rising since a long time.

Mr. DEPUTY SPEAKER.—I shall give him a chance but I now call upon Sri Kenchappa to speak.

Sri C. M. ARUMUGHAM.—In that case, I shall myself speak since you have called upon me to speak.

Mr. DEPUTY SPEAKER.—Please resume your seat and let Sri Kenchappa speak.

Sri C. J. MUCKANNAPPA.—Can the discretion be used as the Speaker likes?

Mr. DEPUTY SPEAKER.—I do not allow any discussion.

Sri C. J. MUCKANNAPPA.—With all humility I submit......

Mr. DEPUTY SPEAKER.—I do not allow any discussion. Please resume your seat. Is it a point of order? I have called upon Sri Kenchappa to speak.

Sri C. J. MUCKANNAPPA.—I am not coming in the way of Sri Kenchappa. You cannot treat us like this. You are not going to gain anything by this.

Mr. DEPUTY SPEAKER.—You must withdraw those words. That is a reflection on the Chair.

Sri C. J. MUCKANNAPPA.—What is to be withdrawn? With all respect to you I would request the Chair to be not hasty.

Mr. DEPUTY SPEAKER.—You must withdraw.

Sri C. J. MUCKANNAPPA.—What is it that I have to withdraw?

Mr. DEPUTY SPEAKER.—You are saying that the Chair is showing discrimination.

Sri C. J. MUCKANNAPPA.—Why do you presume things?

Mr. DEPUTY SPEAKER.—You must withdraw.

Sri C. J. MUCKANNAPPA.—What is it that I have to withdraw.

Sri H. M. CHANNABASAPPA.—I rise to a point of order, Sir. It is prescribed in the Rules of Procedure that when the Hon'ble Speaker rises, Hon'ble Members should sit down and keep silent.

Sri C. J. MUCKANNAPPA.—We know that rule. It is the duty of every member to respect the Chair. The Chair wanted me to withdraw, but if he is prepared to say what is it that I have to withdraw, then I can withdraw it.

Mr. DEPUTY SPEAKER.—It reflects upon your behaviour.

Sri C. J. MUCKANNAPPA.—Such remarks have to be withdrawn by the Speaker. You are insulting and you are creating a humiliating situation. Instead of that, you should treat us with great respect.

Mr. DEPUTY SPEAKER.—It reflects upon you.

Sri C. J. MUCKANNAPPA.—It is a reflection upon somebody else.

Mr. DEPUTY SPEAKER.—Again, the Hon'ble Member is casting a reflection on the Chair.

Sri C. J. MUCKANNAPPA.—I did not mention the word 'Speaker' or 'Chair'.

Mr. DEPUTY SPEAKER.—If you persist in this attitude, I am again warning you and this will be the last warning.

(*Sri Muckannappa sat down*).

†ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಮಾನ್ಯ ಅಧ್ಯಕ್ಷರೇ, ಈ ಕಹಿ ವಾತಾವರಣದನಂತರ 1959-60ನೆಯ ಸಾಲಿನ ವಿದ್ಯಾಭ್ಯಾಸ ಖಾತೆಯ ಮುಂಗಡ ಡಿಮ್ಯಾಂಡಿನ ವಿಚಾರವಾಗಿ ಮಾತನಾಡಬೇಕೆಂದು ನಾನು ನಿಂತಿರುವಾಗ ಮೈಸೂರು ಸಂಸ್ಥಾನದ ವರಮಾನ ಐವತ್ತೈದು ಕೋಟಿ ಅರವತ್ತೆಂಟು ಲಕ್ಷ ತೊಂಬತ್ತೆಂಟು ಸಾವಿರ ರೂಪಾಯಿಗಳಲ್ಲಿ ಹನ್ನೊಂದು ಕೋಟಿ ಮೂವತ್ತೆರಡು ಲಕ್ಷ ತೊಂಬತ್ತು ಸಾವಿರದ ಏಳುನೂರು ರೂಪಾಯಿಗಳನ್ನು ವಿದ್ಯಾಇಲಾಖೆಗೆ ಮೀಸಲಾಗಿಟ್ಟಿರುವುದು ನಮ್ಮ ವರಮಾನದಲ್ಲಿ 1/5ನೆಯ ಭಾಗವಾಗುತ್ತದೆ. ಆದಕಾರಣ ಅದು ಶೇಕಡ ಇಪ್ಪತ್ತರಷ್ಟು ಆಗುತ್ತದೆ. ಇಷ್ಟು ವರಮಾನದಲ್ಲಿ ಇಷ್ಟು ಮಾತ್ರ ವಿದ್ಯಾಭ್ಯಾಸ ಖಾತೆಗೆ ಖರ್ಚುಮಾಡಿಕೊಂಡಿದ್ದು ನಮ್ಮ ದೇಶದ ವಿದ್ಯಾ ಪ್ರಗತಿಗೆ ಶುಭ ಸೂಚನೆಯಲ್ಲವೆಂದು ನಾನು ಹೇಳುತ್ತೇನೆ. ನನ್ನ ಅಭಿಪ್ರಾಯದಲ್ಲಿ ಇದು ಬಹಳ ಕಡಿಮೆ. ಇದನ್ನು ಇನ್ನೂ ಬಹಳ ಹೆಚ್ಚಿಗೆ ಮಾಡಬೇಕು. ಇಂತಹ ವರಮಾನದಲ್ಲಿ ಇಷ್ಟು ಕಡಮೆ ಖರ್ಚನ್ನು ಮುಂದುವರಿದ ದೇಶದಲ್ಲಿ ಯಾವ ಭಾಗದಲ್ಲೂ ಮಾಡುತ್ತಿಲ್ಲವೆಂದು ನಾನು ಹೇಳುತ್ತೇನೆ. ಮುಂದುವರಿದ ದೇಶಗಳ ಪ್ರಮಾಣಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಕಾಲ ಅತಿಯಾಗುತ್ತದೆ. ಆದ್ದರಿಂದ ನಾನು ಹೇಳುವುದಿಷ್ಟೆ. ನಮ್ಮ ಹಿಂದೂಸ್ಥಾನದ ಕಾನ್ಸ್ಟಿಟ್ಯೂಷನ್ನಿನಲ್ಲಿ ಉಲ್ಲೇಖಿಸಿರುವಂತೆ, ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ನಾವು ಉದ್ದೇಶಪಟ್ಟಿರುವಂತೆ, ನಮ್ಮ ಉದ್ದೇಶ ಸಾಧನೆಗಾಗಿ ಯಾವಯಾವ ಖಾತೆಗೆ ಎಷ್ಟೆಷ್ಟು ಹಣವನ್ನು ಮೀಸಲಾಗಿಟ್ಟರೆ ಈ ಉದ್ದೇಶ ಸಾಧನೆಯಾಗುತ್ತದೆ ಎನ್ನುವ ವಿಚಾರವನ್ನು ಅನೇಕರು ಹೇಳಿದರು. ನಾನು ಆ ಬಗ್ಗೆ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಹಣ ಒದಗಿಸಿದ್ದರಲ್ಲಿ ಎಷ್ಟೆಷ್ಟು ಖರ್ಚುಮಾಡಿದ್ದಾರೆ, ಎಷ್ಟೆಷ್ಟು ಹಣ ಖರ್ಚಾಗಿಲ್ಲ ಎನ್ನುವುದನ್ನು ಹೇಳಿದ್ದ ಚೆನ್ನಾಗಿತ್ತು. ಅದನ್ನು ಒದಗಿಸಲಿಲ್ಲವೆಂದು ದುಃಖದಿಂದ ನಾನು ಹೇಳುತ್ತಿದ್ದೇನೆ. ಇದು ಬಹಳ ಜವಾಬ್ದಾರಿ ಖಾತೆ. ಇದರಿಂದ ದೇಶದ ಪ್ರತಿಯೊಬ್ಬನ ಉತ್ಪಾದನಾ ಶಕ್ತಿ ಅಭಿವೃದ್ಧಿ ಆಗಬೇಕೆಂದಿದೆ. ಇಂತಹ ಸಂದರ್ಭದಲ್ಲಿ ಯಾವ ಯಾವ ಬಾಬಿಗೆ ಎಷ್ಟೆಷ್ಟು ಖರ್ಚುಮಾಡಬೇಕು, ಯಾವ ಯಾವ ಬಾಬಿಗೆ ಎಷ್ಟೆಷ್ಟು ಉಪಯೋಗಮಾಡಬೇಕು, ಕಾಲೇಜುಗಳಲ್ಲಿ ಯಾವ ಯಾವ ನಮೂನೆಯಾದಂಥ ವಿದ್ಯಾಭ್ಯಾಸವನ್ನು ಕಲಿಸಿಕೊಟ್ಟರೆ ಯಾವ ಯಾವ ರೀತಿಯಲ್ಲಿ ದೇಶದ ಉತ್ಪತ್ತಿ ಹೆಚ್ಚು ಮಾಡಬಹುದು ನಿರುದ್ಯೋಗಸಮಸ್ಯೆಯ ಪರಿಹಾರ ಯಾವ ರೀತಿ ಮಾಡಬಹುದು, ಪ್ರತಿಯೊಬ್ಬ ಮನುಷ್ಯನ ಉತ್ಪಾದನಾಶಕ್ತಿ ಹೆಚ್ಚಬೇಕೆಂದು ಮುಂತಾಗಿ ನಿರ್ದಿಷ್ಟವಾದ ತೀರ್ಮಾನಗಳನ್ನು ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಕೊಟ್ಟಿದ್ದರೂ ಕೂಡ ಈ ಆಯವ್ಯಯ ಪಟ್ಟಿಯಲ್ಲಿ ಒಂದು ರೀತಿಯಾಗಿ ಏನೋ ಇಷ್ಟಿಷ್ಟು ಹಣವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆಯೇ ಹೊರತು ಇಷ್ಟಿಷ್ಟು ಭಾಗ ಖರ್ಚು ಮಾಡುತ್ತಿದ್ದೇವೆ ಎಂಬುದು ನಮ್ಮ ಬಡ್ಜೆಟ್ ಮೆಮೊರ್ಯಾಂಡಂನಲ್ಲಿಲ್ಲ. ಇದು ನನಗೆ ಸಮಾಧಾನಕರವಾಗಿಲ್ಲ ಹೋದ ವರ್ಷ ಆಯವ್ಯಯದ ಅಂದಾಜಿನಲ್ಲಿ ಸುಮಾರು ನಲವತ್ತಾರು ಲಕ್ಷ ವಹತ್ತು ಸಾವಿರರೂಪಾಯಿಗಳನ್ನು ಉಳಿತಾಯ ಮಾಡಿಕೊಂಡಿರುವುದಕ್ಕೆ ಯಾರೂ ಈ ಸರ್ಕಾರವನ್ನು ಕ್ಷಮಿಸಲಾರರು ಎಂದು ಹೇಳುತ್ತೇನೆ. ಹೋದವರ್ಷ ಖರ್ಚು ಮಾಡಿದ್ದೇ ಕಡಮೆ, ಹಣವನ್ನು ಸರ್ಕಾರದವರು ಒದಗಿಸಿರುವುದೇ ಕಡಮೆ. ಇದರಲ್ಲಿ ಮತ್ತೆ ಆ ಹಣವನ್ನು ಉಳಿಸಿ

(ಶ್ರೀ ಕೆ. ಕೆಂಚಪ್ಪ)

ಕೊಂಡು ದೇಶಾಭಿವೃದ್ಧಿ ಕಾರ್ಯಗಳಿಗೆ ಮೀಸಲಿಟ್ಟಿರುವುದನ್ನು, ಮತ್ತೆ ಆ ಹಣವನ್ನು ಖರ್ಚು ಮಾಡುವ ಬಗ್ಗೆ ಮುಂದಕ್ಕೆ ಯೋಚನೆ ಮಾಡುತ್ತೇವೆಂದು ಹೇಳಿರುವುದನ್ನು ನೋಡಿದರೆ, ದಕ್ಷತೆ ಅಭಾವ ನಮ್ಮಲ್ಲಿ ತುಂಬ ಕಂಡುಬರುತ್ತಿದೆ. ದೇಶದ ಪ್ರಗತಿಗೆ ಮೂಲವಾಗಿರತಕ್ಕ ಇಂತಹ ಖಾತೆಯ ವಿಚಾರಗಳನ್ನು ಹೀಗೆ ಮಾಡಬಾರದಾಗಿತ್ತೆಂದು ನಾನು ಹೇಳುತ್ತೇನೆ.

5-30 P.M.

ಏಕೆಂದರೆ ನನಗೆ ಈ ವಿಚಾರಗಳನ್ನು ಹೇಳುತ್ತಿರುವಾಗ ಅಷ್ಟೊಂದು ಸಂತೋಷ ಉಂಟಾಗಿ ಈ ರೀತಿ ಹೇಳುತ್ತಿದ್ದಾನೆಂದು ತಾವುಗಳಾರೂ ಭಾವಿಸಬಾರದು. ಇಷ್ಟೊಂದು ಲೋಪದೋಷಗಳನ್ನು ಹೇಳುವುದರಿಂದ ನನಗೇನೂ ಸಂತೋಷವಾಗುವುದಿಲ್ಲ. ಈ ವಿಚಾರದಲ್ಲಿ ಸರ್ಕಾರದವರು ಯಾವ ರೀತಿ ವರ್ತಿಸಬೇಕಾಗಿತ್ತೋ ಆ ರೀತಿ ವರ್ತಿಸುತ್ತಿಲ್ಲ. ಈ ದಿವಸ ನೀವು ವರ್ತನೆ ಮಾಡುತ್ತಿರುವ ರೀತಿಯಲ್ಲೇ ಮುಂದಕ್ಕೂ ನಡೆದುಕೊಂಡ ಪಕ್ಷದಲ್ಲಿ ದೇಶದ ಪ್ರಗತಿ ಮತ್ತು ಜನತೆಯ ಅಭಿವೃದ್ಧಿ ಕುಂಠಿತವಾಗುತ್ತದೆ. ಆದುದರಿಂದ ದೇಶದ ಕಲ್ಯಾಣಕ್ಕಾಗಿ ಮೀಸಲಾಗಿಟ್ಟಂಥ ಮೊಬಲಗನ್ನು ಆಯಾಯ ವರ್ಷದಲ್ಲೇ ಖರ್ಚುಮಾಡಬೇಕಾದುದು ಸರ್ಕಾರದವರ ಆದ್ಯ ಕರ್ತವ್ಯವಾಗಿರುತ್ತೆಂದು ಹೇಳುತ್ತೇನೆ. ಇನ್ನು ಮುಂದಕ್ಕಾದರೂ ಈ ರೀತಿ ಖಂಡಿತ ಮಾಡಬಾರದೆಂದು ಹೇಳುತ್ತೇನೆ. ಈ ದಿವಸ ನಮ್ಮ ದೇಶದಲ್ಲಿ ಇಷ್ಟೊಂದು ವನಸಂಪತ್ತಿದೆ. ಆದರೆ ಇದರ ಅಭಿವೃದ್ಧಿಗೆ ಸಂಬಂಧಪಟ್ಟ ಒಂದು ಕಾಲೇಜೂ ಸಹ ಇಲ್ಲ. ಈ ಭಾಗದಲ್ಲಿ ಏನಾದರೂ ಒಂದು ರಿಸರ್ಚ್ ಇನ್ಸ್ಟಿಟ್ಯೂಟ್ ಮಾಡಿ, ಇನ್ವೆಸ್ಟಿಗೇಷನ್ ನಡೆಸಿ ಅರಣ್ಯಗಳನ್ನು ಅಭಿವೃದ್ಧಿಗೆ ತಂದು ಅದರಿಂದ ದೇಶಕ್ಕೊಂದು ಹೆಚ್ಚಿನ ಉತ್ಪತ್ತಿ ಬರುವಂತೆ ಮಾಡುತ್ತೇವೆಂಬ ಬಗ್ಗೆ ತಾವು ಎಲ್ಲೂ ಒಂದಕ್ಷರವನ್ನೂ ಸಹ ಹೇಳಿರುವುದಿಲ್ಲ. ಇನ್ನು ನಮ್ಮ ಹಿಂದೂಸ್ಥಾನ ಇಂಡಿಜಿನೆಸ್ ಮೆಡಿಸಿನ್‌ಗಳು ಎಂದರೆ, ನಮ್ಮ ದೇಶೀಯ ಔಷಧಿಗಳಿಗೆ ಹೆಸರಾದಂಥ ದೇಶ. ನಮ್ಮ ದೇಶದಲ್ಲಿ ಬೇಕಾದಷ್ಟು ಔಷಧಿಗೆ ಉಪಯೋಗವಾಗತಕ್ಕಂಥ ಗಿಡಮೂಲಿಕೆಯ ಬಳ್ಳಿಗಳೂ ಗಿಡಗಳೂ ವನಸ್ಪತಿಗಳೂ ಇವೆ. ಅದಕ್ಕೆ ಅಗತ್ಯವಾದಂಥ ಸಾಹಿತ್ಯಕೂಡ ನಮ್ಮಲ್ಲಿದೆ. ಇದರ ಬಗ್ಗೆ ಕೂಡ ಇನ್ವೆಸ್ಟಿಗೇಷನ್ ನಡೆಸಲು ಒಂದು ರಿಸರ್ಚ್ ಇನ್ಸ್ಟಿಟ್ಯೂಟಿಲ್ಲ. ಯಾವ ಯಾವ ಗಿಡದಲ್ಲಿ ಏನೇನು ಗುಣವಿದೆ; ಯಾವ ಯಾವ ಗಿಡಗಳು ಏನೇನು ಔಷಧಿಗೆ ಬರುತ್ತವೆ ಎಂಬುದನ್ನು ಕಂಡುಹಿಡಿಯತಕ್ಕ ಬಗ್ಗೆ ಇಲ್ಲಿಯವರೆಗೂ ಒಂದು ಸರಿಯಾದ ವ್ಯವಸ್ಥೆಯನ್ನು ಮಾಡಿರುವುದಿಲ್ಲ. ಯಾವುದೋ ಒಂದು ಹಿಂದಿನ ಕಾಲದಿಂದಲೂ ನಡೆದುಕೊಂಡು ಬರುತ್ತಿರುವಂಥ ಓಬಿರಾಯನ ಪದ್ಧತಿಯನ್ನೇ ಈಗಲೂ ಮುಂದುವರಿಸಿಕೊಂಡು ಬರುತ್ತಿದ್ದೀರಿ. ಆದರೆ ಈ ವಿಚಾರವನ್ನು ಈಗಾಗಲೇ ಅನೇಕರು ಹೇಳಿದ್ದಾರೆ. ಆದುದರಿಂದ ನಾನು ಒಬ್ಬರು ಹಾಡಿದ್ದನ್ನೇ ಪುನಃ ಹಾಡಲು ನನಗೆ ಮನಸ್ಸಿಲ್ಲ. ಆದರೆ ನಮ್ಮ ದೇಶದಲ್ಲಿ ಅರಣ್ಯ ಸಂಪತ್ತು ವಿಶೇಷವಾಗಿದೆ. ನಮ್ಮ ದೇಶದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ದೊರೆಯುವಂಥ ಬೊಂಬುಗಳೂ ಗಳುಗಳೂ ಇನ್ನಾವ ದೇಶದಲ್ಲಾದರೂ ದೊರೆಯುವ ಹಾಗಿದ್ದರೆ ಅವರು ಎಂಥೆಂಥಾ ದೊಡ್ಡ ಕಾರ್ಖಾನೆಗಳನ್ನು ಸ್ಥಾಪಿಸುತ್ತಿದ್ದರೋ. ಹಾಗೆ ದೊಡ್ಡ ದೊಡ್ಡ ಕಾಗದದ ಕಾರ್ಖಾನೆಗಳನ್ನು ಸ್ಥಾಪಿಸಿ ವಿಶೇಷವಾಗಿ ಕಾಗದವನ್ನು ತಯಾರಿಸಿ, ಬೇರೆ ದೇಶಗಳಿಗೆ ಅದನ್ನು ರವಾನೆಮಾಡಿ ದೇಶದ ವರಮಾನವನ್ನು ಹೆಚ್ಚಿಸಿಕೊಳ್ಳುತ್ತಿದ್ದುದರ ಜೊತೆಗೆ ಆ ದೇಶದ ನಿರುದ್ಯೋಗ ಸಮಸ್ಯೆಯನ್ನೂ ಕೂಡ ಎಷ್ಟೋ ಬಗೆಹರಿಯುವಂತೆ ಮಾಡುತ್ತಿದ್ದರು. ಆದರೆ ಇಲ್ಲಿ ನಮ್ಮ ರಾಜ್ಯದಲ್ಲಿ ಅಂಥಾ ಒಂದು ಅನುಕೂಲವಿದ್ದರೂ ನಮ್ಮ ಸರ್ಕಾರದವರು ಏನೊಂದು ಪ್ರಯತ್ನಗಳನ್ನು ಸಹ ಈ ಹಾದಿಯಲ್ಲಿ ನಡೆಸಿರುವುದಿಲ್ಲ. ಹೀಗೆ ನಮ್ಮ ದೇಶದಲ್ಲಿ ಪ್ರಕೃತಿದತ್ತವಾದ ಅನೇಕ ವಸ್ತುಗಳು ಎಷ್ಟೋ ಇದ್ದಾಗ್ಯೂ ಅವುಗಳನ್ನು ಯಾವ ರೀತಿ ಉಪಯೋಗ ಮಾಡಬೇಕೆಂಬ ಬಗ್ಗೆ ಯಾವ ಒಂದು ವಿಚಾರವನ್ನಾಗಲಿ ಮಾಡಿಲ್ಲ. ಖನಿಜಗಳ ವಿಚಾರದಲ್ಲಿ ಅವುಗಳ ಸೂಪರ್ ವಿಷನ್ ಮತ್ತು ಆ ಲೈನಿನಲ್ಲಿ ಅಗತ್ಯವಾಗಿ ಬೇಕಾದ ಟೆಕ್ನಿಕಲ್ ನಾಲೆಡ್ಜ್ ಜನರಿಗೆ ಎಷ್ಟಿರಬೇಕೋ ಅಷ್ಟಿನ್ನೂ ಇಲ್ಲ. ಅದನ್ನು ಒದಗಿಸಲು ಸರ್ಕಾರದವರು ಏನೂ ಪ್ರಯತ್ನ ಮಾಡಿಲ್ಲ. ನಮ್ಮ ದೇಶದಲ್ಲಿ ಜನರಿಗೆ ಕಬ್ಬಿಣವನ್ನು ಯಾವ ರೀತಿ ತೆಗೆಯಬೇಕೆಂಬುದನ್ನು ಯಾವ ಪ್ರಮಾಣದಲ್ಲಿ ನಮ್ಮ ದೇಶಕ್ಕೆ ಅಗತ್ಯವಿದೆಯೋ ಆ ಪ್ರಮಾಣದಲ್ಲಿ ಕಲಿಸಲು ಯಾವ ಪ್ರಯತ್ನಗಳನ್ನೂ ಮಾಡಿರುವುದಿಲ್ಲ. ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ನಿರುದ್ಯೋಗ ನಿವಾರಣೆಗೋಸ್ಕರವಾಗಿ ಎಷ್ಟೋ ಹಣವನ್ನು ಮೀಸಲಾಗಿಟ್ಟಿದಾರೆಂದು ಹೇಳುತ್ತಿದ್ದಾರೆ. ಆದರೆ ಅದನ್ನು ಯಾವರೀತಿ ಖರ್ಚು ಮಾಡಲಾಗುತ್ತದೆ ಯಾವರೀತಿ ನಿರುದ್ಯೋಗ ಸಮಸ್ಯೆಯನ್ನು ತಗ್ಗಿಸಲು ಕಾರ್ಯಕ್ರಮ ಕೈಗೊಳ್ಳಬೇಕೆಂದಿದ್ದಾರೆ ಎನ್ನತಕ್ಕ ಬಗ್ಗೆ ಎಲ್ಲಾದರೂ ಒಂದು ಚಕಾರ ಶಬ್ದವನ್ನೇನಾದರೂ ಹೇಳಿದ್ದಾರೆಯೇ? ಯಾವ ಯಾವ ವರ್ಗದಲ್ಲಿ ಎಷ್ಟೆಷ್ಟು ನಿರುದ್ಯೋಗಿಗಳಿದ್ದಾರೆಂಬುದನ್ನಾದರೂ ಕಂಡುಹಿಡಿಯುವುದಕ್ಕಾದರೂ ಪ್ರಯತ್ನ ಮಾಡಿದ್ದೀರಾ? ವಿದ್ಯಾವಂತರಲ್ಲಿ ಎಷ್ಟು ಜನ ನಿರುದ್ಯೋಗಿಗಳಿಗೆ ಈ ದಿವಸ ಉದ್ಯೋಗ ದೊರೆಕಿಸಲು ನೀವು ಯಾವ ಮಾರ್ಗ ಮಾಡಿದ್ದೀರಿ! ಏನೋ ಅಲ್ಲೊಂದು ಇಷ್ಟು ಇಲ್ಲೊಂದಿಷ್ಟು ಮಾಡಿರಬಹುದು. ಆದರೆ ಎಕ್ಸ್‌ಪ್ಲನೇಟರಿ ನೋಟಿನಲ್ಲಿ ಹೀಗೀಗೆ ಮಾಡುತ್ತೇವೆಂಬುದರ ಬಗ್ಗೆ ಯಾವ ಒಂದು ಸೂಚನೆಯನ್ನೂ ಕೊಟ್ಟಿಲ್ಲ. ಆ ಮೊಬಲಗನ್ನೆಲ್ಲಾ ನೀವು ಯಾವ ರೀತಿ ಉಪಯೋಗ ಮಾಡುತ್ತೀರಿ: ಈ ವರ್ಷದಲ್ಲಿ ಎಷ್ಟು ಜನ ನಿರುದ್ಯೋಗಿಗಳಿಗೆ ಉದ್ಯೋಗಗಳನ್ನೊದಗಿಸುತ್ತೀರಿ ಎನ್ನುವ ವಿಷಯಗಳೊಂದನ್ನೂ ಹೇಳಿಲ್ಲ. ಎಲ್ಲಾ ಮುಗುಂಮಿನಲ್ಲಿದೆ. ನಾನು ಹಿಂದೆ ಹೇಳಿರುವಂತೆ ಈಗಲೂ ಪುನಃ ಅದನ್ನೇ ಹೇಳಬೇಕಾಗಿದೆ. ನೀವು ಹೀಗೆ ಕುರುಡರಂತೆ ಮುಂದುವರಿಯಲು ಹೋಗುತ್ತಿದ್ದರೆ, ಎಲ್ಲಿಯತನಕ ನೀವು ಹೀಗೆ ಕುರುಡರಂತೆ ಮುಂದುವರಿಯಬೇಕೆಂದಿರುತ್ತೀರೋ ಅಲ್ಲಿಯವರೆಗೂ ದೇಶಕ್ಕೆ ಅನಾಹುತಗಳು ತಪ್ಪಿದ್ದಲ್ಲ ಎನ್ನುವುದನ್ನು ನಾನು ಖಚಿತವಾಗಿ ಸಾರಿ ಸಾರಿ ಹೇಳುತ್ತೇನೆ. ನೀವು ಇದನ್ನು ಒಂದು ಕಡೆ ಬರೆದಿಡಿ. ನೀವು ಯಾವ ಒಂದು ವಿಚಾರದಲ್ಲಾಗಲಿ ಯಾವುದೊಂದು ಅಂಶವನ್ನೂ ಖಚಿತವಾಗಿ ಹೇಳದೆ ಎಲ್ಲವನ್ನೂ ಮುಗುಂಮಿನಲ್ಲಿಟ್ಟು ಕಡೆಗೆ ನಾವೇನು ಮಾಡೋಣ ಆ ಹಣವೆಲ್ಲ ಲ್ಯಾಪ್ಸಾಯಿತು ಎಂದು ಕಡೆಗೊಂದು ಹಳೆಯರಾಗ ಹಾಡಿಬಿಡುತ್ತೀರಿ. ಇದು ಖಂಡಿತ ನ್ಯಾಯವಾದದ್ದಲ್ಲ, ಸರಿಯಾದ್ದಲ್ಲ. ಈ ದಿವಸ ನಮ್ಮ ರಾಜ್ಯದಲ್ಲಿ ನಮಗೆ ಸಾಕಷ್ಟು ಟೆಕ್ನಿಕಲ್ ಕಾಲೇಜುಗಳಿಲ್ಲ. ಟೆಕ್ನಿಕಲ್ ಟೀಚರ್‌ಗಳ ಅಭಾವ ಜಾಸ್ತಿ ಆಗುತ್ತಿದೆ. ನೀವು ಎಷ್ಟು ಟೆಕ್ನಿಕಲ್ ಕಾಲೇಜುಗಳನ್ನು ತೆರೆದರೆ ದೇಶಕ್ಕೆ ಅಷ್ಟೂ ಒಳ್ಳೆಯದು. ಇಂಥ ಕಾರ್ಯವನ್ನೂ ಕೂಡ ನೀವು ಮಾಡಿಲ್ಲ. ನಮ್ಮ ದೇಶಕ್ಕೆ ಯಾವ ಪ್ರಮಾಣದಲ್ಲಿ ಈ

ಟೆಕ್ನಿಕಲ್ ಕಾಲೇಜುಗಳಿರಬೇಕೋ ಆ ಪ್ರಮಾಣದಲ್ಲಿಲ್ಲ ಈಗ. ಎಷ್ಟು ಆಸ್ಪತ್ರೆಗಳಿರಬೇಕೋ ಅಷ್ಟು ಆಸ್ಪತ್ರೆಗಳಿಲ್ಲ. ಕಾರಣವೇನು? ಟೆಕ್ನಿಕಲ್ ಪೀಪಲ್-ಆ ಡಾಕ್ಟರುಗಳಿಲ್ಲ. ಈ ದಿವಸ ಎಷ್ಟೋ ಆಸ್ಪತ್ರೆಗಳಲ್ಲಿ ಡಾಕ್ಟರುಗಳೇ ಇಲ್ಲ. ಆದರೂ ಕೆಲವರು ಉದ್ಯೋಗ ದೊರೆಯದೇನೋ ಅಥವಾ ಸಂಬಳ ಸಾರಿಗೆಗಳು ಕಡಮೆಯಂತಲೋ ಏನೋ ಬೀದಿಗಳಲ್ಲಿ ಅಲೆದಾಡುತ್ತಿರಬಹುದು. ಆದರೆ ನಾವು ಜನರಿಗೆ ಕೊಡಬೇಕಾದ ವಿದ್ಯೆ ಕೊಡೋಣ. ಅವರು ಬೇರೆ ರಾಜ್ಯಗಳಲ್ಲಾದರೂ ಹೋಗಿ ಎಲ್ಲಿ ಹೆಚ್ಚಿನ ಸಂಬಳ ಸಾರಿಗೆಗಳು ದೊರೆಯುತ್ತವೋ ಅಲ್ಲಾದರೂ ಅವರ ಜೀವನೋಪಾಯವನ್ನು ನಡೆಸಿಕೊಳ್ಳಲಿ. ಈ ಹಿಂದೆ ಸಹ ನಮ್ಮ ಮೈಸೂರಿನವರು ಹೊರಗಡೆ ಹೋಗಿ ತಮ್ಮ ಜೀವನ ನಡೆಸಿಕೊಂಡಿದ್ದೊಂದೇ ಅಲ್ಲದೆ ನಮ್ಮ ರಾಜ್ಯಕ್ಕೂ ಸಹ ಕೀರ್ತಿಬರುವಂತೆ ಕೆಲಸ ಮಾಡಿರುತ್ತಾರೆ. ನೀವು ನಿಮ್ಮ ಈಗಿನ ಪಾಲಸಿಯನ್ನು ಬದಲಾಯಿಸಿಕೊಳ್ಳದಿದ್ದರೆ ನಿಮಗಿದರಿಂದ ಬಹಳ ತೊಂದರೆ ಆಗುತ್ತದೆ. ಇಂಗ್ಲೆಂಡ್ ದೇಶದಲ್ಲಿ ಜನರ ನಿರುದ್ಯೋಗ ನಿವಾರಣೆಯ ಬಗ್ಗೆ ಅವರಿಗೆ ವಿದ್ಯೆ ಕಲಿಸಿ ಅವರು ಹೊರಗಡೆ ಹೋಗಿ ಜೀವನ ನಡೆಸಿಕೊಳ್ಳಲು ಅನುಕೂಲವಾಗತಕ್ಕಂಥ ಒಂದು ವ್ಯವಸ್ಥೆ ಮಾಡಿದ್ದಾರೆ. ಈ ದಿವಸ ನಮ್ಮ ಸರಕಾರದವರು ಇಲ್ಲಿ ಮಧ್ಯಮ ತರಗತಿಯವರಿಗೆ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಿಗೆ ಅಡ್ಮಿಷನ್ ದೊರೆಕಿಸಿ ಕೊಡುತ್ತಿರುವ ವಿಚಾರ ನೋಡಿದರೆ ಬಹಳ ನಾಚಿಕೆಗೇಡಾಗಿದೆ. ಈ ವಿಚಾರದಲ್ಲಿ ನಾನು ಸರ್ಕಾರಕ್ಕೆ ಹಿಂದೆ ಒಂದು ಕಾಗದ ಕೂಡ ಬರೆದಿದ್ದೆ. ಅದಕ್ಕೆ ಸರಿಯಾದ ಜವಾಬ್ ಬರಲಿಲ್ಲ. ಆಗ ನಾನೇ ಆ ಕಾಲೇಜಿಗೆ ಹೋಗಿ ನನಗೆ ನೀವು ಅಡ್ಮಿಷನ್ ವಿಚಾರದಲ್ಲಿ ನಡೆಸಿರತಕ್ಕ ಕಾಗದಪತ್ರಗಳನ್ನೆಲ್ಲಾ ತೋರಿಸಿ ಅವುಗಳನ್ನು ನಾನು ನೋಡಬೇಕಾಗಿದೆಯೆಂದು ಕೇಳಿದ್ದಕ್ಕೆ ಅಲ್ಲಿಯವರು ನಿಮಗೆ ಸರ್ಕಾರಿ ಕಾಗದಪತ್ರಗಳಲ್ಲಿರತಕ್ಕ ವ್ಯವಹಾರವನ್ನೆಲ್ಲಾ ನೋಡಲು ಅವಕಾಶ ಕೊಡಲಿಕ್ಕಾಗುವುದಿಲ್ಲ, ರೂಲ್ಸು ಒಪ್ಪುವುದಿಲ್ಲ ಎಂದು ಹೇಳಿಬಿಟ್ಟರು. ನಿಮಗೆ ಯಾವ ಬಾಬಿನಲ್ಲಿ ಅನ್ಯಾಯವಾಗಿದೆಯೆಂಬುದನ್ನು ತಿಳಿಸಿ ಅದನ್ನು ನಾವು ಪರಿಶೀಲನೆ ಮಾಡುತ್ತೇವೆಂದು ಹೇಳಿದರು. ಈ ಕೆಲಸಗಳನ್ನೆಲ್ಲ ನ್ಯಾಯವಾದ ರೀತಿಯಲ್ಲಿ ನಡೆಯಿಸುವಂಥಾ ಕಾನೂನುಗಳನ್ನು ನೀವು ಮಾಡಿಲ್ಲ. ನಿಮ್ಮ ಕಾನೂನುಗಳೇ ಸರಿಯಾಗಿಲ್ಲ. ಕಾಲೇಜಿನ ಪ್ರವೇಶಕ್ಕೂ ಕೂಡ ದೇಶಸೇವೆ ಮಾಡಿದವನ ಮಗನಿಗೇ ಮೀಸಲಾಗಿಡಬೇಕು; ಮಲೆನಾಡಿನಲ್ಲಿ ಸೇವೆ ಮಾಡತಕ್ಕವನಿಗೇ ಮೀಸಲಾಗಿಡಬೇಕು...

ಶ್ರೀ ಅಣ್ಣಾರಾವ್ ಗಣಮುಖಿ.—ಇಂಜಿನಿಯರಿಂಗ್ ಕಾಲೇಜಿನ ಬಗ್ಗೆ ಅಂಥ ನಿರ್ಬಂಧಗಳೇನೂ ಇರುವುದಿಲ್ಲವಲ್ಲಾ?

ಶ್ರೀ ಕೆ. ಕೆಂಚಪ್ಪ.—ಈಗ ನಾನು ತಾವು ಅಷ್ಟು ಪ್ರೆಸ್ ಮಾಡುವುದಾದರೆ ಆ ಕಂಡಿಷನ್‌ಗಳೇನೆಂಬುದನ್ನು ಈಗಲೇ ಬೇಕಾದರೂ ಓದಿಬಿಡುತ್ತೇನೆ. ಒಟ್ಟಿನಲ್ಲಿ ಹೇಳುವುದಾದರೆ ಈ ವಿದ್ಯಾಭ್ಯಾಸ ಕ್ರಮದಲ್ಲಿ ಮಧ್ಯಮ ವರ್ಗದ ಜನರಿಗೆ, ಸಾಮಾನ್ಯ ಜನರಿಗೆ ಶಿಕ್ಷಣ ಪಡೆಯಲು ಸರ್ಕಾರದವರು ನಡೆಸುತ್ತಿರುವ ಕಾಲೇಜುಗಳ ನೀತಿ ನೇಮಗಳಲ್ಲಿ ತುಂಬ ದೋಷವಿದೆ.

ಶ್ರೀ ಅಣ್ಣಾರಾವ್ ಗಣಮುಖಿ.—ತಾವು ಈ ವಿಚಾರಗಳನ್ನೆಲ್ಲಾ ಮೆಡಿಕಲ್ ಡಿಮ್ಯಾಂಡ್ ಚರ್ಚೆಗೆ ಬಂದಾಗ ಹೇಳಿದ್ದರೆ ಚೆನ್ನಾಗಿತ್ತು. ಆದರೆ ಈ ವಿಚಾರಗಳನ್ನೆಲ್ಲಾ ಈಗ ಹೇಳಿದರೇನು ಪ್ರಯೋಜನ ?

ಶ್ರೀ ಕೆ. ಕೆಂಚಪ್ಪ.—ದಯಮಾಡಿಟ್ಟು ಕ್ಷಮಿಸಬೇಕು. ನಾನೀಗ ಮೆಡಿಕಲ್ ಇಲಾಖೆಯ ವಿಚಾರವನ್ನು ಪ್ರಸ್ತಾಪ ಮಾಡುತ್ತಿಲ್ಲ. ಸರ್ಕಾರದವರು ಟೆಕ್ನಿಕಲ್ ಎಜುಕೇಷನ್ನನ್ನು ಹರಡತಕ್ಕ ವಿಧಾನದಲ್ಲಿ, ಕ್ರಮದಲ್ಲಿ ಏನೇನು ನೀತಿ ನೇಮಗಳನ್ನು ಅನುಸರಿಸಬೇಕಾಗಿತ್ತೋ ಆ ನೀತಿ ನೇಮಗಳನ್ನು ಅನುಸರಿಸುತ್ತಿಲ್ಲವಾದ್ದರಿಂದ ನಿಮ್ಮ ಈಗಿನ ಕಾಲೇಜಿನ ವಿದ್ಯಾಭ್ಯಾಸ ಕ್ರಮವೇನಿದೆ ಅದು ಸರಿಯಾದ್ದಲ್ಲ, ಅದರಲ್ಲಿ ಲೋಪದೋಷಗಳಿವೆ; ಅವುಗಳನ್ನು ನೀವು ಬೇಗ ಸರಿಪಡಿಸಿಕೊಳ್ಳಬೇಕೆಂಬುದನ್ನೀಗ ನಾನು ಹೇಳುತ್ತಿದ್ದೇನೆ.

ಶ್ರೀ ಅಣ್ಣಾರಾವ್ ಗಣಮುಖಿ.—ಆ ಲೋಪದೋಷಗಳಾವುವು ಹೇಳಿ?

ಶ್ರೀ ಕೆ. ಕೆಂಚಪ್ಪ.—ಈಗ ನನಗೆ ಅವಕಾಶವಿಲ್ಲ. ನನಗೆ ಕೊಟ್ಟಿರುವ ಅವಧಿ ತೀರ ಅಲ್ಪ. ನಾನೇ ನಿಮ್ಮ ರೂಮಿಗೆ ಬರುತ್ತೇನೆ. ಆಗ ಘಂಟೆಗಟ್ಟಲೆ ಹೇಳುವೆನು. ಆದರೆ ಒಟ್ಟಿನಲ್ಲಿ ಇಷ್ಟು ಹೇಳುತ್ತೇನೆ. ನಿಮ್ಮ ವಿದ್ಯಾಭ್ಯಾಸಕ್ರಮ ಸರಿಯಾಗಿಲ್ಲ. ಇದರಲ್ಲಿ ಅನೇಕ ಲೋಪದೋಷಗಳಿವೆಯೆಂದು ನಾನು ಒಂದು ಸಾರ್ತಿಯಲ್ಲ ಸಾವಿರ ಸಾರ್ತಿ ಸಾರಿ ಸಾರಿ ಹೇಳುತ್ತೇನೆ. ನಾನು ತಮ್ಮ ರೂಮಿಗೆ ಬಂದು ತಿಳಿಸುತ್ತೇನೆ. ಅನಂತರ ತಾವು ಏನೇನು ಕ್ರಮ ಕೈಗೊಂಡಿರುತ್ತೀರಿ, ಎಷ್ಟೆಷ್ಟು ಕಾರ್ಯಸಾಧನೆ ಮಾಡಿರುತ್ತೀರೆಂಬುದನ್ನು ಮುಂದೆ ಬರಲಿರುವ ಬಡ್ಜೆಟ್ ಅಧಿವೇಶನ ಕಾಲದಲ್ಲಿ ಅದನ್ನು ನಾನು ಕೇಳುತ್ತೇನೆ. ಆದರೆ ನಾನೀಗ ತಮ್ಮ ಗಮನಕ್ಕೆ ಒಂದು ವಿಚಾರತರಬೇಕಾಗಿದೆ. ಪ್ರೀ-ಯೂನಿವರ್ಸಿಟಿ ಪರೀಕ್ಷೆಯ ಮ್ಯಾಥಮೆಟಿಕ್ಸ್ ಪ್ರಶ್ನೆ ಪತ್ರಿಕೆಯನ್ನು ಸಿಲಬಸ್ಸಿಗೆ ಸೇರದಿದ್ದುದರಿಂದ ಆರಿಸಿ ಕೊಟ್ಟಿದ್ದೀರೆಂಬ ವಿಚಾರದಲ್ಲಿ ಒಂದು ಸ್ಪೆಸಿಫಿಕ್ ಕಾಗದ ಬರೆದಿದ್ದೆ.

ಶ್ರೀ ಅಣ್ಣಾರಾವ್ ಗಣಮುಖಿ.—ಅದನ್ನು ಸಿಂಡಿಕೇಟಿನವರು ಮಾಡಿದ್ದಾರೆ. ಅದಕ್ಕೆ ನಾವೇನು ಮಾಡಬೇಕಿತ್ತು?

ಶ್ರೀ ಕೆ. ಕೆಂಚಪ್ಪ.—ಕೆಲವು ಸರ್ಕಾರಿ ಕಾಲೇಜುಗಳಿವೆ, ಕೆಲವು ಯೂನಿವರ್ಸಿಟಿ ಕಾಲೇಜುಗಳಿವೆ, ಕೆಲವು aided institutions ಇವೆ. ಇವೆಲ್ಲಕ್ಕೂ controlling authority ಸರ್ಕಾರ.

ನಾನು ವಿಶ್ವವಿದ್ಯಾನಿಲಯದ Pre-university Examination ಪೇಪರು ಕಟುವಾಗಿದೆ ಇಂಥಿಂಥ ಪ್ರಶ್ನೆಗಳು ಕಟುವಾಗಿವೆ, ಮುಂದಿನ ವರ್ಷದಿಂದಲಾದರೂ ಇವನ್ನೆಲ್ಲ ಸರಿಪಡಿಸಬೇಕೆಂದು ಮುಖ್ಯಮಂತ್ರಿಗಳಿಗೂ ಮತ್ತು ವಿದ್ಯಾಶಾಖೆಯ ಮಂತ್ರಿಗಳಿಗೂ ಕಾಗದವನ್ನು ಬರೆದಿದ್ದೆ. ಅದಕ್ಕೆ ಅವರು ನನಗೆ ಒಂದು ಕಾಗದವನ್ನು ಬರೆದಿದ್ದಾರೆ. ಅದನ್ನು ಓದಿಬಿಡುತ್ತೇನೆ. ಅದರಿಂದ ನಿಮಗೆಲ್ಲರಿಗೂ ಅರ್ಥವಾಗುತ್ತದೆ.

